(ಸದನದ ಕಲಾಪವು ಮಧ್ಯಾಹ್ನ 2.22 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 3.30ಕ್ಕೆ ಸೇರಲು ನಿಶ್ಚಯಿಸಿತು)

(ಸಭೆಯು ಪುನಃ ಮಧ್ಯಾಹ್ನ 3–40 ಗಂಟೆಗೆ ಸಮಾವೇಶಗೊಂಡಿತು)

(ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿರು)

6. ಶಾಸನ ರಚನೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1) ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಉಪಾಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಬೇಕೆಂದು ನಮ್ಮ ಸರ್ಕಾರ ಈ ವಿಧೇಯಕವನ್ನು ತಂದಿದೆ. ಬಹಳಷ್ಟು ಕೆರೆಗಳು ಕ್ಷೀಣಿಸುವಂಥ ಪರಿಸ್ಥಿತಿ ನಿರ್ಮಾಣವಾಗಿ ನಗರೀಕರಣ, ಕೈಗಾರಿಕಾಕರಣ, ಜನಸಂಖ್ಯಾಸ್ಫೋಟದಿಂದ ಕೆರೆಗಳು ಕೊಳಗಳಂಥ ಜಲಮೂಲಗಳ ಒಡ್ಡುಗಳು ಒಡೆದು ನೀರನ್ನು ಹೊರಬಿಟ್ಟು ಅವುಗಳನ್ನೇ ಕೈಗಾರಿಕಾ ಪ್ರದೇಶಗಳನ್ನಾಗಿ ಭೂಬಳಕೆ ಮಾಡಿ ಪರಿವರ್ತಿಸಲಾಗುತ್ತಿದೆ. ಹೋಗಾಗಿ ಏನಾದರೊಂದು ಕಾನೂನು ತರಬೇಕು, ತರಲಿಲ್ಲವೆಂದರೆ ಮುಂದಿನ ದಿನಮಾನಗಳಲ್ಲಿ ಕೆರೆ ಇತ್ತು ಎಂದು ಕೇವಲ ಫೋಟೋಗಳಲ್ಲಿ ಮಾತ್ರ ನೋಡುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹಾಗಾಗಿ ಸಣ್ಣ ನೀರಾವರಿ ಇಲಾಖೆ ಇರಬಹುದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇರಬಹುದು, ಪುರಸಭೆ, ನಗರದೊಳಗಿರುವಂಥ

ಕೆರೆಗಳಿರಬಹುದು, ಹೀಗೆ ಒಂದು ಕಟ್ಟುನಿಟ್ಟಿನ ಕಾನೂನನ್ನು ತೆಗೆದುಕೊಂಡು ಬಂದು ಎಲ್ಲಾ ಕೆರೆಗಳನ್ನು ಸಂರಕ್ಷಣೆ ಮಾಡುವುದರ ಮೂಲಕ ಮತ್ತು ಅಂತರ್ಜಲದ ಮಟ್ಟದ ಬಹಳಷ್ಟು ಕುಸಿಯುವಂಥ ಪರಿಸ್ಥಿತಿಯಲ್ಲಿದೆ. ರಾಜ್ಯದಲ್ಲಿ ಸುಮಾರು 35 ತಾಲ್ಲೂಕುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಅಂತರ್‌ಜಲ ಕುಸಿದಿದೆ ಎನ್ನುವ ಮಾಹಿತಿ ಇದೆ. ಇದೆಲ್ಲವನ್ನು ಸಂರಕ್ಷಣೆ ಮಾಡಬೇಕಾದರೆ ಈ ಕೆರೆ ಪ್ರಾಧಿಕಾರ ಬಿಲ್ ಅನ್ನು ತರಲೇಬೇಕು, ಅದೂ ಕೂಡ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರು ಮತ್ತು manifesto ನಲ್ಲಿ ಘೋಷಣೆ ಮಾಡಿದ್ದರು. ಕೆರೆ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿ ಇಡೀ ಜನರಿಗೆ ಕೆರೆಯ ಮತ್ತು ಅಂತರ್‌ಜಲದ ಬಗ್ಗೆ ವಿಶೇಷವಾದ ಕಾನೂನು ತರಬೇಕು, ಅದನ್ನು ತರುವುದರ ಮುಖಾಂತರ ಇವತ್ತು ಆ ಕೆರೆಗಳನ್ನು ಸಂರಕ್ಷಣೆ ಮಾಡಬೇಕೆಂದು ನಿರ್ಧಾರವನ್ನು ಮಾಡಿ ಈ ಬಿಲ್ ಅನ್ನು ತಂದಿದ್ದೇವೆ. ಕರ್ನಾಟಕ ರಾಜ್ಯದಲ್ಲಿರುವಂಥ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬಿಡಿಎ ಅದರಲ್ಲಿ ಬರುವಂಥದ್ದನ್ನು ಹೊರತುಪಡಿಸಿ ಇಡೀ ರಾಜ್ಯದಲ್ಲಿರುವಂಥ ಎಲ್ಲಾ ಕೆರೆಗಳನ್ನು ಇದರ ವ್ಯಾಪ್ತಿಯಲ್ಲಿ ತರಬೇಕೆಂದು ಈ ಬಿಲ್ ಅನ್ನು ತಂದಿದ್ದೇವೆ. ಈಗಾಗಲೇ ಪ್ರಾಧಿಕಾರವನ್ನು ಕಾನೂನು ಪ್ರಕಾರ ಯಾವ ರೀತಿ ಮಾಡಬೇಕು, ಪ್ರಾಧಿಕಾರದ ಅಧ್ಯಕ್ಷರು ಸಣ್ಣ ನೀರಾವರಿ ಇಲಾಖೆಯ ಸಚಿವರು ಇರುತ್ತಾರೆ. ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸದಸ್ಯರಾಗಿರುತ್ತಾರೆ. ಅರಣ್ಯ ಇಲಾಖೆ, ಗ್ರಾಮೀಣಾಭಿವೃದ್ಧಿ, ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕೃಷಿ ಇಲಾಖೆ, ಪಶುಸಂಗೋಪನೆ ಇಲಾಖೆ, ಈ ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳನ್ನು, ಅದರ ಜೊತೆಗೆ ಒಬ್ಬರು ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿಗೆ ಸೇರಿದ ವ್ಯಕ್ತಿಗಳು ಹಾಗೂ ಒಬ್ಬರು ಸಾಮಾನ್ಯ ಅಭ್ಯರ್ಥಿ ಹೀಗೆ ಒಟ್ಟು 4 ಅಧಿಕಾರೇತರ ಸದಸ್ಯರನ್ನು ಮಾಡುವುದರ ಜೊತೆಗೆ ಜಿಲ್ಲೆಗಳಲ್ಲಿಯೂ ಕೂಡ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ಜಿಲ್ಲಾಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯವರನ್ನು ಉಪಾಧ್ಯಕ್ಷರಾಗಿ, ಜಿಲ್ಲಾ ಪೊಲೀಸ್ SP ಯವರು

ಸದಸ್ಯರು ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳನ್ನು, ಸಂಬಂಧಪಟ್ಟ ತೋಟಗಾರಿಕೆ ಇಲಾಖೆ, ಅರಣ್ಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಸೇರಿದಂತೆ ಈ ಎಲ್ಲಾ ಇಲಾಖೆಗಳ ಸದಸ್ಯರುಗಳ ಒಳಗೊಂಡಂತೆ ಜಿಲ್ಲೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಅದೇ ರೀತಿ ಕನಿಷ್ಠ 3 ತಿಂಗಳಿಗೊಮ್ಮೆಯಾದರೂ ಸಭೆ ಸೇರುವಂತೆ ಈ Act ನಲ್ಲಿ ತಂದಿದ್ದೇವೆ. ಈಗ ಅಂತರ್‌ಜಲ ಬಹಳಷ್ಟು ಕುಸಿದಿರುವುದನ್ನು ಗಮನಕ್ಕೆ ತೆಗೆದುಕೊಂಡು ಕೆರೆಗಳನ್ನು, ಕೊಳಗಳನ್ನು, ಸರೋವರಗಳನ್ನು ರಕ್ಷಿಸುವ ದೃಷ್ಟಿಕೋನ ಇಟ್ಟುಕೊಂಡು, ಜೀರ್ಣೋದ್ಧಾರ ಮಾಡುವ ದೃಷ್ಟಿಕೋನ ಇಟ್ಟುಕೊಂಡು ಈ ಕೆರೆ ಅಭಿವೃದ್ಧಿ ಪ್ರಾಧಿಕಾರದ ಬಿಲ್ ಅನ್ನು ತಂದಿದ್ದೇವೆ. ಇದರ ಜೊತೆಗೆ ನಾವು ಬಹಳಷ್ಟು ಕೆರೆಗಳ survey ಮಾಡಿದ್ದೇವೆ. ನಮ್ಮ ಇಲಾಖೆಯಲ್ಲಿರುವಂಥ ಕೆರೆಗಳು ಕನಿಷ್ಠ 3622 ಇವೆ. ಅದರಲ್ಲಿ survey ಮಾಡಿ ಈಗಾಗಲೇ ನಾವು 2160 ಕೆರೆಗಳನ್ನು ready ಇಟ್ಟಿದ್ದೇವೆ. Survey ಮಾಡುವ ಅವಶ್ಯಕತೆ ಇರಲಾರದಂಥ ಕೆರೆಗಳು ಅಂದರೆ correct ಆಗಿ ಇದೆ, ಅಲ್ಲಿ ಯಾವುದೇ ರೀತಿಯ ತೊಂದರೆ ಇಲ್ಲ, ಯಾವುದೇ ಒತ್ತುವರಿಯಾಗಿರಲಾರದ ಕೆರೆಗಳು 1222. ತೆರವುಗೊಳಿಸಬೇಕಾಗಿರುವ ಕೆರೆಗಳು 116. ಇವುಗಳನ್ನು ಒತ್ತುವರಿ ತೆರವುಗೊಳಿಸಬೇಕಾಗಿದೆ. ಒತ್ತುವರಿ ತೆರವುಗೊಳಿಸುವ ಜೊತೆಗೆ ಈ ಬಿಲ್‌ನೊಳಗೆ ಸಾಕಷ್ಟು ಅಂಶಗಳನ್ನು ತಂದಿದ್ದೇವೆ. ವಿಶೇಷವಾಗಿ ಕೆರೆ ಒತ್ತುವರಿ ಮಾಡಿದರೆ ಅದಕ್ಕೆ ಏನು ಮಾಡಬೇಕು, ಅವರಿಗೆ ಶಿಕ್ಷೆ ವಿಧಿಸುವಂಥದ್ದು, ಅವರಿಗೆ ಕನಿಷ್ಠ ಶಿಕ್ಷೆ ಕೊಡುವಂಥದ್ದು, ಪೂರ್ಣ ಅಧಿಕಾರವನ್ನು ಪ್ರಾಧಿಕಾರಕ್ಕೆ ನೀಡುವಂಥದ್ದನ್ನು ಅದರ ಜೊತೆಗೆ ಹಿಂದೆ ಈ ನೀರಾವರಿ ಇಲಾಖೆಯೊಳಗೆ ಯಾವ ಕಾನೂನುಗಳೂ ಇರಲಿಲ್ಲ. ಯಾವುದಾದರೂ ಒಂದು ಕೆರೆಯನ್ನು ಒತ್ತುವರಿ ತೆರವುಗೊಳಿಸಬೇಕೆಂದರೆ ನಾವು ನೇರವಾಗಿ ಪೊಲೀಸ್ ಇಲಾಖೆಯನ್ನು, ತಹಶೀಲ್ದಾರರನ್ನು ಡಿ.ಸಿ. ಮುಖಾಂತರವೇ ಕರೆದುಕೊಂಡು ಹೋಗುವಂಥ ಪರಿಸ್ಥಿತಿ ಇತ್ತು. ಆದರೆ, ಈ ಬಿಲ್‌ನೊಳಗೆ ನಮ್ಮ ಇಲಾಖೆಯ ಅಧಿಕಾರಿಗಳೇ ನಿರ್ದಾಕ್ಷಿಣ್ಯವಾಗಿ ಅಲ್ಲಿ ಏನು ಒತ್ತುವರಿಯಾಗಿದೆ, ಆ ಒತ್ತುವರಿ

ಮಾಡಿದಂಥವರಿಗೆ ಕಾನೂನು ಪ್ರಕಾರ ಅವರ ಮೇಲೆ case ಹಾಕತಕ್ಕಂಥದ್ದು, ಅಲ್ಲಿರುವಂಥ ವಾಹನಗಳನ್ನು seize ಮಾಡುವಂಥದ್ದು, ಅದಾದ ಮೇಲೆ ಜಿಲ್ಲಾಧಿಕಾರಿಗಳ ಮುಖಾಂತರ ಅದಕ್ಕೆ ದಂಡವನ್ನು, Magistrate ಮುಖಾಂತರ ದಂಡವನ್ನು ಹಾಕಿಸುವಂಥದ್ದು ಮಾಡಬಹುದಾಗಿದೆ. ಇವತ್ತು ಏನಾಗಿದೆ ಎಂದರೆ, ನಮ್ಮ ಅಧಿಕಾರಿಗಳು ಹೋದರೆ ಒತ್ತುವರಿಯನ್ನು ತೆರವುಗೊಳಿಸುವುದಕ್ಕೆ ಸರಿಯಾದ ರೀತಿಯಲ್ಲಿ response ಗಳು ಆಗುತ್ತಿಲ್ಲ. ಒತ್ತುವರಿ time ನೊಳಗೆ ಕಂದಾಯ ಇಲಾಖೆಯ ಅಧಿಕಾರಿಗಳು ಕೆಲವೊಂದು ಸಮಯದಲ್ಲಿ ಬರುವಂಥ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಹೀಗಾಗಿ ಒತ್ತುವರಿ ಬಗ್ಗೆ ಇಡೀ ರಾಜ್ಯದೊಳಗೆ ಕೆರೆಗಳ ಒತ್ತುವರಿ ಬಗ್ಗೆಯೇ ಚರ್ಚೆಯಾಗುತ್ತಿದೆ. ಅದಕ್ಕೆ ಏನಾದರೊಂದು ಕಾರ್ಯರೂಪಕ್ಕೆ ತರಬೇಕು. ಅದಕ್ಕೆ ಏನಾದರೊಂದು ಕಾನೂನು ಮೂಲಕ ತರುವಂಥ ಕೆಲಸವನ್ನು ಮಾಡಿ ಸರಿಪಡಿಸಲು ಈ ಬಿಲ್ ಅನ್ನು ತಂದಿದ್ದೇವೆ. ಹಾಗೆಯೇ ಇವತ್ತು ಏನಾಗಿದೆ ಎಂದರೆ, ಬಹಳಷ್ಟು ಕೆರೆಗಳಿಗೆ ಸಾಕಷ್ಟು ಘನತ್ಯಾಜ್ಯ ವಸ್ತುಗಳನ್ನು ಬಿಡುವಂಥದ್ದು ಆಗುತ್ತಿದೆ. ಅಲ್ಲಿಗೆ ಕಸಕಡ್ಡಿಗಳನ್ನು ತಂದು ಹಾಕುವಂಥದ್ದು ನಡೆಯುತ್ತಿದೆ. ಅದಕ್ಕೆ ಏನೂ ಪರಿಹಾರ ಸಿಗುತ್ತಿರಲಿಲ್ಲ. ನಮ್ಮ ಅಧಿಕಾರಿಗಳು ಹೋಗಿ ಹೇಳಿದರೂ ಕಂದಾಯ ಇಲಾಖೆಯಿಂದ ಏನೂ response ಇರುತ್ತಿರಲಿಲ್ಲ. ಅದಕ್ಕೋಸ್ಕರ ಇವತ್ತು ಎಷ್ಟೋ ಕೆರೆಗಳು ಹಾಳಾದಂಥ ಉದಾಹರಣೆಗಳು ಇವೆ. ಅದರ ಜೊತೆಗೆ ಕೆರೆಯೊಳಗೆ ಒಂದು ರಸ್ತೆ ಮಾಡಬೇಕಾದರೂ ಯಾರ permission ಇಲ್ಲದೆ ರಸ್ತೆಯನ್ನು ಮಾಡುವಂಥ ಪರಿಸ್ಥಿತಿಯಾಗಿದೆ. ಆದರೆ ಈಗ ಈ ಕಾನೂನು ಬಂದಮೇಲೆ ನಮ್ಮನ್ನು permission ಕೇಳಿ, ಪ್ರಾಧಿಕಾರದಿಂದ permission ಕೇಳಿ ಮಾಡತಕ್ಕಂಥದ್ದು. ಒಂದು ವೇಳೆ ಆ ರೀತಿ ಮಾಡದೆ ರಸ್ತೆ ಮಾಡಿದ್ದರೆ ಅದನ್ನು ತೆರವುಗೊಳಿಸುವಂಥದ್ದು. ಇದೆಲ್ಲದರ ಬಗ್ಗೆ ಈ ಬಿಲ್ ನಲ್ಲಿ ತಂದಿದ್ದೇವೆ. ಸರ್ಕಾರದ ಅನುಮತಿ ಇಲ್ಲದೆ ರಸ್ತೆ ಇರಬಹುದು, ಸೇತುವೆಗಳು ಇರಬಹುದು, ನಮ್ಮ ಇಲಾಖೆಯಿಂದ permission ತೆಗೆದುಕೊಳ್ಳುತ್ತಾರೆ. ಆದರೆ, ಅದನ್ನು ಏನಾದರೂ ಮಾಡುವುದಕ್ಕೆ ಹೋದರೆ ಅದಕ್ಕೆ ಎಲ್ಲೋ ಒಂದು ಕಡೆ ನಮಗೆ ಕೆಲವೊಂದಿಷ್ಟು ಒತ್ತುವರಿ ಪಡಿಸುವಂಥ ಪರಿಸ್ಥಿತಿ ಇತ್ತು. ಅದಕ್ಕೆ

ಇವತ್ತು ಯಾರು ಕೆರೆಯನ್ನು ಒತ್ತುವರಿ ಮಾಡುತ್ತಾರೆ, ಆ ಒತ್ತುವರಿ ಮಾಡುವುದಕ್ಕೆ ಯಾರು ಮುಂದಾಗುತ್ತಾರೆ, ಅದನ್ನು ತೆರವುಗೊಳಿಸುವುದಕ್ಕೆ ಅಧಿಕಾರಿಗಳ ಮುಖಾಂತರ ಅದರ ಜೊತೆಗೆ ಇವತ್ತು ಆ ಕೆರೆ ಒತ್ತುವರಿಗೆ ನಮ್ಮ ಅಧಿಕಾರಿ ಏನಾದರೂ ಸಹಕಾರವನ್ನು ಕೊಟ್ಟರೆ ಅವರ ಮೇಲೆಯೂ case ಹಾಕಿ ದಂಡವನ್ನು ವಸೂಲು ಮಾಡುವಂಥದ್ದು ಈ ಬಿಲ್‌ನೊಳಗೆ ತಂದಿದ್ದೇವೆ. ಅದಕ್ಕೆ ನಾನು ವಿನಂತಿ ಮಾಡುತ್ತೇನೆ. ಬಹಳ ವಿಸ್ತಾರವಾದ ವಿಚಾರಗಳನ್ನು ತಾವೆಲ್ಲ ಗಮನಿಸಿದ್ದೀರೆಂದು ನಾನು ಭಾವಿಸಿದ್ದೇನೆ. ಅದಕ್ಕೆ ಈ ಬಿಲ್ ಅನ್ನು ತಾವು ನನಗೆ pass ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸಣ್ಣ ನಿರಾವರಿ ಸಚಿವರು, ಬೆಂಗಳೂರು ಹೊರತುಪಡಿಸಿ ಈ ಕೆರೆ ಸಂರಕ್ಷಣಾ ಹೊಸ ವಿಧೇಯಕ ತರುತ್ತಿದ್ದೇವೆಂದು ಹೇಳಿದರು. ಇಲ್ಲಿ ಸಣ್ಣ ನೀರಾವರಿ ಸಚಿವರೇ, 2013 ನವೆಂಬರ್ 6ರಂದು, ಬೆಂಗಳೂರು ನಗರದಲ್ಲಿ ಸಣ್ಣ ನೀರಾವರಿ ಇಲಾಖೆಯ 27 ಕೆರೆಗಳಿವೆ, ಆ ಪೈಕಿ 11 ಕೆರೆಗಳಲ್ಲಿ ಭಾರೀ ಪ್ರಮಾಣದ ಒತ್ತುವರಿ ಕಂಡುಬಂದಿದೆ ಎಂದು ಅವರು ತಿಳಿಸಿದ್ದಾರೆಂದು ಹೇಳಿಕೆ ಕೊಡುತ್ತಾರೆ. ಯಾವ ಪುರುಷಾರ್ಥಕ್ಕೆ ತರುತ್ತೀರಿ ಇದನ್ನು? ನಾನು ಕೇಳಲಿಕ್ಕೆ ಬಯಸುತ್ತಿದ್ದೇನೆ. ಇವತ್ತು ಬೆಂಗಳೂರು ನಗರದಲ್ಲಿ ಏನಾಗಿದೆ, ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ತಾವು ಫೋಟೋವನ್ನು ನೋಡಬೇಕು.

ಉಪಾಧ್ಯಕ್ಷರು:– Emotional ಆಗಬೇಡಿ. ಸಲಹೆ ಕೊಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಈ ಕಾನೂನುಗಳನ್ನು ಇವತ್ತು ಇಲ್ಲಿ ತರಬೇಕಾಗಿಲ್ಲ. ಈಗಾಗಲೇ 64 Act ಇದೆ. ಭೂ ಸ್ವಾಧೀನದಲ್ಲಿ ಇದೆ. ಭೂ ಕಂದಾಯ ವಿಧೇಯಕದಲ್ಲಿ 1964 Act ಇದೆ. ಅದರಲ್ಲೂ, 5 ಸಾವಿರ ರೂ., 10 ಸಾವಿರ ರೂ., ದಂಡ ವಿಧಿಸುವುದು, 1 ವರ್ಷದಿಂದ 3 ವರ್ಷ ಜೈಲಿಗೆ ಕಳುಹಿಸತಕ್ಕಂಥ Bill ಈಗಾಗಲೇ ಕಂದಾಯ ಇಲಾಖೆಯಲ್ಲಿದೆ. ಇದನ್ನು ತಂದು ಇವರು ಯಾವ ಕೆರೆಗಳನ್ನು ಸಂರಕ್ಷಣೆ ಮಾಡುತ್ತಾರೆ? ಬೆಂಗಳೂರು

ಕೆರೆಗಳನ್ನು ಹೊರತುಪಡಿಸಿ Bill ಏಕೆ ತಂದಿರಿ? ಇದನ್ನು ನಾನು ಸರ್ಕಾರಕ್ಕೆ ಕೇಳಲಿಕ್ಕೆ ಬಯಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆ ಕೊಟ್ಟರು. ಈ ಭಾಗದಲ್ಲಿ ಕುಳಿತಿದ್ದಾಗ ಹೇಳಿಕೆ ಕೊಟ್ಟಿದ್ದಾರೆ. ಸಿದ್ದರಾಮಯ್ಯನವರು ಇಲ್ಲಿ ವಿರೋಧ ಪಕ್ಷದ ನಾಯಕರಿದ್ದಾಗ ಹೇಳಿಕೆ ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿರತಕ್ಕಂಥ ರಾಜ್ಯದಲ್ಲಿ ಭೂ ಕಬಳಿಕೆ ಆಗಿರತಕ್ಕಂಥದ್ದು ಎಲ್ಲರನ್ನೂ ಒಳಗೆ ಹಾಕತಕ್ಕಂಥ ಕೆಲಸ ಮಾಡುತ್ತೇವೆ ಸರ್ಕಾರ ಬಂದರೆ ಎನ್ನತಕ್ಕಂಥ ಮಾತು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರುವ ಹಲವಾರು ಹೇಳಿಕೆಗಳನ್ನು ಇಲ್ಲಿ ಇಟ್ಟುಕೊಂಡಿದ್ದೇನೆ. ಇವತ್ತು ಬೆಂಗಳೂರಿನಲ್ಲಾಗಿರತಕ್ಕಂಥ ಅನಾಹುತಗಳೇನಿವೆ, ಲಕ್ಷ್ಮಣರಾಯರು ಕೊಟ್ಟಿರುವ ವರದಿ ಇರಬಹುದು, ತಿಮ್ಮಯ್ಯನವರು ಬರೆದಿರುವ ಒಂದು ವರದಿ ಇರಬಹುದು, ಬೆಂಗಳೂರು ನಗರದ ವಿಷಯದಲ್ಲಿ ಕೆರೆಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ನೀವೇ ಬೆಂಗಳೂರಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿರುವುದು 26 ಕೆರೆಗಳಿವೆ ಎಂದು ಹೇಳುತ್ತಿದ್ದೀರಿ. 11 ಕೆರೆ ಭಾರೀ ಒತ್ತುವರಿಯಾಗಿದೆ ಎನ್ನತಕ್ಕಂಥ ಮಾತು ಹೇಳುತ್ತಿದ್ದೀರಿ. ಈ Bill ಅನ್ನು ಇದನ್ನು ಹೊರತುಪಡಿಸಿ ಇಲ್ಲಿ ಏಕೆ ತರುತ್ತಿದ್ದೀರಿ? ಬೆಂಗಳೂರನ್ನು ಲೂಟಿ ಹೊಡೆಯಲಿ ಎಂದು.

ಶ್ರೀ ಬಿ. ರಮಾನಾಥ ರೈ:– ಕುಮಾರಸ್ವಾಮಿಯವರೆ,

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಒಂದು ನಿಮಿಷ ರಮಾನಾಥ ರೈರವರೆ, ಹಳ್ಳಿಗಳಲ್ಲಿ ಯಾವ ಕೆರೆಗೆ. . . .

(ಗೊಂದಲ)

ಉಪಾಧ್ಯಕ್ಷರು:– ರೈರವರೆ, ಅವರು yield ಆಗಿಲ್ಲ.

ಶ್ರೀ ಬಿ. ರಮಾನಾಥ ರೈ (ಅರಣ್ಯ ಸಚಿವರು):– Lake Development Authority ಎಂದು ಇದೆ. ಅದು ನಗರ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಮಾಡುತ್ತದೆ. ಅದಕ್ಕೆ ಒಂದು ತಿದ್ದುಪಡಿಯನ್ನು ನಾವು ತರುತ್ತಿದ್ದೇವೆ. ಅದನ್ನು ನಾವು ಸದನದಲ್ಲಿ ಮಂಡಿಸುತ್ತಿದ್ದೇವೆ. ತಾವೇನು ಹೇಳಿದಿರಿ,

ನಗರಪ್ರದೇಶಗಳಲ್ಲಿರುವಂಥ ಕೆರೆಗಳು, ಅಲ್ಲೇನು ಒತ್ತುವರಿಯಾಗಿದೆ ಅದಕ್ಕೆ ಸಂಬಂಧಪಟ್ಟಹಾಗೆ ಅದಕ್ಕೆ ಕಾನೂನು ಚೌಕಟ್ಟಿನಡಿಯಲ್ಲಿ Lake Development Authority ಯನ್ನು strengthen ಮಾಡತಕ್ಕಂಥದ್ದು ಇದೆ. ಅದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥದ್ದು, ಪರಿಸರ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥದ್ದು, ಅರಣ್ಯ ಮತ್ತು ಪರಿಸರ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ Lake Development Authority ಇದೆ. ಅದಕ್ಕೆ ತಿದ್ದುಪಡಿ ತರತಕ್ಕಂಥ . .. ಬಹುಶಃ ಅದನ್ನು ನಾವು ತರಲಿಕ್ಕಿದ್ದೇವೆ. ಅದಕ್ಕಾಗಿ ನಗರ ವ್ಯಾಪ್ತಿಯನ್ನು ಹೊರತುಪಡಿಸಿ ಕೆರೆ ಪ್ರಾಧಿಕಾರವನ್ನು ತಂದಿದ್ದೇವೆ. ನಾವು, ನಗರದಲ್ಲಿರತಕ್ಕಂಥ ಇಂಥ encroach ಆಗಿರತಕ್ಕಂಥ ಕೆರೆಗಳಿರಬಹುದು, ಅದರಲ್ಲಿ ಸಮಸ್ಯೆಗಳಿರಬಹುದು, ಅದಕ್ಕೆ ಒಂದು ಪೂರಕವಾಗಿ ಅರಣ್ಯಗಳ ರಕ್ಷಣೆ ಮಾಡತಕ್ಕಂಥ ದೃಷ್ಟಿಯಲ್ಲಿ ನಾವು ಒಂದು amendment ಅನ್ನು ತರುತ್ತಿದ್ದೇವೆ. ಅದರಿಂದಾಗಿ, ದಯಮಾಡಿ, ಈ Bill ಅನ್ನು ನಗರ ವ್ಯಾಪ್ತಿ ಹೊರತುಪಡಿಸಿ Bill ಬಗ್ಗೆ ಚರ್ಚೆ ಮಾಡಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಆ ಕೆರೆಗಳು MI ಕೆರೆಗಳು ತಾನೆ? MI ಕೆರೆಗಳನ್ನು ಅವರಿಗೆ ಹೇಗೆ ಕೊಡುತ್ತೀರಿ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಗರ ವ್ಯಾಪ್ತಿ ಹೊರತುಪಡಿಸಿ ಈಗೇನು Bill ತರುತ್ತಿದ್ದಾರೆ, ಇವರು, ಘನತ್ಯಾಜ್ಯ ವಸ್ತುಗಳನ್ನು, ನೀರಿಗೆ ಬಿಡಬಾರದು ಎಂದು ಹೇಳುತ್ತಾರೆ. ಎಷ್ಟು ಹಳ್ಳಿಗಳಲ್ಲಿ ಘನ ತ್ಯಾಜ್ಯ ವಸ್ತುಗಳನ್ನು ಹಳ್ಳಿಯಲ್ಲಿರುವ ಕೆರೆಗಳಿಗೆ, ನೀರಿಗೆ ಬಿಡುತ್ತಾರೆ? ಎಲ್ಲಿಂದ ಬಿಡುತ್ತಾರೆ? ಅಲ್ಲಿ ಯಾವ ಘನತ್ಯಾಜ್ಯ ವಸ್ತುಗಳನ್ನು ತೆಗೆದುಕೊಂಡು ಹಾಕುತ್ತಾರೆ? ನಡೆಯುತ್ತಿರುವುದು ಬೆಂಗಳೂರು ನಗರದಲ್ಲಿ. ನಾನು ಈಗಾಗಲೇ ಹೇಳಿದೆ. ಈಗಾಗಲೇ ಕಂದಾಯ ಇಲಾಖೆಯಲ್ಲಿ 192(ಎ)ನಲ್ಲಿ ಕಾನೂನಿದೆ. ಅಲ್ಲೂ ನೀವು ಆ ಕಾನೂನು ತಂದಿದ್ದೀರಿ. ಇಲ್ಲಿ 20 ಸಾವಿರ ರೂ. ಎಂದು ತಂದಿದ್ದೀರಿ. ಯಾರಾದರೂ ಅಂಥ ಚಟುವಟಿಕೆ ಮಾಡುವವರಿದ್ದರೆ

20 ಸಾವಿರ ರೂ. ದಂಡ, 5 ವರ್ಷ ಜೈಲು ಎಂದು ಹೊಸದಾಗಿ ತಂದಿದ್ದೀರಿ. 1 ವರ್ಷ. ಈಗಾಗಲೇ ಕಂದಾಯ ಇಲಾಖೆಯಲ್ಲಿ ಆ ಕಾನೂನು ಇದೆ. ನೀವು ultimately ನಿಮ್ಮ ಇಲಾಖೆಯಿಂದ action ತೆಗೆದುಕೊಳ್ಳಲಿಕ್ಕೆ ಜಿಲ್ಲಾಧಿಕಾರಿಗಳಿಗೆ ವರದಿ ಕೊಡುತ್ತೇವೆಂದು ಹೇಳುತ್ತೀರಿ. ಮತ್ತೆ ಕಂದಾಯ ಇಲಾಖೆ ಕಾನೂನು ಏನು ಮಾಡುತ್ತೀರಿ? 64ರಲ್ಲಿ ತಂದಿರುವ ಕಂದಾಯ ಇಲಾಖೆಯ ಕಾನೂನನ್ನು ಏನು ಮಾಡುತ್ತೀರಿ? ಇಲ್ಲಿ ಈ ವಿಧೇಯಕವನ್ನು ತಂದಿರುವುದರಿಂದ, ಇಂಥ ವಿಧೇಯಕಗಳನ್ನು ತರುವುದರಿಂದ ಅರ್ಥವೇನು? ಇವತ್ತು ಪ್ರಮುಖವಾಗಿ ಚರ್ಚೆಯಾಗಬೇಕಾಗಿರುವುದು ಬೆಂಗಳೂರು ನಗರದಲ್ಲಿ ಯಾವ Lake Development Authority ಬಗ್ಗೆ ಹೇಳುತ್ತಿದ್ದೀರಿ, ನಾನು ಇಲ್ಲಿ ಎಲ್ಲಾ ತರಿಸಿದ್ದೇನೆ. BAD ಯಿಂದ, BBMP ಯಿಂದ Lake Development Authority ಯಿಂದ ಎಷ್ಟು ಕೋಟಿ ಹಣ ಖರ್ಚು ಮಾಡಿದ್ದಾರೆ, ಯಾವ್ಯಾವ ಕೆರೆಗಳ ಅಭಿವೃದ್ಧಿಗೆ, ಯಾವ್ಯಾವ ಕೆರೆಗಳ fencing ಹಾಕಲಿಕ್ಕೆ ಎನ್ನುವ ಬಗ್ಗೆ ನಾನು ಎಲ್ಲಾ ತರಿಸಿದ್ದೇನೆ, ಇಲ್ಲಿದೆ. ಕಳೆದ 5 ವರ್ಷಗಳಲ್ಲಿ 400 ಕೋ.ರೂ. ಖರ್ಚು ಮಾಡಿದ್ದಾರೆ. ಆ ಕೆರೆಗಳನ್ನು ಈಗ ನಾವು ಹೋಗಿ ಬೆಂಗಳೂರು ನಗರದೊಳಗೆ ಹುಡುಕಬೇಕು. ಕೆರೆಗಳನ್ನು ಹುಡುಕಬೇಕಾಗಿದೆ. ನಮ್ಮ ಜಯನಗರದ ಸದಸ್ಯರಾದ ವಿಜಯಕುಮಾರ್‌ರವರು ಬೆಳಗ್ಗೆ ನನಗೆ ಮಾಹಿತಿ ಕೊಟ್ಟರು. ಇವತ್ತು ಅಲ್ಲಿರತಕ್ಕಂಥ ಹಿರಿಯ ನಾಗರಿಕರುಗಳು ಹೋಗಿ Court ಮುಂದೆ ಹೋಗದೇ ಹೋಗಿದ್ದರೆ, ಇವತ್ತು ಭೈರಸಂದ್ರದಲ್ಲಿ 25 ಎಕರೆ ಬಗ್ಗೆ ಲಕ್ಷ್ಮಣರಾಯರು ವರದಿ ಏನು ಕೊಟ್ಟಿದ್ದಾರೆ, ಈಗ ಅದನ್ನು 15 ಎಕರೆಗೆ ಇಳಿಸಿಕೊಂಡಿದ್ದಾರೆ. ಅದನ್ನೂ ಇಷ್ಟು ಹೊತ್ತಿಗೆ ಮುಂಡಾಯಿಸುತ್ತಿದ್ದರು. ಇಲ್ಲಿ ಯಾವ ಪುರುಷಾರ್ಥಕ್ಕೆ ಇಂಥ ವಿಧೇಯಕಗಳನ್ನು ತರುತ್ತೀರಿ?

ಉಪಾಧ್ಯಕ್ಷರು:– ಈಗ ನಿಮ್ಮ ಸಲಹೆ ಏನು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸಲಹೆ ಏನೆಂದರೆ, ಇವತ್ತು ಈ ಸರ್ಕಾರಕ್ಕೆ ಬದ್ಧತೆ ಏನಾದರೂ ಇದ್ದರೆ, ಈ ಸರ್ಕಾರ ಮೊದಲು ಗ್ರಾಮೀಣ ಪ್ರದೇಶದ್ದು ಇರಲಿ, ಬೆಂಗಳೂರಿನಲ್ಲಿ ನಡೆದಿರತಕ್ಕಂಥ ಕೆರೆ ಒತ್ತುವರಿ ಹೆಸರಿನಲ್ಲಿ

ಭೂ ಕಬಳಿಕೆ ಏನಿದೆ ಇಲ್ಲಿ ಮಂತ್ರಿಗಳು, 11 ಕೆರೆಗಳ ಭಾರೀ ಭೂ ಒತ್ತುವರಿ ಎಂದು ಹೇಳಿಕೆ ಕೊಟ್ಟಿದ್ದಾರೆ. ಅದಕ್ಕೆ ಅವರು ಇಲ್ಲಿ ಸಂರಕ್ಷಣೆ ಮಾಡಲಿಕ್ಕೆ ಈಗ Bill ತರಲಿಕ್ಕೆ ತಯಾರಾಗಿಲ್ಲ. ಈಗ ಹಳ್ಳಿ ಕಡೆ ಹೊರಟಿದ್ದಾರೆ. ಬೆಂಗಳೂರು ನಗರ ಉಳಿಸಿ ಆಯಿತು, ಬೆಂಗಳೂರಿನಲ್ಲಿರುವ ಕೆರೆಗಳನ್ನು ಉಳಿಸಿ ಆಯಿತು, ಕೆಂಪೇಗೌಡರ ಹೆಸರಿನಲ್ಲಿ ಮೊನ್ನೆ ಜಯಂತಿ ಆಚರಣೆ ಮಾಡಿದೆವು, ಮಾನ್ಯ ಮುಖ್ಯಮಂತ್ರಿಯವರು ಅಲ್ಲಿ ಭಾಷಣ ಮಾಡಿದರು. ಕೆಂಪೇಗೌಡರ ಆಡಳಿತ ಯಾವ ರೀತಿ ಇತ್ತು? ಅದೆಲ್ಲವನ್ನೂ ನೀವುಗಳು ಮಹಾನಗರ ಪಾಲಿಕೆಯ ಸದಸ್ಯರುಗಳು ಸ್ವಲ್ಪ ಅರಿತುಕೊಳ್ಳಬೇಕು ಎಂದು ಭಾಷಣ ಮಾಡಿದರು. ಇವತ್ತು ಇಲ್ಲಿ ಈ ಕೆರೆಗಳನ್ನು ರಕ್ಷಣೆ ಮಾಡಲಿಕ್ಕೆ ಸರ್ಕಾರ ಏನು ಮಾಡಿದೆ ಎಂಬ ಬಗ್ಗೆ ಮೊದಲು ಇಲ್ಲಿ ಚರ್ಚೆಯಾಗಬೇಕು. ಅದಕ್ಕೋಸ್ಕರವಾಗಿ ಇವತ್ತು ಇದು ಸುದೀರ್ಘವಾಗಿ ಚರ್ಚೆಯಾಗಬೇಕು.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):– Debate ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– Debate ಮಾಡಲಿಕ್ಕೆ ತಯಾರಾಗಿದ್ದೇನೆ. ಇವತ್ತು ಬೆಂಗಳೂರು ನಗರ ಒಳಗೊಂಡಂತೆ ಇಲ್ಲಿ ಚರ್ಚೆಯಾಗಬೇಕಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್:– ಒಂದು ನಿಮಿಷ. Minister ರವರು ಅವರಿಗೆ ಇರುವಂಥ ಒಂದು knowledgeನಲ್ಲಿ ಗ್ರಾಮೀಣ ಪ್ರದೇಶದ ಕೆರೆಗಳು, city ಯದ್ದು ವ್ಯಾಪ್ತಿ ಬೇರೆ ಎಂದು ತೀರ್ಮಾನ ಮಾಡಿದ್ದಾರೆ. ಗ್ರಾಮೀಣ ಪ್ರದೇಶದ ಕೆರೆಗಳನ್ನು ಉಳಿಸಿಕೊಳ್ಳಬೇಕೆಂದು ಅಧ್ಯಯನ ಮಾಡಿ ಇದನ್ನು Cabinet ಮುಂದೆ ತಂದು ಇವತ್ತು ತಮ್ಮ ಮುಂದೆ ಪರ್ಯಾಲೋಚನೆಗೆ ಇಟ್ಟಿದ್ದಾರೆ. ತಮ್ಮ ಸಲಹೆ ಏನೇನಿದೆ ಅದನ್ನೆಲ್ಲ ಕೊಡಿ. ನೀವೇನೂ out of the way ಏನೂ ಹೋಗುವುದಿಲ್ಲವಲ್ಲ. ಇದನ್ನು ರಕ್ಷಣೆ ಮಾಡಲಿಕ್ಕೇ ತಾವು ಕೊಡುತ್ತೀರಿ. ಕೊಡಿ. Definitely, valuable ಏನೇನಿದೆ ಅದನ್ನೆಲ್ಲ consider ಮಾಡೋಣ. ಇದರಲ್ಲೇನಿದೆ? ತಕಾರಾರೇನಿದೆ? ನಮ್ಮ ನಿಮ್ಮ ಉದ್ದೇಶ, ನಮ್ಮ ಕೆರೆಗಳನ್ನು ನಾವು ಕಾಪಾಡಬೇಕೆಂಬುದಾಗಿದೆ. ಯಾವ encroachment ಇರಬಾರದು. Water body ಹೆಚ್ಚಬೇಕು. Water body ಹೆಚ್ಚಿದಷ್ಟೂ ನಮಗೆಲ್ಲ

ಅನುಕೂಲವಾಗುತ್ತದೆ. You please give your valuable suggestions. Definitely Government is there to answer you and look into it.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸರ್ಕಾರದ ಪರವಾಗಿ ಮಂತ್ರಿಗಳು ಸುದೀರ್ಘವಾಗಿ ಚರ್ಚೆ ಮಾಡೋಣವೆಂದು ಹೇಳಿದರು. ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮ ಅನುಮತಿ ಕೋರುತ್ತೇನೆ. ಇದು ಕೇವಲ ಇವತ್ತು ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ ಏನಿದೆ, ಇದು ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಾಗಬಾರದು.

ಉಪಾಧ್ಯಕ್ಷರು:– ಹೌದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಏತಕ್ಕೆ ಹೇಳುತ್ತೇನೆಂದರೆ, ಕಳೆದ ಬೆಳಗಾವಿ ಅಧಿವೇಶನದಲ್ಲಿ, ಮೊನ್ನೆ ನಡೆದಂಥ ಬಜೆಟ್ ಅಧಿವೇಶನದಲ್ಲಿಯೂ ನಾನು ಈ ಕೆರೆಗಳ ಬಗ್ಗೆ ಬೆಂಗಳೂರು ನಗರದಲ್ಲಿ ಏನು ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವ ಬಗ್ಗೆ ಚರ್ಚೆಯಾಗಬೇಕೆಂದು ಸಮಯ ಕೇಳಿದೆ. ಎರಡೂ ಅಧಿವೇಶನ ಆಗಿಲ್ಲ. ಇವತ್ತು ನಾನು ಬೆಳಗ್ಗೆ ಮಾನ್ಯ ಸಭಾಧ್ಯಕ್ಷರಿಗೆ ಮನವಿ ಮಾಡಿದೆ. ಯಾವ ಕೆರೆ ಅಭಿವೃದ್ಧಿ ಪ್ರಾಧಿಕಾರ ರಚನೆ ವಿಧೇಯಕವನ್ನು ಹೊಸದಾಗಿ ತರುತ್ತಿದ್ದಾರೆ, ಬೆಂಗಳೂರು ನಗರದಲ್ಲಾಗಿರತಕ್ಕಂಥ ಘಟನೆಗಳ ಬಗ್ಗೆಯೂ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಮಾನ್ಯ ಸಭಾಧ್ಯಕ್ಷರನ್ನು ಕೇಳಿದ್ದೇನೆ. ಈಗ ಸರ್ಕಾರ ಇವತ್ತು ನಿಜಕ್ಕೂ ಬೆಂಗಳೂರು ನಗರದಲ್ಲಿ ಪ್ರಮುಖವಾಗಿರತಕ್ಕಂಥ ಕೆರೆಗಳು ಉಳಿಯಬೇಕಾದರೆ, ಈಗಾಗಲೇ ಹಲವಾರು ಕೆರೆಗಳನ್ನು ಮುಗಿಸಿದ್ದಾರೆ, at least ಇರತಕ್ಕಂಥದ್ದನ್ನಾದರೂ ಉಳಿಸಬೇಕೆನ್ನುವುದಾದರೆ ಸುಧೀರ್ಘವಾಗಿ ಚರ್ಚೆಯಾಗಲೇಬೇಕಾಗುತ್ತದೆ.

ಉಪಾಧ್ಯಕ್ಷರು:– ಬೇರೆ ರೂಪದಲ್ಲಿ ತೆಗೆದುಕೊಂಡು. .. .

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಬೇರೆ ರೂಪದಲ್ಲಿ ತರಲಿಕ್ಕೆ ಮತ್ತೆ ಇಲ್ಲಿ ಅವಕಾಶ ಕೊಡುವುದಿಲ್ಲ. ಇನ್ನೂ ಇಲ್ಲಿ 15–20 ಇಲಾಖೆಗಳ ಬಗ್ಗೆ ಚರ್ಚೆಯಾಗಬೇಕು.

ಉಪಾಧ್ಯಕ್ಷರು:- ಈಗ ಇದು ಸೀಮಿತವಾಗಿ ಗ್ರಾಮೀಣ ಪ್ರದೇಶದ ಕೆರೆಗಳ ಬಗ್ಗೆ ಇದೆ.

ಶ್ರೀ ಡಿ.ಕೆ. ಶಿವಕುಮಾರ್:- ಸರ್ಕಾರ ಅವರ ಚಿಂತನೆ ಪರವಾಗಿ ಇದೆ. ನಾವು ಈಗಾಗಲೇ Lake Development Authority .....

ಉಪಾಧ್ಯಕ್ಷರು:- City ಯಲ್ಲಿ ಬಹಳಷ್ಟು encroachment ಆಗಿದೆ.

ಶ್ರೀ ಡಿ.ಕೆ. ಶಿವಕುಮಾರ್:- Lake Development Authority Bill ಏನಿದೆ, ಇದನ್ನು ಈಗಾಗಲೇ ನಮ್ಮ cabinet ನಲ್ಲಿ ಕೂಡ ಈ urban ವಿಚಾರಕ್ಕೆ ಸಂಬಂಧಪಟ್ಟಂತೆ, Law Department ಗೆ ಹೋಗಿದೆ. ಏಕೆಂದರೆ, ಹಿಂದೆ 2-3 Acts ಇವೆ. ಅವರು ಹೇಳಿದಹಾಗೆ ಹಿಂದೆ Revenue Act ಇದೆ, BBMP ಬೇರೆಯವರದೆಲ್ಲ ಇಲ್ಲಿ ಆಗಿ, ಇವರು ಹೇಳಿದಹಾಗೆ, 400-500 ಕೋ.ರೂ. investment ಆಗಿದೆ. ಬೆಂಗಳೂರು ಸುತ್ತಮುತ್ತಲೂ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಸುಮಾರು 12-13 ಕೆರೆಗಳನ್ನು, ದೊಡ್ಡ ದೊಡ್ಡ ಕೆರೆಗಳನ್ನು ತೆಗೆದುಕೊಂಡು ಮಾಡುವಂಥದ್ದು, ಇವೆಲ್ಲ ಇದೆ. ನಾವು, ಸರ್ಕಾರ, ಈ city ಕೆರೆಗೆ separate ಆಗಿ, ಏಕೆಂದರೆ, ಇಲ್ಲಿ ಅನೇಕ ಒತ್ತಡಗಳು, encroachments ಒತ್ತಡ ಜಾಸ್ತಿ ಇದೆ. ಈ ಹಿನ್ನೆಲೆಯಲ್ಲಿ Law Department ನಲ್ಲಿ ಬಹಳ ವ್ಯಾಪಕವಾಗಿ ನೋಡುತ್ತಿದ್ದಾರೆ. Regularization ವಿಚಾರದಲ್ಲಿ ಕೂಡ ಈ ಕೆರೆ ಒತ್ತುವರಿಯನ್ನು ಯಾವ ರೀತಿ ರಕ್ಷಣೆ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನೂ ಬಹಳ ತೀವ್ರವಾಗಿ.. ಯೋಚಿಸುತ್ತಿದ್ದಾರೆ. ಏಕೆಂದರೆ, ಗ್ರಾಮೀಣ ಪ್ರದೇಶಗಳ ಒತ್ತುವರಿಗೂ, ಇಲ್ಲಿ ಒತ್ತುವರಿಗೂ ವ್ಯತ್ಯಾಸವಿದೆ. ಅಲ್ಲೇನೋ ರೈತರು ಜಮೀನು ಒತ್ತುವರಿ ಮಾಡಿಕೊಳ್ಳುತ್ತಿದ್ದರೆ any time ನಾವು ಏನು ಬೇಕಾದರೂ ಮಾಡಬಹುದು. ಇಲ್ಲಿ ಬಿಡಿಸುವುದು ಬಹಳ ಕಷ್ಟವಿದೆ. ಈ ಹಿನ್ನೆಲೆಯಲ್ಲಿ ಕುಮಾಸ್ವಾಮಿಯವರು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ಸರ್ಕಾರ . . . .

ಶ್ರೀ ಹೆಚ್.ಸಿ. ಬಾಲಕೃಷ್ಣ:- ಬಿಡಿಸುವ ಕಷ್ಟವಿದೆ ಎಂದು ದಯಮಾಡಿ ಸರ್ಕಾರ ಹೇಳಬಾರದು. ಬಿಡಿಸುವುದು ಕಷ್ಟವಿದೆ ಎಂದು ಸರ್ಕಾರದಿಂದ ಉತ್ತರ ಬರಬಾರದು. ಬಿಡಿಸಬೇಕು, ಇಚ್ಛಾಶಕ್ತಿ ಇರಬೇಕು.

SRI D.K. SHIVAKUMAR:- That is the commitment.

ಶ್ರೀ ಹೆಚ್.ಸಿ. ಬಾಲಕೃಷ್ಣ:- ದಯಮಾಡಿ, ಕಷ್ಟವಿದೆ ಎಂದು ಹೇಳಬೇಡಿ.

ಶ್ರೀ ಡಿ.ಕೆ. ಶಿವಕುಮಾರ್:- ಕಷ್ಟ ಎಂದರೆ, ಸರ್ಕಾರದ commitment ಸ್ವಾಮಿ. 65 ವರ್ಷಗಳಿಂದ ಆಗದೇ ಇರುವುದನ್ನು ಏನಾದರೂ ಮಾಡಿ ನಾವು ಇದನ್ನು ಉಳಿಸಬೇಕೆಂದು ಮಾಡಿರುವುದು. ಅದಕ್ಕೊಂದು bifurcation, Bangalore city development ಎಂದು ಏಕೆ ಮಾಡುತ್ತೇವೆ? Corporation ಎಂದು ಏಕೆ ಮಾಡುತ್ತೇವೆ? ಇಡೀ ರಾಜ್ಯವನ್ನು ಒಂದು unit ಆಗಿ ತೆಗೆದುಕೊಳ್ಳಬಹುದಲ್ಲ?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- ಈ Act ನಲ್ಲಿ ಬರೀ Bangalore City ಎಂದು ತೋರಿಸಿಲ್ಲ. Except all the urban areas ಎಂದಿದೆ. ಅದು ಏಕೆಂದು ನಾನು ಹೇಳುವಾಗ ಹೇಳುತ್ತೇನೆ. Iwill explain.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಇದರಲ್ಲಿ clear ಇದೆ. Cabinet ನಲ್ಲಿ ಇದರ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದೇವೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮೊದಲು discussion ಆಗಲಿ ನಂತರ ಅವರು ಉತ್ತರ ಕೊಡಲಿ. ಏಕೆಂದರೆ, ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶ ಇಲ್ಲವೆಂದರೆ ಹೇಗೆ? ನೀವು ಆಮೇಲೆ ಮಾತನಾಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲವೆಂದು ಅವರು ಹೇಳಿದರು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಉತ್ತರ ಹೇಳುವಾಗ ಇಚ್ಛಾಶಕ್ತಿಯ ಬಗ್ಗೆ ಹೇಳಿ. ವಿರೋಧ ಪಕ್ಷದವರು ಮಾತನಾಡುವಾಗ ಇಚ್ಛಾಶಕ್ತಿ ಎನ್ನುವ ಪದವನ್ನು ಬಳಸಬೇಕಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇಚ್ಛಾಶಕ್ತಿ ಇದೆಯೋ ಇಲ್ಲವೋ ಎಂದು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ. ರಮಾನಾಥ ರೈ:- ಕ್ಯಾಬಿನೆಟ್‌ನಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಿದ್ದೇವೆ. ಗ್ರಾಮೀಣ ಭಾಗದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರ ತರತಕ್ಕಂಥದ್ದು, ನಗರದಲ್ಲಿ Lake Development Authority ಏನಿದೆ ಅದನ್ನು ಶಕ್ತಿಯುತವಾಗಿ ಮಾಡತಕ್ಕಂಥದ್ದಕ್ಕೆ..

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಬಿಲ್ ಮೇಲೆ ಮೊದಲು ಚರ್ಚೆಯಾಗಲಿ. ನಂತರ ತಾವು ಉತ್ತರ ಹೇಳಲಿ.

ಶ್ರೀ ಬಿ. ರಮಾನಾಥ ರೈ:- ಕುಮಾರಸ್ವಾಮಿಯವರು ಮಾತನಾಡುವಾಗ ಹೇಳಿದರು.

(ಗೊಂದಲ)

ಉಪಾಧ್ಯಕ್ಷರು:- ಕಾರುಜೋಳರವರೆ ಕುಮಾರಸ್ವಾಮಿಯವರು ಮಾತನಾಡಲಿ.

ಶ್ರೀ ಗೋವಿಂದ ಎಂ. ಕಾರಜೋಳ:- ನಾವೇನು ಕಾಮೆಂಟ್ ಮಾಡುತ್ತೇವೆ ನೋಟ್ ಮಾಡಿಕೊಳ್ಳಿ. ಆಮೇಲೆ ಉತ್ತರ ಕೊಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ತಾವು ಈಗ ಚರ್ಚೆ ಮಾಡುವಾಗ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಮಾಹಿತಿ ಕೊಟ್ಟೆವು. ಈ ಬಗ್ಗೆ Law Department and Finance Departmentಗೆ ಕಳುಹಿಸಿ draft ಮಾಡಲಾಗಿದೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಸಣ್ಣ ನೀರಾವರಿ ಇಲಾಖೆಯ ಸಚಿವರು ಕೊಟ್ಟಿರುವ ಹೇಳಿಕೆಯ ಪ್ರಕಾರ, ಬೆಂಗಳೂರು ನಗರದಲ್ಲಿ ಸಣ್ಣ ನೀರಾವರಿ ಇಲಾಖೆ ಏಕೆ ಬಿಟ್ಟರಿ? ಈ ಬಿಲ್‌ನಿಂದ ಏಕೆ ಹೊರತು ಪಡಿಸಿದ್ದಾರೆ?

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕುಮಾರಣ್ಣನವರು ಹೇಳಿದರು. ನಿಜವಾಗಲೂ ಬೆಂಗಳೂರನೊಳಗೆ ನಮ್ಮ ಇಲಾಖೆಗೆ ಸಂಬಂದಪಟ್ಟ ಕೆರೆಗಳಿವೆ. ಅವುಗಳನ್ನು ಈಗಾಗಲೇ ಅವರ ಅಧಿಕಾರ ವ್ಯಾಪ್ತಿಯೊಳಗೆ ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಅದಕ್ಕಿಂತ ಮುಂಚಿತವಾಗಿಯೂ ಎಲ್ಲಾ ಟೈಂ ಸೇರಿ ಬೆಂಗಳೂರು ನಗರದೊಳಗೆ ಇರುವಂಥ ಎಲ್ಲಾ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ಕೆರೆಗಳನ್ನು BDAಗೆ, BBMP ಗೆ ನಾವು ಹಸ್ತಾಂತರಿಸಿದ್ದೇವೆ. ಅಲ್ಲಿ ಒತ್ತುವರಿಯಾಗಿದೆ ಎನ್ನುವುದು ನಾನು ಮೊಟ್ಟ ಮೊದಲಿಗೆ ಸಣ್ಣ ನೀರಾವರಿ ಮಂತ್ರಿಯಾದ ಮೇಲೆ ಇಲಾಖೆಯ ಬಗ್ಗೆ ಪೂರ್ಣ ವಿವರ ಪಡೆಯುವಾಗ ನಾನು ಹೇಳಿಕೆ ಕೊಟ್ಟಿದ್ದು ಸತ್ಯ. ಅದು ಆಗಿದ್ದು ಸತ್ಯ ಮತ್ತು ಈಗ ಇರುವುದು ಸತ್ಯ. ನಾನು ಕುಮಾರಣ್ಣನವರಿಗೆ ಏನು

ಹೇಳುತ್ತೇನೆಂದರೆ, ನಿಶ್ಚಿತವಾಗಲೂ ನಮ್ಮ ಸರ್ಕಾರ ಅದರ ಬಗ್ಗೆ ಪೂರ್ಣ ಪ್ರಮಾಣದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಸೇರಿದಂತೆ ಎಲ್ಲಾ ಮಂತ್ರಿಗಳು ಸೇರಿಕೊಂಡು ಕ್ಯಾಬಿನೆಟ್‌ನಲ್ಲಿ ಸವಿಸ್ತಾರವಾಗಿ ಚರ್ಚಿಸಲಾಗಿದೆ. ನಮ್ಮದೊಂದು ಅಜೆಂಡಾ ಇದೆ, ನಮ್ಮ ಸರ್ಕಾರದ್ದು, ನಮ್ಮ ಮುಖ್ಯಮಂತ್ರಿಗಳದ್ದು ಒಂದು ಆಸೆ ಇದೆ. ಏನೆಂದರೆ, ಕೆರೆ ಒತ್ತಾವರಿಯನ್ನು ತೆರವುಗೊಳಿಸಲೇಬೇಕು, ಅದಕ್ಕೆ ಏನೇನು ಕಾನೂನು ಮಾಡಬೇಕು, ಅದಕ್ಕೆ ಗ್ರಾಮೀಣ ಪ್ರದೇಶದಲ್ಲಿ ಒಂದು ಭಾಗ. BDA & BBMP ಬೆಂಗಳೂರು, ಮತ್ತು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವಂಥದ್ದು ಒಂದು ಭಾಗ. ಅವೆಲ್ಲವೂ ಸೇರಿಸಿ ಒಂದು ಭಾಗ ಮಾಡಿ. ಇದು ಸಣ್ಣ ನೀರಾವರಿ ಇಲಾಖೆಗೆ ಗ್ರಾಮೀಣ ಪ್ರದೇಶದಲ್ಲಿ ಬರುವಂಥ ಎಲ್ಲಾ ಕೆರೆಗಳ ಅಭಿವೃದ್ಧಿ ಪ್ರಾಧಿಕಾರ ಮಾಡಿ, ಅದಕ್ಕೆ ಏನೇನು ಕಾನೂನು ತರಬೇಕೆಂದು ಯೋಚಿಸಿ ತಂದಿದ್ದೇವೆ. ಮಾನ್ಯ ಕುಮಾರಣ್ಣನವರು ಹೇಳಿದ ಹಾಗೆ, ನೀವೇನು BDA & BBMPಗೆ ಸಂಬಂಧಿಸಿದಂತೆ ಆಕ್ರೋಶವನ್ನು ವ್ಯಕ್ತಪಡಿಸಿದಿರಿ, ಅದಕ್ಕೆ ವಿಶೇಷವಾಗಿ ನಮ್ಮ ಸರ್ಕಾರಕ್ಕೆ ಮತ್ತು ನಮ್ಮ ಮುಖ್ಯಮಂತ್ರಿಗಳಿಗೆ, ಕೆರೆಗಳ ಒತ್ತುವರಿ ತೆರವು ಮಾಡೇ ಮಾಡುತ್ತೇವೆ ಎನ್ನುವ commitment ಇದೆ. ಅದಕ್ಕೆ ಏನು ಮಾಡುತ್ತಿದ್ದೇವೆಂದರೆ, ಅದಕ್ಕೆ ಇದು ಸಣ್ಣ ನೀರಾವರಿ ಇಲಾಖೆಗೆ ಬರುವಂಥದ್ದು ಒಂದು ಭಾಗ. ಈಗ ತಾವು ನನ್ನ ವ್ಯಾಪ್ತಿಯಲ್ಲಿ ಬರುವ 11 ಕೆರೆಗಳ ಒತ್ತುವರಿ ಆಗಿರುವುದರ ಬಗ್ಗೆ ಹೇಳಿದಿರಿ. ಅದನ್ನು ತೆರವುಗೊಳಿಸಲಿಕ್ಕೆ BDA & BBMPಯ ಬಗ್ಗೆ Lake Development Authority ಯನ್ನು ತರುವ ಕೆಲಸ ಮಾಡುತ್ತೇವೆ. ಅದಕ್ಕೆ ಇದಕ್ಕಿಂತ ಹೆಚ್ಚು ಗಟ್ಟಿತನದ ಕಾನೂನು ತರುವಂಥದ್ದು. ಅದರ ಜೊತೆಗೆ ತಾವು ಇನ್ನೊಂದು ಕಂದಾಯ ಇಲಾಖೆಯಲ್ಲಿ ಈಗಾಗಲೇ ಕಾನೂನು ಇದೆ. ಶಿಕ್ಷೆ ಇದೆ ಎನ್ನುವ ಮಾತು ಹೇಳಿದಿರಿ. ಕಂದಾಯ ಇಲಾಖೆಯಲ್ಲಿರುವಂಥ ಕಾನೂನನ್ನು ನಾವು ಬಳಕೆ ಮಾಡಿಕೊಳ್ಳುವುದಕ್ಕೆ ತೊಂದರೆಯಾಗುತ್ತಿದೆ. ಅಧಿಕಾರಿಗಳ ಸಹಕಾರ ಸಿಕ್ಕುತ್ತಿಲ್ಲ. ಅದೆಲ್ಲವನ್ನೂ ವಿಚಾರ ಮಾಡಿ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಕಾನೂನನ್ನು ತರುತ್ತಿದ್ದೇವೆ. ನಿಶ್ಚಿತವಾಗಿ ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿಯೂ ಕೆರೆಗಳಿವೆ. ಇದು ಸಣ್ಣ

ನೀರಾವರಿಯ ವ್ಯಾಪ್ತಿಗೆ ಬರುವಂಥದ್ದಕ್ಕೆ ಮಾತ್ರ. ಇಂದಿನವರೆಗೆ ನೀರಾವರಿ ಇಲಾಖೆಯೊಳಗೆ ಇಂಥ ಕಾನೂನುಗಳು ಇಲ್ಲ. ಹಿಂದಿನ Major Irrigation ಇರಬಹುದು, Minor Irrigation ಇಲಾಖೆ ಇರಬಹುದು, ಅದರಲ್ಲಿ ಅಂಥ ಕಾನೂನು ಇಲ್ಲ. ಇಲ್ಲಿ ನಾವು ಈ ಕಾನೂನನ್ನು ತಂದರೆ ಎಲ್ಲೋ ಒಂದು ಕಡೆಗೆ ಕೆರೆಗಳನ್ನು ಅಭಿವೃದ್ದಿ ಮಾಡಲಿಕ್ಕೆ, ಕರೆಗಳನ್ನು ಕಾಪಾಡಲಿಕ್ಕೆ, ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಕುಮಾರಣ್ಣನವರಿಗೆ ನಾನು ವಿನಂತಿಸುವುದಿಷ್ಟೆ. ನಾವು ಬೆಂಗಳೂರಿನಲ್ಲಿರುವ ಕೆರೆಗಳನ್ನು ಬಿಟ್ಟು ಈ ಬಿಲ್‌ಗೆ ಮಾನ್ಯ ಕುಮಾರಸ್ವಾಮಿಯವರು ಮತ್ತು ಎಲ್ಲಾ ಹಿರಿಯ ಸದಸ್ಯರು ಈ ಬಿಲ್‌ನ ಬಗ್ಗೆ ಏನೇನು ಸಲಹೆಗಳನ್ನು ಕೊಡುತ್ತಾರೆ ಅದನ್ನು ಸರ್ಕಾರ ನಿಶ್ಚಿತವಾಗಿ ಸ್ವೀಕಾರ ಮಾಡುತ್ತದೆ. ಒತ್ತುವರಿ ತೆರವುಗೊಳಿಸಬೇಕೆನ್ನುವ ನಮ್ಮದು commitment ಇದೆ. ಕೆರೆಗಳನ್ನು ಕಾಪಾಡಬೇಕೆನ್ನುವ ದೃಷ್ಟಿಕೋನ ಇಟ್ಟುಕೊಂಡು ಇದನ್ನು ತಂದಿದ್ದೇವೆ. ಇವತ್ತಿನವರೆಗೆ ನೀರಾವರಿ ಇಲಾಖೆಯಲ್ಲಿ ಯಾರೂ ತರಲಾರದ ಬಿಲ್‌ನ್ನು ಇವತ್ತು ನಾವು ತರುವುದಕ್ಕೆ ಕಾರಣ ಎಂದರೆ, ಕೆರೆಗಳ ಒತ್ತುವರಿ ತೆರವುಗೊಳಿಸುವುದಕ್ಕಾಗಿಯೇ ಇದನ್ನು ತಂದಿರುವುದು. ಅದಕ್ಕೆ ಕುಮಾರಸ್ವಾಮಿಯವರು ಏನು ವಿಷಯ ಹೇಳಿ ಸಲಹೆಗಳನ್ನು ಕೊಡುತ್ತಾರೋ ಅವುಗಳನ್ನು ನಿಶ್ಚಿತವಾಗಿಯೂ ನಾವು ಸ್ವೀಕರಿಸುತ್ತೇವೆ, ಏಕೆಂದರೆ ಅವರೆಲ್ಲಾ ಹಿರಿಯರು ಇದ್ದಾರೆ. ಅವರ ಸಲಹೆಗಳನ್ನು ನಾವು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ultimately, ಇದಕ್ಕೆ implementing authority ಯಾರು? ಸಣ್ಣ ನೀರಾವರಿ ಇಲಾಖೆಯೇ ಅಥವಾ ಜಿಲ್ಲಾಧಿಕಾರಿಯೇ?

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:– ಸಣ್ಣ ನೀರಾವರಿ ಇಲಾಖೆ. ಪ್ರಾಧಿಕಾರ ಮಾಡುತ್ತೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನೀವು ಹೇಳುವಾಗ ಅಲ್ಲಿ ಏನು ಹೇಳಿದಿರಿ, ultimately, ಜಿಲ್ಲಾಧಿಕಾರಿಗಳಿಗೆ ಪ್ರಾದಿಕಾರದಿಂದ action ತೆಗೆದುಕೊಳ್ಳುವುದಕ್ಕೆ power ಇದೆ ಎಂದು ಹೇಳಿದಿರಿ.

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಿ:– ಕುಮಾರಣ್ಣನವರೆ ತಾವು ಬಹುಶಃಅದನ್ನು ನೋಡಿಲ್ಲ. ತಾವು ಸ್ವಲ್ಪ ಅದನ್ನು ನೋಡಿ. Implementation ಅಧ್ಯಕ್ಷರಿಗೆ, ಇದಕ್ಕೆ ಮಾತ್ರ ಜಿಲ್ಲಾಧಿಕಾರಿಗಳು.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಈಗ ಇವರು ಇಲ್ಲಿ ಹೇಳಿದರು ಒಪ್ಪುತ್ತೇವೆ. ಮುಖ್ಯಮಂತ್ರಿಗಳಿಗೆ ಈ ಸರ್ಕಾರಕ್ಕೆ ಬೆಂಗಳೂರು ನಗರದಲ್ಲಿ ಭೂ ಕಬಳಿಕೆ ಆಗಿರುವುದೇನಿದೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ತೀರ್ಮಾನಕ್ಕೆ ಬಂದಿದ್ದೇವೆ ಎನ್ನುವ ಮಾತನ್ನು ಏನು ಹೇಳಿದ್ದಾರೆ, ಅದನ್ನು ಮಾಡಿ ಬಿಟ್ಟರೆ ನಾವು ಅವರನ್ನು ಅಭಿನಂದಿಸುತ್ತೇವೆ. ಈಗಾಗಲೇ ಒಂದು ವರ್ಷ ಕಳೆಯಿತು. ಒಂದು ವರ್ಷದಲ್ಲಿ ಇಲ್ಲಿಯವರೆಗೆ ಬೆಂಗಳೂರು ನಗರದಲ್ಲಿರುವ ಕೆರೆಗಳ ಒತ್ತುವರಿಯಾಗಿರುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇಂದು ನಾನು ಎ.ಟಿ. ರಾಮಸ್ವಾಮಿಯವರ ವರದಿಯ ಬಗ್ಗೆ ಹೇಳಬೇಕಾಗುತ್ತದೆ. ನಾನು ಆ ಭಾಗದಲ್ಲಿ ಕುಳಿತ್ತಿದ್ದಾಗ ಇದೇ ಸದನದಲ್ಲಿ ಸದನ ಸಮಿತಿ ಮಾಡಬೇಕೆಂದಾಗ ಮಾನ್ಯ ಎ.ಟಿ. ರಾಮಸ್ವಾಮಿಯವರ ನೇತೃತ್ವದಲ್ಲಿ ಒಂದು ಸದನ ಸಮಿತಿ ರಚನೆಯಾಯಿತು. ನಾನು ಈಗ ಬಾಲಸುಬ್ರಹ್ಮಣ್ಯಂರವರ ವರದಿಯ ಬಗ್ಗೆ ಚರ್ಚಿಸುವುದಿಲ್ಲ. ಎ.ಟಿ. ರಾಮಸ್ವಾಮಿಯವರು 2007 ರಲ್ಲಿ ವರದಿ ಕೊಡುತ್ತಾರೆ. ಈಗ ನಾವು 2014

ರಲ್ಲಿ ಇದ್ದೇವೆ ಯಾವ action ತೆಗೆದುಕೊಂಡಿದ್ದೀರಿ? ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 9 ಸಾವಿರ ಎಕರೆ ಭೂಮಿ ಒತ್ತುವರಿಯಾಗಿದ್ದನ್ನು ಸರ್ಕಾರಕ್ಕೆ ವಾಪಸ್ ಪಡೆದಂಥ ಪ್ರಕರಣ ಬಿಟ್ಟರೆ ನಂತರ ಏನಾಗಿದೆ? Lake Development Authority, BBMP & BDA, ಯಾವ್ಯಾವ ಕೆರೆಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆಂದು ನಾನು ಆಯಾಯ ಇಲಾಖೆಯಿಂದ ಮಾಹಿತಿ ಪಡೆದ ಮೇಲೆ, ನಾನು ಕೆರೆಗಳನ್ನು ಎಷ್ಟು ಅಭಿವೃದ್ಧಿ ಮಾಡಿದ್ದಾರೆ ನೋಡೋಣ ಎಂದು ಒಬ್ಬ photographer & videographer ಕರೆದುಕೊಂಡು ಹೋದೆ. ಕೆಲವು ಕೆರೆ ಹುಡುಕಬೇಕಾಗಿದೆ. ಕೆರೆ ಅಭಿವೃದ್ಧಿಗೆ 4–5 ಕೋಟಿ ರೂಪಾಯಿ ಹಣ ಖರ್ಚು ಮಾಡಿದ್ದೇವೆಂದು ತೋರಿಸುತ್ತಾರೆ. ಅಲ್ಲಿ ಕೆರೆಯೇ ಇಲ್ಲ. ಎಲ್ಲಿಂದ ಖಾಲಿ ಮಾಡಿಸುತ್ತೀರಿ? ನಿಮಗೆ ಎಷ್ಟು ವರ್ಷ ಬೇಕು? ಹಲವಾರು ಉದಾಹರಣೆಗಳನ್ನು ಕೊಡುವುದಕ್ಕೆ ತಯಾರಿದ್ದೇನೆ, ಇವತ್ತು ಎಲ್ಲಾ material ತಂದಿಟ್ಟಿದ್ದೇನೆ. ನಾನೇನು ಬೇರೆ ಕೆಲಸ ಇಲ್ಲದೆ, ಬೆಂಗಳೂರು ನಗರದಲ್ಲಿ ಕೆರೆಗಳನ್ನು ಯಾವ ರೀತಿ ಉಳಿಸಿದ್ದಾರೆ ಎನ್ನುವುದಕ್ಕೆ ಸುಮ್ಮ ಸುಮ್ಮನೆ ಸುತ್ತಲಿಕ್ಕೆ ಹೋಗಿಲ್ಲ. ಇದು ಇಲ್ಲಿ ಪ್ರಮುಖವಾಗಿರುವ ವಿಚಾರ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ನೀವು ಹಳ್ಳಿಗಳಲ್ಲಿರುವ ಕೆರೆಗಳನ್ನು ಉಳಿಸಲಿಕ್ಕೆ ಏನು ಹೊರಟಿದ್ದೀರಿ ತಾವು ಉಳಿಸಿ. ಇದು ಒಂದು ಭಾಗ. ಈ ವಿಧೇಯಕಗಳಿಂದ ಮಾತ್ರ ಉಳಿಸುತ್ತೇವೆನ್ನತಕ್ಕಂಥದ್ದು ನನಗೆ ಇವತ್ತು ನಂಬಿಕೆ ಉಳಿದಿಲ್ಲ. ಈ ಕಾನೂನುಗಳಿಂದ ಉಳಿಸುತ್ತೇವೆ ಎನ್ನುವ ನಂಬಿಕೆ ಇಲ್ಲ. ಈಗಾಗಲೇ ಕಂದಾಯ ಇಲಾಖೆಯಲ್ಲಿ ಒಂದು ಕಾನೂನು ತಂದು, ಯಾವ ರೀತಿಯಲ್ಲಿ ಅವರಿಗೆ ಶಿಕ್ಷೆ ಕೊಡಬೇಕೆಂದು ಇದೇ ಸದನದಲ್ಲಿ ಪಾಸ್ ಮಾಡಿದಿರಿ. ಆದರೆ, ರಾಜ್ಯದಲ್ಲಿ ಸ್ವೇಚ್ಛಾಚಾರವಾಗಿ ನಡೆಯುವುದು ನಡೆಯುತ್ತಿದೆ. ಇನ್ನೊಂದು ವಿಧೇಯಕ ತಂದ ತಕ್ಷಣ ಇದನ್ನು ನೀವು ಸಂಪೂರ್ಣವಾಗಿ ನಿಲ್ಲಿಸಿ ಬಿಡುತ್ತೀರಾ? ಬೆಂಗಳೂರು ನಗರದಲ್ಲಿ ಸುಮಾರು 2 ಲಕ್ಷ ಕೋಟಿ ರೂಪಾಯಿ ಬೆಲೆ ಬಾಳುವ ಕೆರೆ ಭೂಮಿಗಳಿರಬಹುದು, ಸರ್ಕಾರಿ ಭೂಮಿಗಳಿರಬಹುದು, ಇವತ್ತು ಇಲ್ಲಿ ಲೂಟಿಯಾಗಿದೆ. ಸರ್ಕಾರ ಇದನ್ನು ಮತ್ತೆ ಮುಟ್ಟುಗೋಲು

ಹಾಕಿಕೊಳ್ಳುವುದಕ್ಕೆ ಎಷ್ಟು ವರ್ಷಗಳು ಬೇಕೆಂದು ಕೇಳಲಿಕ್ಕೆ ಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಪ್ರಮುಖವಾಗಿ ಅತ್ಯಂತ ಬೆಲೆ ಬಾಳುವ ಭೂಮಿಗಳಿರಬಹುದು, ಕೆರೆಗಳಿರಬಹದು, ಏನು ಲೂಟಿಯಾಗಿದೆ ಇದರ ಬಗ್ಗೆ ನಾನು ಕೆಲವು ಮಾಹಿತಿ ತಂದಿದ್ದೇನೆ, ನಾನು ಇದನ್ನು ಸದನದ ಮುಂದೆ ಇಡಬೇಕೆನ್ನುವುದು ನನ್ನ ಅಭಿಪ್ರಾಯ.

ಉಪಾಧ್ಯಕ್ಷರು:– Lake Development Authorityಯದ್ದು separate ಇರುವುದರಿಂದ ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿ ಕೊಡೋಣ ಬಿಡಿ.

(ಗೊಂದಲ)

ಶ್ರೀ ಹೆಚ್.ಟಿ. ಸೋಮಶೇಖರ್:– ಉಪಾಧ್ಯಕ್ಷರೆ, ಕುಮಾರ ಸ್ವಾಮಿಯವರು ಹೇಳಿದ ಹಾಗೆ, ಬೆಂಗಳೂರು ಕೆರೆಗಳು ಒತ್ತುವರಿಯಾಗಿರುವುದರ ಬಗ್ಗೆ ಒಂದು ದಿವಸ separate ಆಗಿ ಚರ್ಚೆಗೆ ಅವಕಾಶ ಕೊಟ್ಟರೆ ಎಲ್ಲಾ ಈಚೆಗೆ ಬರುತ್ತದೆ. ಇಲ್ಲವೆಂದರೆ ಏನೂ ಆಗುವುದಿಲ್ಲ.

ಉಪಾಧ್ಯಕ್ಷರು:– ಚರ್ಚೆ ಮಾಡೋಣ ಬಿಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇದರಲ್ಲಿ ಬಹಳ ಸೂಕ್ಷ್ಮವಾದ ವಿಚಾರಗಳಿವೆ. ಒಂದು ನಿಮಿಷ ಇಲ್ಲಿ ನಮ್ಮ ಅಧಿಕಾರಿಗಳು..,

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:– ಕುಮಾರಣ್ಣನವರೆ, ತಾವು ಅದನ್ನು ಬೇರೆ ರೂಪದಲ್ಲಿ ತಂದು ಚರ್ಚಿಸಬಹುದು. ನನ್ನ ಬಿಲ್‌ಗೆ ಸಂಬಂಧಪಟ್ಟ ಹಾಗೆ ಮಾತ್ರ ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನಮ್ಮ ಅಧಿಕಾರಿಗಳು ಯಾರೋ ಒಂದು ಎಕರೆ ಎರಡು ಎಕರೆ ಜಮೀನು ಒತ್ತುವರಿ ಮಾಡಿರುವುದನ್ನು ತೆರವುಗೊಳಿಸುವುದಕ್ಕೆ ಹೋಗುತ್ತಾರೆ. ಮಾನ್ಯ ರಮೇಶ್ ಕುಮಾರ್‌ರವರು 5–6 ಬಾರಿ ಸದನದಲ್ಲಿ ಪ್ರಸ್ತಾಪಿಸಿದರು. ಅವರ ಮೇಲೆ ಒಂದು case ಹಾಕಿದರು. at least ಅವರು agriculture ಮಾಡುತ್ತಿದ್ದಾರೆ. ಅವರೇನು ಆ ಭೂಮಿಯಲ್ಲಿ ದೊಡ್ಡ ದೊಡ್ಡ multistoried building ಕಟ್ಟಲಿಲ್ಲ. ಅವರು ಬಹಳ ನೊಂದುಕೊಂಡು ಈ ಸದನದಲ್ಲಿ 3–4 ಬಾರಿ ಮಾತಾನಾಡಿದರು. ನೀವು ಅದರ ಮೇಲೆ ಕಣ್ಣು ಹಾಕುತ್ತೀರಿ. ಇಲಾಖೆಗಳು ಬೆಂಗಳೂರು ನಗರದಲ್ಲಿ ಏಕೆ ಇನ್ನು ಇದಕ್ಕೆ ಶಾಮೀಲಾಗಿ ಕುಳಿತಿದ್ದಾರೆ. ಇವತ್ತು ವಿಜಯ್ ಕುಮಾರ್ ರವರು ಅಲ್ಲಿ ಕೇಳಬೇಕು. ಅಲ್ಲಿರತಕ್ಕಂಥ ಹಿರಿಯ ನಾಗರೀಕರು ಕೋರ್ಟಿಗೆ ಹೋಗದೆ ಇದ್ದರೆ ಬೈರಸಂದ್ರದ ಕೆರೆ ಇವತ್ತು ಸರ್ಕಾರದ ಪಾಲಿಗೆ ಉಳಿಯುತ್ತಿರಲಿಲ್ಲ.

(ಗೊಂದಲ)

ಉಪಾಧ್ಯಕ್ಷರು:– ಕುಮಾರಸ್ವಾಮಿಯವರೆ, ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡೋಣ. ಆ ಬಿಲ್‌ಗೆ ಸಂಬಂಧಪಟ್ಟಂತೆ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಕೆಲವು ವಿಷಯದ ಬಗ್ಗೆ ಇದೇ ಸದನದಲ್ಲಿ ಸುಧೀರ್ಘವಾದಂತಹ ಚರ್ಚೆ ಆಗಬೇಕಾಗಿದೆ.

ಉಪಾಧ್ಯಕ್ಷರು:– ಅದಕ್ಕೆ ಅವಕಾಶ ಮಾಡಿಕೊಡೋಣ. ಮಾನ್ಯ ವಿಜಯಕುಮಾರ್‌ರವರೇ ತಾವು ಈ Bill ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಬಿ.ಎನ್. ವಿಜಯ್‌ಕುಮಾರ್ (ಜಯನಗರ):– ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ಸಿಟಿಯಲ್ಲಿರುವ ಕೆರೆಗೆ ಸಂಬಂಧಪಟ್ಟಂತೆ ಇದರ ಸುತ್ತಲು 249 ಹಳ್ಳಿಗಳಿವೆ. ಈ ಹಳ್ಳಿಗಳಲ್ಲಿರುವ ಒಂದು ಕೆರೆ ತುಂಬಿ ಇನ್ನೊಂದು ಕೆರೆಗೆ ನೀರು ಹರಿದು ಬರುವಂಥ ವ್ಯವಸ್ಥೆ ಇದೆ. ನೀರು ಹರಿದು ಬರುವುದಕ್ಕೆ ರಾಜಕಾಲುವೆಗಳಿವೆ. 685 ಕಿ.ಮೀ. ಉದ್ದಕ್ಕೆ ಸರ್ವೆ ಮಾಡಿ

encroachment ಆಗಿರುವಂಥದನ್ನು ತೆಗೆಯಿರಿ ಎಂದು 6 ತಿಂಗಳಿಂದ ಸತತವಾಗಿ ಪ್ರಯತ್ನ ಮಾಡಿದ್ದೇವೆ. ಆದರೂ ಸಹ ಈ ಕೆಲಸ ಆಗಿಲ್ಲ. ಅಲ್ಲಿ ಆಗಿರುವ encroachment ಗಳು ಹೋಗದೆ ಇದ್ದರೆ ಬೆಂಗಳೂರು ಸಿಟಿಯಲ್ಲಿರುವ ಕೆರೆಗಳಿಗೆ ನೀರು ಹೇಗೆ ಬರುತ್ತದೆ? ಕೇವಲ ಮಳೆ ನೀರಿನಿಂದ ಈ ಕೆರೆಗಳಿಗೆ ನೀರು ಬರುವುದಿಲ್ಲ. ಬೆಂಗಳೂರು ಸುತ್ತ ಇರುವ Catchment area ದಿಂದ ನೀರು ಹರಿದು ಬರಬೇಕಾಗುತ್ತದೆ. ಆದ್ದರಿಂದ, ಇದನ್ನು ಸೇರಿಸದೇ ಇದ್ದರೆ ಬೆಂಗಳೂರು ಕೆರೆಗೆ ನೀರು ಬರುವುದಕ್ಕೆ ಸಾಧ್ಯವೇ ಇಲ್ಲ. ಈ ಬಗ್ಗೆ ನಾನು ಈಗಾಗಲೇ ಅವರನ್ನು ಕೇಳಿದ್ದಾನೆ. ಬೆಂಗಳೂರಿನ ಕೆರೆಗಳಿಗೆ ಕೇವಲ ಮಳೆಯಿಂದ ನೀರು ಬರುವುದಿಲ್ಲ. ರಾಜಕಾಲುವೆ ಮೂಲಕ ನೀರು ಇಲ್ಲಿಗೆ ಬರಬೇಕಾಗುತ್ತದೆ. ಆದ್ದರಿಂದ, ಒತ್ತುವರಿ ಮಾಡಿರುವ ರಾಜಕಾಲುವೆಯನ್ನು ತೆಗೆಸಬೇಕು. ಇದನ್ನು ಯಾರು ತೆಗೆಸಬೇಕೆಂಬುದು ಗೊಂದಲವಾಗಿದೆ. ಅಂದರೆ, ಇದನ್ನು ಇವರು ಮಾಡುತ್ತಾರಾ ಅಥವಾ ಬಿಬಿಎಂಪಿ ರವರು ಮಾಡುತ್ತಾರಾ ಅಥವಾ ಡಿ.ಸಿ. ಮಾಡುತ್ತಾರಾ ಎಂಬ ದೊಡ್ಡ ತಲೆನೋವು ಇದೆ. ಈ ಬಗ್ಗೆ ಸುಮಾರು 1 ಸಾವಿರ file ಮಾಡಿ ಇಟ್ಟಿದ್ದೆ. ಆದರೆ, ಅದನ್ನು ಯಾರು ಸಹ implement ಮಾಡುತ್ತಿಲ್ಲ. ಬಿಬಿಎಂಪಿ ಯಲ್ಲಿರುವ Chief Engineer ರವರು storm water drains ಗೆ ಸಂಬಂಧಪಟ್ಟಂತೆ irresponsible behave ಮಾಡುತ್ತಿರುವುದರಿಂದ ಈ ಕೆಲಸ ಆಗುತ್ತಿಲ್ಲ. ಆದ್ದರಿಂದ, ಈ ಬಗ್ಗೆ ನಮಗೂ ಡಿ.ಸಿ. ಯವರಿಗೂ ಮತ್ತು ಇವರ ಜೊತೆ ಜಗಳ ಆಗುತ್ತಿದೆ. ಈ ಮಳೆಗಾಲದಲ್ಲಿ ಆಗುತ್ತದೆ ಎಂದು ನಾವು ಅಂದುಕೊಂಡಿದ್ದೆವು. ಆದರೆ, ಈ ಮಳೆಗಾಲದಲ್ಲಿಯೂ ಕೂಡ ಆಗಲಿಲ್ಲ. ಆದ್ದರಿಂದ, ಈ ಕೆಲಸ ಯಾವಾಗ ಆಗುತ್ತದೆ? ಆದ್ದರಿಂದ, ಇದನ್ನು ಇದರಲ್ಲಿ ಸೇರಿಸಿದರೆ ಒಳ್ಳೆಯದೋ ಅಥವಾ ಯಾವ ರೀತಿಯಲ್ಲಿ ಮಾಡಿದರೆ ಒಳ್ಳೆಯದು ಎಂಬ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):- ಸನ್ಮಾನ್ಯ ಉಪಾಧ್ಯಕ್ಷರೆ, Karnataka Tank Development Authority Bill 2014, ಈ Bill ನ purpose ಏನೆಂದರೆ, ಎಲ್ಲಾ ಕೆರೆಗಳನ್ನು ರಕ್ಷಣೆ ಮಾಡುವಂಥ ಕಾನೂನು ಈ Bill ನಲ್ಲಿ ಇದೆ ಎಂದು ತಾವು explain ಮಾಡುವಾಗ ಹೇಳಿದ್ದೀರಿ. ಆದರೆ, ಈ Act ಅನ್ನು ತಾವು ಮತ್ತೊಂದು ಸಾರಿ ಓದಬೇಕೆಂದು ನನ್ನ ಅಭಿಪ್ರಾಯ. ಏಕೆಂದರೆ, ಇದರಲ್ಲಿ ಒಂದಕ್ಕೊಂದು ambiguity, applicability ಕಾಣುತ್ತಿದೆ. ಈಗಾಗಲೇ ಮಾನ್ಯ ಕುಮಾರಸ್ವಾಮಿಯವರು ಬೆಂಗಳೂರಿನ ವಿಷಯವನ್ನು ಹೇಳಿದ್ದಾರೆ. Section 1.(3): 'It applies to all the Tanks, ponds, lakes in the Karnataka State located outside the limits of all Municipal Corporations and Bangalore Development Authority or any other notified bodies'. ಇದರಲ್ಲಿ ಬೆಂಗಳೂರಿಗೆ ಸಂಬಂಧಪಟ್ಟಂತೆ ಇದೆ. ಆದರೆ, ಉಳಿದಂಥ ಕೆರೆಗಳ ಬಗ್ಗೆ ಏನು ಮಾಡುತ್ತೀರಿ? Notified areas, Muncipal Corporation, Town Panchyaths, Municipalities ಅಲ್ಲಿ ನಿಮ್ಮ ಕೆರೆಗಳು ಇಲ್ಲವೇ? ಅದಕ್ಕೆ ಏನು ಮಾಡುತ್ತೀರಿ? ಈ ಬಗ್ಗೆ silent.

ಉಪಾಧ್ಯಕ್ಷರು:- ಏನು ಮಾಡಬೇಕೆಂಬುದರ ಬಗ್ಗೆ ಸಲಹೆ ಕೊಡಿ. ಅವರು note ಮಾಡಿಕೊಳ್ಳುತ್ತಾರೆ.

ಶ್ರೀ ಕೆ.ಜಿ. ಬೋಪಯ್ಯ:- ಮಾನ್ಯ ಉಪಾಧ್ಯಕ್ಷರೆ, ಇವರು ಹೇಳುವುದೊಂದು, ಇಲ್ಲಿ ಇರೋದೆ ಒಂದು. Next, Section 2.(d): 'Designated Officer' means any officer who may belongs to any of the departments of Minor Irrigation or Rural Development and Panchayat Raj or Forest Department and appointed or designated as such by the Authority under Section 10;' ಇದನ್ನು ಯಾರಿಗೆ ಕೊಡುತ್ತೀರಿ? ಇದನ್ನು ಎಲ್ಲರಿಗೂ ಕೊಡುತ್ತೀರಾ? Forest Department ನವರಿಗೂ ಕೊಡುತ್ತಿದ್ದೀರಿ. ಇದರಲ್ಲಿ ನಿಮ್ಮ ಕೆಲವು definition ನಲ್ಲಿ tank, pond, ಖರಾಬ್, ಕೆರೆ ಈ ರೀತಿಯಾಗಿ ಏನೆಲ್ಲಾ ಹೇಳಿದ್ದೀರಿ. ನಮ್ಮದು deemed forest ಎಂದು ಅವರು

ಹೇಳುತ್ತಾರೆ. ಮಾನ್ಯ ಅರಣ್ಯ ಸಚಿವರೇ ನೀವು ನಮಗೆ ಕೊಟ್ಟಿರುವ ಪುಸ್ತಕದಲ್ಲಿ ಇದೆ ಅದನ್ನು ತೋರಿಸುತ್ತೇನೆ. ಅಂದರೆ, ಖರಾಬ್ ಕೆರೆ deemed forest ಎಂದು ನೀವು ಹೇಳಿಲ್ಲವೇ? ಬೇಕಾದರೆ ಆ ಪುಸ್ತಕವನ್ನು ತೆಗೆದು ನೋಡಿ. It belongs to Minor Irrigation Department ಎಂದು ಇದರಲ್ಲಿ ನೀವು ಹೇಳುತ್ತೀರಿ. ಹಾಗಾದರೆ designation ಯಾರಿಗೆ? ಆದ್ದರಿಂದ, ಈ ಬಗ್ಗೆ definite ಆಗಿ ತಾವು ಹೇಳಬೇಕು. ಇದರಲ್ಲಿಯೂ ಕೂಡ ಏನೇನೋ ambiguityಯನ್ನು ಮಾಡಿದ್ದೀರಿ. ಆಮೇಲೆ ಇಲ್ಲಿ, Section 10. Designated Officer (1): 'The Authority may designate or appoint any officer of the Government as designated officer to be in charge of one or more tanks, ponds, lakes of district wise to ensure their protection, conservation, development and for any other purpose'. ಹಾಗಾದರೆ ಯಾರಿಗೆ ಬೇಕಾದರೂ ಮಾಡುತ್ತೀರಾ? ಆದ್ದರಿಂದ, ಯಾರು ಎಂಬ ಬಗ್ಗೆ ತಾವು explain ಮಾಡಬೇಕು ಮತ್ತೆ ಇದರಲ್ಲಿ ಅವರ powers ಹೇಳಿದ್ದೀರಿ. ಆಮೇಲೆ, the Authority just like a quasi-judicial Authority. ಒಬ್ಬ Authorized officer ಎಂದು ಮಾಡುತ್ತಿದ್ದೀರಿ. ಅವರು vehicle ಗಳನ್ನು seize ಮಾಡಿ ಅವರ ಮುಂದೆ produce ಮಾಡುವುದು, ಆನಂತರ ಅವರು ಅದಕ್ಕೆ show-cause Notice ಕೊಡುವುದು, confiscation ಅವರಿಗೆ ಎಲ್ಲಾ powers ಕೊಟ್ಟಿದ್ದೀರಿ. ಇಲ್ಲಿ ಏನು ಹಾಕಿದ್ದೀರಿ? Section 11. Authorized officer: 'The Governmet may appoint an officer of the Government not below the rank of a Group 'A' officer or any Executive Engineer of the concerned district of Irrigation Department of the State Civil Services as Authorized Officer, who shall exercise powers under this Act and such other powers as may be specified by the Government from time to time.' ನೀವು ಒಬ್ಬ Executive Engineer ಗೆ quasi-judicial powers ಕೊಟ್ಟರೆ ಆತನಿಗೆ ಏನು ಗೊತ್ತಿರುತ್ತದೆ? ಇದು ನಿಜಕ್ಕೂ ಆಶ್ಚರ್ಯವಾಗುತ್ತದೆ. ಅವರು ಏನು ಮಾಡುತ್ತಾರೆಂದು ಕೊಟ್ಟಿದ್ದೀರಿ. ಅವರಿಗೆ basic knowledge

ಏನಾದರೂ ಇರುತ್ತದೆಯೇ? Atleast Sub Divisional Magistrate or Taluk Executive ಆಗಿರುವ ತಹಸೀಲ್ದಾರ್ ಇವರಾದರು ಸ್ವಲ್ಪ ನೋಡುತ್ತಾರೆ. ಆದರೆ, ಒಬ್ಬ Executive Engineerಗೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ, Engineer ಏನು ಮಾಡುತ್ತಾನೆ? ಆಮೇಲೆ, Power to Seize. Designated Officer ಆಮೇಲೆ ಹೇಳುತ್ತೇನೆಂದು ಹೇಳಿದ್ದಾರೆ. ಮತ್ತೆ property ಅನ್ನು ಏನು ಮಾಡುತ್ತೀರಿ? ಒಂದು ಕಡೆ Authorized Officer ಮುಂದೆ produce ಮಾಡಬೇಕೆಂದು ಹೇಳುತ್ತೀರಿ. ಸನ್ಮಾನ್ಯ ಮಂತ್ರಿಗಳೇ, Section-14 ಅನ್ನು ಸ್ವಲ್ಪ ನೋಡಿ. Section 14. (2) 'Provided that where the seized property, vehicle, material or object is belived to belong to the Central or the Governmet or a local or other authority or if the offender is unknown, the Designated officer or empowered officer shall report the Deputy Commissioner.' ಒಂದು ಕಡೆ Authorized Officer ಎಂದು ಹೇಳುತ್ತಾರೆ. ಇವರು seize ಮಾಡುವ ಮೊದಲು ಇವರಿಗೆ ನಂಬಿಕೆ ಬಂದು ಬಿಡುತ್ತದೆ. This belongs to the Central Government or local body ಎಂದು, ಇದು ಹೇಗೆ ಆಗುತ್ತದೆ? ಈ ಬಗ್ಗೆ ತಾವು explain ಮಾಡಬೇಕು. ಯಾವುದೋ ಒಂದು ಅಂದರೆ, JCB ಅಥವಾ ಬೇರೆ ಏನೋ material ಅನ್ನು seize ಮಾಡಿದ ತಕ್ಷಣ, he can come to the conclusion that it belongs to Central Government or ಯಾವುದೇ ಒಂದು local authority ಗೆ ಎಂದು. ಈ ತರಹ ambiguity ಕೊಟ್ಟರೆ ಹೇಗೆ? Section 15. 'Power to release property seized under section 14.-Where the seized property is such that it cannot be conveniently be produced before the Magistrate or the Authorized Officer as the case may be, it may be released by the Deputy Commissioner to the owner thereof on his executing a Bank guarantee and a bond undertaking to produce the property so released, if and when so required, before the Magistrate having jurisdiction to try the offence on account of which the seizure has been made or

before the Authorized Officer.' ಒಂದು ಕಡೆ ಏನು ಹೇಳುತ್ತಾರೆಂದರೆ, ಅದು Government ನ exclusive property ಆದರೆ D.C ಮುಂದೆ produce ಮಾಡಬೇಕು. ಅವರು release ಮಾಡುತ್ತಾರೆಂದು ಹೇಳುತ್ತಾರೆ. ಆದರೆ, ಇಲ್ಲಿ owner ಎಂದು ಮತ್ತೆ ಹೇಳುತ್ತಾರೆ. ಹಾಗಾದರೆ, who is the quasi-judicial seizure and show-cause notice issue ಮಾಡುವವರು ಒಂದು ಕಡೆ ಡಿ.ಸಿ. ಎಂದು ಹೇಳುತ್ತೀರಿ ಮತ್ತೊಂದು ಕಡೆ Authorized Officer ಎಂದು ಹೇಳುತ್ತೀರಿ. ಈ ರೀತಿ ಇದ್ದರೆ ಹೇಗೆ? ಈ ಬಗ್ಗೆ ತಾವು explain ಮಾಡಬೇಕು. ಅವರಿಗೆ ಮತ್ತೆ confiscation ಕೊಡುತ್ತೀರಿ. Section 16. (1) 'The designated officer or empowered officer seizing the property under Section 14 shall, without any unreasonable delay produce the property, before the Authorized Officer.' ಇಲ್ಲಿ ಒಂದು ಕಡೆ ಡಿ.ಸಿ. ಎಂದು ಹೇಳುತ್ತೀರಿ ಮತ್ತೊಂದು ಕಡೆ Aythorized Officer ಎಂದು ಹೇಳುತ್ತೀರಿ. ಆದ್ದರಿಂದ, ಯಾವ್ಯಾವುದು ಎಂದು ಹೇಳಬೇಕು. ಅದು Government property ಆಗಿದ್ದರು ಸಹ ಅದೇಕೆ ಡಿ.ಸಿ. ಯವರಿಗೆ specialty? ಇದು ಯಾಕೇ ಹೀಗೆ? ಅಥವಾ local authority ನೀವು ಏಕೆ ಹೀಗೆ ಮಾಡಿದ್ದೀರಿ? Seize ಮಾಡುವಾಗ how do you come to the conclusion? ಎಂಬುದನ್ನು ತಾವು ಹೇಳಬೇಕು. ತಾವು ಇಷ್ಟು ದೊಡ್ಡ Act ಅನ್ನು ಮಾಡಿದ್ದೀರಿ. ಹಾಗೆಯೇ conviction ಬಗ್ಗೆ ಕೂಡ ಇದರಲ್ಲಿ ಹೇಳಿದ್ದೀರಿ. ನೀವು offence ಬಗ್ಗೆ ಹೇಳುವಾಗ ಪುನಃ ಇಲ್ಲಿ, Section 33. Power to release on bank a person arrested, Section 34. Cognizance of offences ಬಗ್ಗೆ ಹೇಳಿದ್ದೀರಿ. Simple ಆಗಿ ಒಂದೇ Section ಇದೆ. ಅಂದರೆ, the offence is bailable and cognizable. ಜಾಮೀನು ಕೊಡುವುದಾದರೆ ಹೇಗೆ? ಇದರಲ್ಲಿ ನೀವು ದೊಡ್ಡದಾಗಿ ಉದ್ದೇಶ ಮತ್ತು ಇನ್ನೊಂದು ಹಾಕಿದ್ದೀರಿ. ಆದರೆ ಆತನನ್ನು bail ಮೇಲೆ ಕಳುಹಿಸಿ ಬಿಟ್ಟರೆ ಹೇಗೆ? ಯಾರು seize ಮಾಡುತ್ತಾನೆಯೋ, he can execute a bond, ಆತ ಅಲ್ಲಿಂದ ಹೋಗುವುದಿಲ್ಲ.

ಮತ್ತೆ ಪುನಃ ಹೋಗುವುದು ಕದಿಯುವುದು ಬರುವುದು. ಏಕೆ non-bailable ಮಾಡಬಾರದು? ಇಲ್ಲ bailable offence ಆದರೆ ಈ ಎರಡು Section ಗಳು ನಿಮಗೆ ಏಕೆ? Section.33 and 34, the offence committed under this Act shall be cognizable and bailable ಅಂದರೆ ಮುಗಿದೇ ಹೋಯಿತು. ಇದರಲ್ಲಿ ನಿಮ್ಮ purpose ಅದರಲ್ಲಿ ಏನು ಕಾಣುತ್ತಿಲ್ಲ. ಈಗಾಗಲೇ ಹೇಳಿದಂತೆ ಕಾಟಾಚಾರಕ್ಕೆ ಒಂದು Bill ತಂದಿರುತ್ತೀರಿ. ಇದರಲ್ಲಿ ambiguity, each and every section it is full of confusion and ambiguity. ಯಾರು ಡ್ರಾಫ್ಟ್ ಮಾಡಿ ಕೊಟ್ಟರು ಗೊತ್ತಿಲ್ಲ, ಇದನ್ನು ಸರಿ ಮಾಡಿ. ನನ್ನ ಒಂದು ಸಲಹೆ ಇದೆಲ್ಲವನ್ನು ಸರಿ ಮಾಡಿ ಹೊಸದಾಗಿ ನಿಮಗೆ ಕೆರೆಗಳ ರಕ್ಷಣೆ ಮಾಡಬೇಕು ಎನ್ನುವ ಉದ್ದೇಶ ಇದ್ದರೆ correct ಆಗಿ Bill ತೆಗೆದುಕೊಂಡು ಬನ್ನಿ. ಸುಮ್ಮನೆ ಯಾರ ಹತ್ತಿರ consult ಮಾಡದೆ ಬಾಯಿಗೆ ಬಂದ ಹಾಗೆ ಒಂದು Bill ತಂದಿರುತ್ತೀರಿ. ಇದು Bill ರೂಪದಲ್ಲಿ ಇಲ್ಲ. ಸುಮ್ಮನೆ ಏನೋ ಮಾಡಿದ್ದೇವೆಂದು ತೋರಿಸುವುದಕ್ಕೆ ಇದು ಬೇಡ. It is show off. ನಿಮಗೆ ಎಲ್ಲಾ ಕೆರೆಗಳ ರಕ್ಷಣೆ ಆಗಬೇಕಾದರೆ fresh Bill ತೆಗೆದುಕೊಂಡು ಬನ್ನಿ ಎಂದು ನನ್ನ ಸಲಹೆ ಇದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿ ಮುಗಿಸಿ ಬಿಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಿಮ್ಮ CLP ಯಲ್ಲಿ ಇದನ್ನು ಚರ್ಚೆ ಮಾಡಲಿಲ್ಲವೆ?

ಶ್ರೀ ಕೆ.ಆರ್. ರಮೇಶ್ ಕುಮಾರ್:- ಇಲ್ಲಾ ಚರ್ಚೆ ಮಾಡಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನೋಡಿ ಎಂತಹ ಸ್ಥಿತಿ ಬಂದು ಬಿಟ್ಟಿತು.

ಶ್ರೀ ಗೋವಿಂದ ಎಂ. ಕಾರಜೋಳ:- ರಾಜ್ಯದಲ್ಲಿ ಅತೀ ಹೆಚ್ಚು ಕೆರೆಗಳು ಕೋಲಾರ ಜಿಲ್ಲೆಯಲ್ಲಿ ಇರುವುದು.

ಶ್ರೀ ಕೆ.ಆರ್. ರಮೇಶ್ ಕುಮಾರ್:- ನನಗೆ ನನ್ನ ಸ್ಥಿತಿಗಿಂತ ನಮ್ಮ ಕೆರೆಗಳ ಸ್ಥಿತಿ ಬಗ್ಗೆ ಹೆಚ್ಚು ಆಲೋಚನೆ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಸಿರ್ಸಿ):- ಮಾನ್ಯ ಉಪಾಧ್ಯಕ್ಷರೆ, ಸಾಮಾನ್ಯವಾಗಿ 1994 ರಲ್ಲಿ ನಮಗೆ ಮಾನ್ಯ ರಮೇಶ್ ಕುಮಾರ್‌ರವರು Speaker ಆಗಿದ್ದರು. ಆಗ ನಾವು ವಿರೋಧ ಪಕ್ಷದಲ್ಲಿದ್ದೆವು. ಅವರು Speaker ಆಗಿದ್ದಂತಹ ಸಂದರ್ಭದಲ್ಲಿ ಆಡಳಿತ ಪಕ್ಷದವರು ಈ ರೀತಿಯ ವಿಷಯದ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಅವರಿಗೆ ಸ್ಪಷ್ಟ ಸೂಚನೆ ಮತ್ತು ಮಾರ್ಗದರ್ಶನವನ್ನು ಕೊಡುತ್ತಿದ್ದರು. Party level ನಲ್ಲಿ Party ಒಂದು Manifesto ಚುನಾವಣೆಯ ಸಂದರ್ಭದಲ್ಲಿ ಮಾಡಿರುತ್ತದೆ. ಅದರ ಆಧಾರದ ಮೇಲೆ ಸರ್ಕಾರ ರಚನೆ ಆದಾಗ ಸರ್ಕಾರ ಈ ರೀತಿಯ Bill ಗಳನ್ನು ತರುವಂಥ ಸಂದರ್ಭದಲ್ಲಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಸಾಮಾನ್ಯವಾಗಿ ಚರ್ಚೆಯಾಗಿ ಅದು Department ನಲ್ಲಿ ಒಂದು note ಆಗಿ Cabinet ಗೆ ಹೋಗಿ ಆಮೇಲೆ ಇಲ್ಲಿ ಬರಬೇಕು. ಹಾಗಾಗಿ ಆಡಳಿತ ಪಕ್ಷದವರದು ಪಾಲ್ಗೊಳ್ಳುವಿಕೆ ಸದನದ ಸಂದರ್ಭದಲ್ಲಿ ಕಡಿಮೆ ಇರುತ್ತದೆ. ಇಲ್ಲಿ ಆಡಳಿತ ಪಕ್ಷದವರಿಗಿಂತ ವಿರೋಧ ಪಕ್ಷದವರೆ ಹೆಚ್ಚು ಮಾತನಾಡಬೇಕಾದಂಥ ಒಂದು ವೇದಿಕೆ ಇದು ಎನ್ನುವಂಥ ಮಾತನ್ನು ಆ ಒಂದು ಸ್ಥಾನದಿಂದ ನಮಗೆಲ್ಲಾ ಹೇಳಿದ್ದನ್ನು ನೆನಪು ಮಾಡಿಕೊಳ್ಳುತ್ತಿದ್ದೇನೆ. ತಾವು ಮಾತನಾಡಿ.

ಉಪಾಧ್ಯಕ್ಷರು:- ಬಿ.ಆರ್. ಪಾಟೀಲ್, ನಿಮಗೆ ಆಮೇಲೆ ಕೊಡುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ):- ಮಾನ್ಯ ಉಪಾಧ್ಯಕ್ಷರೆ, ಅವರು ಸಭೆ ಕರೆದಿಲ್ಲ, ಚರ್ಚೆ ಮಾಡಿಲ್ಲ, ಆದ್ದರಿಂದ ನಾನು ಮಾತನಾಡುತ್ತೇನೆ. So, there is no change in. . . First of all, ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ Bill ಗೆ title ಯಾರು ಕೊಟ್ಟರು ನನಗೆ ಗೊತ್ತಿಲ್ಲ. Karnataka Tank Development Authority. Tank ಅನ್ನು ಏನು development ಮಾಡುತ್ತೀರಿ. ಅಲ್ಲಿ ಏನಾದರೂ Five Star building ಏನಾದರೂ ಕಟ್ಟುತ್ತೀರಾ? See, the Bill is required to be

enacted as a Law, to protect the tank area not development. It should have been Karnataka Tank Area Protection Bill. ಇದಕ್ಕೆ ಕಾರಣ ಏನು? Cause of Action ಏನು? ಒಂದು ಕಾರಣ ಇಲ್ಲದೆ ಹೋದರೆ ನೀವು ಒಂದು ಶಾಸನ ತರುವುದಿಲ್ಲವಲ್ಲಾ. ಕೆರೆಗಳೆಲ್ಲಾ ಒತ್ತುವರಿಯಾಗಿ ಬಿಟ್ಟಿವೆ. ಯಾವ ಕಾರಣಕ್ಕಾಗಿ ಈ ಕೆರೆಗಳನ್ನು ಕಟ್ಟಿತ್ತು ಅವು ನಿರುಪಯುಕ್ತವಾಗಿ ಬಿಟ್ಟಿವೆ. ಆ ಉದ್ದೇಶವನ್ನು ಜೀವಂತಗೊಳಿಸಬೇಕು. ಅದನ್ನು ಮಾಡಬೇಕಾಗಿದ್ದರೆ ನೀವು ಕೆರೆಗಳನ್ನು ರಕ್ಷಣೆ ಮಾಡಬೇಕಲ್ಲ. ಕೆರೆಗಳ ರಕ್ಷಣೆ ಇರಬೇಕೆ ಹೊರತು ಅಭಿವೃದ್ಧಿಯ ಪ್ರಶ್ನೆ ಅಲ್ಲ. ಅವು ರಕ್ಷಿತಗೊಂಡಿದ್ದರೆ ಅವುಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಯೋಚನೆ ಮಾಡಬೇಕು. They are not protected. Where does the question of development arise? ಅಂದರೆ application of mind ಇರುವುದಿಲ್ಲ. ಯಾರು draft ಮಾಡುತ್ತಾರೆ ಅವರು tank area ದವರು ಅಲ್ಲ. ಒಂದು tank encroachment ಆಗಿ, ಆ tank ನ ಸವಲತ್ತುಗಳನ್ನು ಕಳೆದುಕೊಂಡಿರತಕ್ಕಂಥ ಜನರ ನೋವಿನ ಪರಿಚಯದವರು ಈ ತರಹ draft ಮಾಡುವುದಿಲ್ಲ. This is a very painful thing. ಆಮೇಲೆ ನೀವು ಉದ್ದಕ್ಕೂ ಏನು ಹೇಳುತ್ತೀರಿ Minor Irrigation tanks ಎಂದು ಹೇಳುತ್ತೀರಿ. ಈ ರಾಜ್ಯದಲ್ಲಿ Minor Irrigation tanks ಇದ್ದಾವೆ. Zilla Panchayath tanks ಇದ್ದಾವೆ. Village tanks ಇದ್ದಾವೆ. Encroachment ಗೆ ಇವೆಲ್ಲಾ ಒಳಪಟ್ಟಿದ್ದಾವೆ. There are certain tanks, nomenclature ಮಾತ್ರ tanks ಎಂದು ಉಳಿಸಿಕೊಂಡಿದೆ, ಆದರೆ ಎಲ್ಲಾ ಕೆರೆಯ ಸ್ವರೂಪ ಕಳೆದುಕೊಂಡು ಬಿಟ್ಟಿದೆ. ಅದನ್ನು developmental activities ಗಾಗಿ ಈಗ ನಿಮ್ಮಲ್ಲಿರತಕ್ಕಂಥ rules ಪ್ರಕಾರ cabinet ನಲ್ಲಿಟ್ಟುಕೊಂಡು tanks list ದಿಂದ ನೀವು delete ಮಾಡಿ ಬಿಟ್ಟಿದ್ದೀರಿ. You should specifically say tanks not only coming under Minor Irrigation Department. What is a tank? ಅದರಲ್ಲಿ ನೀರು ತೆಗೆದುಕೊಳ್ಳುತ್ತೇವೆ. ದನಕರುಗಳಿಗೂ ಹಾಕಿಕೊಳ್ಳುತ್ತೇವೆ. ನಾವು ಬಟ್ಟೆ ಒಗೆದುಕೊಳ್ಳುವುದಕ್ಕೆ, ಈಜಾಡುವುದಕ್ಕೆ, ಬೆಳೆ ತೆಗೆಯುವುದಕ್ಕೆ, ನಮಗೆ ತಾಯಿ ಬಿಟ್ಟರೆ next ತಾಯಿ ಸಮಾನವಾದ ನಿಸರ್ಗದಲ್ಲಿ ನಮ್ಮ ಬದುಕಿನ

ಜೊತೆಯಲ್ಲಿ ಹೊಂದಾಣಿಕೆ ಆಗಿರುವುದು ಎಂದರೆ ಕೆರೆ. ನನ್ನ ಹತ್ತಿರ Minor Irrigatiopn tank ಇಲ್ಲ, ಪಕ್ಕದಲ್ಲಿ Z.P. tank ಇದೆ. ಅದನ್ನು ಒತ್ತುವರಿ ಮಾಡಿಕೊಳ್ಳಬಹುದಾ? ನೀವು maintenance ಗೆ, grants ಗೆ, ಇನ್ನೊಂದಕ್ಕೆ ಮತ್ತೊಂದಕ್ಕೆ ಕೊಡುವುದು ಬಿಡುವುದು ಬೇರೆ ಪ್ರಶ್ನೆ. ರಕ್ಷಣೆ ಮಾಡುಬೇಕು ಎಂದಾಗ ಅದು ಮೂರು ಎಕರೆಗೆ ನೀರು ಕೊಡುವಂಥದ್ದಕ್ಕೆ ಒಂದು ಗುಂಟೆ ಆಗಿದ್ದರು ಕೂಡ that should also be covered under this. That is very very important. ನೀವು Section.22 ರಲ್ಲಿ ಹೇಳುತ್ತೀರಿ. Notice ಕೊಡುತ್ತಾರಂತೆ, register post ಮಾಡುತ್ತಾರಂತೆ, ಆಮೇಲೆ ಕ್ರಮ ಜರುಗಿಸುತ್ತಾರಂತೆ. ನಿಮಗೆ ಗೊತ್ತಿಲ್ಲವೆ? ಕೆರೆ ಒತ್ತುವರಿ ಆಗಿದೆ ಅಂಥ. ಒತ್ತುವರಿ ಎಂದರೆ ಏನು? ನಿಮ್ಮ ಜಾಗಕ್ಕೆ ಸಂಬಂಧ ಇಲ್ಲದೆ ಇರುವವನು ಬಂದಿರುವುದು. ಕೆರೆ area ಎಷ್ಟು ಇದೆ ಎಂದು ನಿಮ್ಮ documents ನಲ್ಲಿದೆ. ಒಂದು ಕೆರೆಗೆ ಏನೇನು ಇರಬೇಕು, ಕೋಡಿ ಇರಬೇಕು, ಕಟ್ಟೆ ಇರಬೇಕು, ಕೆರೆ ಅಂಗಳ ಇರಬೇಕು, ರಾಜಕಾಲುವೆ ಇರಬೇಕು, ತೂಬು ಕಾಲುವೆ ಇರಬೇಕು. ಅದನ್ನು ರಾಜಕಾಲುವೆ ಎಂದು ಏಕೆ ಕರೆಯುತ್ತೇವೆ. ರಾಜ ಬರಬೇಕಾಗಿದ್ದರೆ, ರಾಜನಿಗೆ ಯಾರು ಅಡ್ಡ ನಿಲ್ಲುವಂತಿಲ್ಲ, ದಾರಿ ಬಿಡುತ್ತಿರಬೇಕು. ರಾಜಕಾಲುವೆ ಎಂದರೆ ನೀರು ಮಳೆ ಸುರಿದರೆ ಅದಕ್ಕೆ ಯಾವ ಅಡೆತಡೆ ಇರಬಾರದು. ಕೆರೆಗೆ ನೀರು ರಾಜ ಬಂದಂತೆ ಬಂದು ಬಿಡಬೇಕು. ಅದಕ್ಕೆ ಅದನ್ನು ರಾಜ ಕಾಲುವೆ ಎಂದು ಕರೆಯುವುದು. ಎಷ್ಟು ರಾಜ ಕಾಲುವೆಗಳು ಇವತ್ತು ಜೀವಂತ ಇದ್ದಾವೆ. ನೀವು ರಾಜಕಾಲುವೆಗಳನ್ನು ಮುಚ್ಚಿಬಿಟ್ಟು ನೀವು tank ಅನ್ನು development ಮಾಡುತ್ತೀರಾ? ಈ Bill draft ಮಾಡಿದವರು ಯಾರು ಕೆರೆ ನೋಡಿಯೇ ಇಲ್ಲ. Don't you know prima-facie that the tanks wall been encroached upon? ನಿಮಗೆ ಗೊತ್ತಿಲ್ಲದೆ ಹೋದರೆ tanks encroach ಆಗಿಲ್ಲ ಅಂತ ಈ Bill ಅಗತ್ಯ ಇರಲಿಲ್ಲ. ನಿಮಗೆ 100 ಕ್ಕೆ 100 tank encroachment ಆಗಿದೆ ಎಂದು ಗೊತ್ತಿದೆ. ಅದನ್ನು ಬಿಡುಗಡೆ ಮಾಡಬೇಕೆಂದು ನೀವು ಈ Bill ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ನಾವು ನಿಮ್ಮ ಉದ್ಧೇಶ ಒಪ್ಪುತ್ತೇವೆ. ಅದನ್ನು ಹೇಗೆ ಮಾಡಬೇಕು. ಲೆಕ್ಕ ತೆಗೆಯಿರಿ

ನಿಮ್ಮ ಇಲಾಖೆಯ ಅಧಿಕಾರಗಳ ಮುಖಾಂತರ tank area ಯಾವುದು ಇದೆ immediate ಆಗಿ ಒಂದು ಸರ್ವೆ ಮಾಡಿಸಿ. ಅದು ನಿಮ್ಮ ಜಾಗ ತಾನೆ. ನೀವು ಹೋಗಿ ಒಂದು trench ಹೊಡೆದು ಒಂದು ಜಂಡಾ ಹಾಕುವುದಕ್ಕೆ ನೀವು ಯಾರಿಗೆ notice ಕೊಡುವುದು. Notice ಕೊಡುವುದು ಅವನು Court ಗೆ stay ತೆಗೆದುಕೊಂಡು ಬರಲಿ ಎಂದು, ಚೆನ್ನಾಗಿ plan ಮಾಡಿದ್ದಾರೆ. ಬಹಳ beautiful ಆಗಿ plan ಮಾಡಿದ್ದಾರೆ. ಅಂದರೆ ಇದು ಹೀಗೆ ಇರಬೇಕು. ನಾನು ಹೊಡೆದಂತೆ ಮಾಡುತ್ತೇನೆ, ನೀನು ಅತ್ತಂತೆ ಮಾಡು. ಇದು ನಾನು ಪ್ರಣಾಳಿಕೆಯ ಅಧ್ಯಕ್ಷನಾಗಿದ್ದುಕೊಂಡು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಸುಮಾರು ದಿವಸ ಕಳೆದು ಹೋಯಿತು ಎಂದು ಮುಖ್ಯಮಂತ್ರಿಗಳಿಗೆ ಸುದೀರ್ಘವಾಗಿ ಪತ್ರವನ್ನು ಬರೆದು ನಿಮಗೂ ಹಾಕಿದ್ದೇನೆ. ನೀವು ಮತ್ತು ಮುಖ್ಯಮಂತ್ರಿಗಳು ಇಬ್ಬರು ನನಗೆ ಉತ್ತರವನ್ನು ಕೊಟ್ಟಿದ್ದೀರಿ. Tanks ಎಲ್ಲಾ silt up ಆಗಿ ಬಿಟ್ಟಿದೆ. ಪ್ರತಿ ಟ್ಯಾಂಕಿಗೆ ಎಷ್ಟು ಎಕರೆ ಅಚ್ಚುಕಟ್ಟು ಎಂದು ಮಾಡಿದ್ದೇವೋ ಇಲ್ಲವೋ? ಇವತ್ತು ಆ ಟ್ಯಾಂಕಿನ ಕೆಳಗಡೆಯ ಅಷ್ಟು ಅಚ್ಚುಕಟ್ಟಿಗೆ ನೀರು ಹೋಗುತ್ತಿದೆಯಾ? Tail enders ಗೆ ನೀರು ಹೋಗುತ್ತಿದೆಯಾ? ಕಾರಣ ಏನು? Storage capacity ಕಡಿಮೆ ಆಯಿತು. In flow ಕಡಿಮೆ ಆಗಿ ಆಯಿತು. Tank ಎಂದು ಲೆಕ್ಕದಲ್ಲಿ ಬರೆದುಕೊಳ್ಳುತ್ತೀರಿ ಹೊರತು silt up ಆಗಿರುವುದನ್ನು de-silting ಹೇಗೆ ಮಾಡುತ್ತೀರಿ. ನೀವು de-silting ಮಾಡದೆ ಹೋದರೆ ನಿಮ್ಮ tank ಇಟ್ಟುಕೊಂಡು ಏನು ಮಾಡುತ್ತೀರಿ, ಪೂಜೆ ಮಾಡುತ್ತೀರಾ? ಅದಕ್ಕೆ ಪೂಜಾ ಸಾಮಗ್ರಿಗಳು ಏನೇನು ಬೇಕು ಎಂದು ಹೇಳಿ. De-silting ನೀವು ಮಾಡದೆ ಹೋದರೆ, these tanks will become obsolete. They will be totally of no use. De-silting ಬಗ್ಗೆ ನೀವು ಎಲ್ಲೋ ಒಂದು line ಮಾತನಾಡಿದ್ದೀರಿ. ಯಾವುದೇ ಶಾಸನ ಮಾಡುವಾಗ, you are governed by the Constitution.

Any law that this House passes shall be in conformity with the process of the Constitution. Otherwise the court will strike down. Also there under the rules made, the effectively implementing any law that this

house frames also it can't be beyond the jurisdiction of the law. ನೀವು de-silting ವಿಚಾರವನ್ನು ಮಸೂದೆಯಲ್ಲಿ ಪ್ರಸ್ತಾಪ ಮಾಡದೇ rules ನಲ್ಲಿ ತಂದುಬಿಡುತ್ತೀರಾ? ಹೇಗೆ ತರುತ್ತೀರಿ? De-silting ಮಾಡದೇ tank ಅನ್ನು protect ಮಾಡುತ್ತೀರಾ? ಹೇಗೆ ಮಾಡುತ್ತೀರಿ? ಆಲೋಚನೆ ಮಾಡಿಲ್ಲ. ಕನಿಷ್ಠ ಪಕ್ಷ ಚರ್ಚೆಯನ್ನಾದರೂ ಮಾಡಬಹುದಾಗಿತ್ತು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಪೂರ್ತಿ ಆಲೋಚನೆ ಮಾಡಿ, ನನಗೆ ನಿಮ್ಮನ್ನು ಮುಜುಗರಕ್ಕೆ ಸಿಕ್ಕಿಸಬೇಕೆಂದೇನೂ ಇಲ್ಲ. ಮಾನ್ಯ ವಿಶ್ವೇಶ್ವರ ಹೆಗಡೆಯವರು,

Yes, from opposition he has to do his job, he has done it. It is an embarrassment to me. But, I can raise above that because of my commitment to this subject. ನನಗೆ ಒಂದುಚೂರು ಮುಜುಗರ ಆದರೂ ಕೂಡ ನಾನು ಅದನ್ನು ಸಹಿಸಿಕೊಳ್ಳುತ್ತೇನೆ. ನೀವು ನಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ವಿಚಾರವನ್ನು ಚರ್ಚೆ ಮಾಡಲಿಲ್ಲ. ನಾವು ಪತ್ರ ಬರೆದಾಗಲಾದರೂ ಇವನು ಯಾವನೋ ಒಬ್ಬ ಹುಚ್ಚ ಇದ್ದಾನೆ, ಇವನಿಗೆ ಇದರಲ್ಲಿ ಆಸಕ್ತಿ ಇದೆ ಎಂದಾದರೂ ಕರೆಸಿ ಮಾತನಾಡಬಹುದಾಗಿತ್ತು. ಹತ್ತು ಸಲ ನಿಮ್ಮ ಹತ್ತಿರ ವೈಯಕ್ತಿಕವಾಗಿ ಈ ವಿಚಾರದ ಬಗ್ಗೆ ನಾನು ಮಾತನಾಡಿದ್ದೇನೆ. ಕೆರೆ ಹೂಳನ್ನು ನೀವು ಹೇಗೆ ಎತ್ತುತ್ತೀರಿ? De-silting is a pastime activity for many politicians and their prodigies. ಆ ರೀತಿ ಮಾಡಿದರೆ ನೀವು ಹೂಳನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಒಂದು ಸಲ ಹೂಳು ತೆಗೆದರೆ ಆ ಹೂಳೆಲ್ಲಾ complete ಆಗಿ ಹೊರಗೆ ಹೋಗಬೇಕು. ಹೊರಗೆ ಹೋಗುವುದು ಎಂದರೆ ರೈತನ ಜಮೀನಿಗೇ ಹೋಗಬೇಕು. ನಮ್ಮ ರೈತನಿಗೆ ಇವತ್ತು ನೀವು ತೆಗೆದ ಹೂಳನ್ನು ಸಾಗಿಸುವ ಶಕ್ತಿ ಇಲ್ಲ. ನೀವೇ ಅದನ್ನು ಸಾಗಿಸಬೇಕು. ಅರ್ಧ ಭಾಗದಷ್ಟು ಸಬ್ಸಿಡಿ ಕೊಡಿ. ಇನ್ನರ್ಧ ಭಾಗಕ್ಕೆ ನಮಗೆ ಸಾಲ ಕೊಡಿ. ನೀವು ನಮ್ಮ ಹತ್ತಿರ installment ನಲ್ಲಿ ಹಣ ವಸೂಲಿ ಮಾಡಿಕೊಳ್ಳಿ. Silt ಮಾಡಿದ ಮೇಲೆ ಅಲ್ಲಿ ಒಂದೇ ಒಂದು tractor ಮಣ್ಣೂ ಉಳಿಯಬಾರದು. ಆಗ ಕೆರೆ ಶುದ್ಧವಾಗುತ್ತದೆ. De-silting ಮಾಡುವ

ಮೊದಲು area fix ಮಾಡಬೇಕು, trench ಹೊಡೆಯಬೇಕು. ನಿಮ್ಮದು ಯಾವುದು ಜಾಗ ಇರುತ್ತದೆ ಅದನ್ನು ನೀವು ಹೇಳಬೇಕು.

ಶ್ರೀ ಹೆಚ್.ಡಿ. ಕುಮಾರ್‌ಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಸರಿಯಾಗಿ ಹೇಳುತ್ತಿದ್ದಾರೆ. ಹಲವಾರು ಕೆರೆಗಳಲ್ಲಿ ಹೂಳು ಎತ್ತುತ್ತೇವೆ ಎಂದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿರುವುದನ್ನು ನಾವು ನೋಡಿದ್ದೇವೆ. ಇವತ್ತು ಆ ಕೆರೆಗಳಲ್ಲಿ ಏನು ಮಾಡುತ್ತಾರೆಂದರೆ, ಯಾವುದೋ ಒಂದು ಭಾಗದಲ್ಲಿ ಹೂಳು ತೆಗೆಯುತ್ತಾರೆ. ಒಂದು ದೊಡ್ಡ ಹಳ್ಳ ಮಾಡುತ್ತಾರೆ. ಪಾಪ ಹಳ್ಳಿಯ ಅಮಾಯಕ ಮಕ್ಕಳು ನೀರಿಗಿಳಿದು ಪ್ರತಿನಿತ್ಯ ಆ ಕೆರೆಗಳಿಗೆ ಬಿದ್ದು ಸಾಯುವಂತಹ ಘಟನೆಗಳನ್ನೂ ನೋಡುತ್ತಿದ್ದೇವೆ. ಸರ್ಕಾರದವರು ಈ ರೀತಿ ಕೆರೆಯಲ್ಲಿರುವ silt ಅನ್ನು ತೆಗೆಯುತ್ತಿದ್ದಾರೆ. ಹಲವಾರು ಕುಟುಂಬದ ಬಡ ಮಕ್ಕಳು ಆ ನೀರಿನಲ್ಲಿ, ಏನು ನೀರು ಕಡಿಮೆ ಇದೆ ಎಂದು ಹೋಗುತ್ತಾರೆ ಒಂದು ಕಡೆ ಹಳ್ಳ ಮಾಡಿರುತ್ತಾರೆ, ಏನೂ silt ತೆಗೆದಿರುವುದಿಲ್ಲ. ಬಿಲ್ ಮಾತ್ರ ಮಾಡಿಕೊಂಡಿರುತ್ತಾರೆ. ತಾವು ಏನು ಹೇಳುತ್ತಿದ್ದೀರಿ, ಒಂದು ಕೆಲಸಕ್ಕೆ ಕೈ ಹಾಕಿದ ಮೇಲೆ ಸಂಪೂರ್ಣವಾಗಿ ಹೂಳನ್ನು ಎತ್ತುವವರೆಗೂ ಕೆಲಸ ಮಾಡುವುದಿಲ್ಲ. ಸುಮ್ಮನೆ ಯಾವುದೋ ಒಂದು ಭಾಗವನ್ನು ತೆಗೆಯುವುದು ಲೆಕ್ಕ ತೋರಿಸುವುದು, ಅಲ್ಲಿ ಹೋಗಿ ಯಾರು ನೋಡುತ್ತಾರೆ? ಈ ರೀತಿ ಹಲವಾರು ಅಮಾಯಕ ಮಕ್ಕಳು ಕೆರೆಯಲ್ಲಿ ಬಿದ್ದು ಸಾಯುವಂತಹ ಘಟನೆಗಳನ್ನು ನೋಡುತ್ತಿದ್ದೇವೆ.

ಶ್ರೀ ಡಿ.ಸಿ. ತಮ್ಮಣ್ಣ (ಮದ್ದೂರು):- ಮಾನ್ಯ ಉಪಾಧ್ಯಕ್ಷರೆ, ಈಗ ಹಳ್ಳಿಗಳಲ್ಲಿ ಸಣ್ಣನೀರಾವರಿ ಕೆರೆಗಳು ನಮಗೆ ಬಹ ಅವಶ್ಯಕವಾಗಿ ಬೇಕು. ಇದಕ್ಕೆ ಏನೂ ಈ ವಿಧೇಯಕ ಬೇಕಾಗಿಲ್ಲ. ಇವತ್ತು ನಾವು ಅನೇಕ ಕೆರೆಗಳ ಹೂಳನ್ನು ಎತ್ತಿಸಿದ್ದೇವೆ. ನಾವೂ ಹೂಳನ್ನು ಎತ್ತಿಸಿದ್ದೇವೆ. ಈಗ ನನ್ನ ಕ್ಷೇತ್ರದಲ್ಲಿಯೇ 25 ಕೆರೆಗಳ ಹೂಳನ್ನು ಎತ್ತಿಸುತ್ತಿದ್ದೇನೆ. ಅದರಲ್ಲಿ 35 ವರ್ಷದಿಂದ ಬೆಳೆದಂತಹ ತೆಂಗಿನ ಮರಗಳನ್ನೂ ಕೂಡ ತೆಗೆದು ಹಾಕಿ ಇವತ್ತಿನ ದಿವಸ boundary fix ಮಾಡಿ all along the tank 15 ಅಡಿ ರೋಡ್

ಮಾಡಿದ್ದೇವೆ. Trench ಹೊಡೆಯಲಾಗಿದೆ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ ಎಲ್ಲೆಲ್ಲಿಂದ ನೀರು ಬರಬೇಕು, ಕಾಲುವೆಗಳಿಗೆ ಎಲ್ಲಿಂದ ನೀರು ಬರುತ್ತಿತ್ತೋ ಅದಕ್ಕೆಲ್ಲಾ ಆ ರಸ್ತೆಗಳಿಗೆ ಪೈಪ್‌ಗಳನ್ನು ಹಾಕಿಸಿ ನೀರು ಬರುವ ಹಾಗೆ ವ್ಯವಸ್ಥೆ ಮಾಡಿ ಪಕ್ಕಾ ಮಾಡುತ್ತಿದ್ದೇವೆ. ಅದಕ್ಕೆ ಕಾನೂನು ಏನು ಬೇಕಾಗಿಲ್ಲ. ಸಾಮಾನ್ಯ ರೈತನಿಗೂ ಇವತ್ತಿನದಿವಸ ಪ್ರಜ್ಞೆ ಇದೆ. ಯಾವುದೇ ಕೆರೆಯನ್ನು ನಾನು ಒತ್ತುವರಿ ಮಾಡಿಕೊಂಡರೆ ನನಗೆ ಮಂಜೂರು ಆಗುವುದಿಲ್ಲ. ಕಾನೂನಿನ ಪ್ರಕಾರ ಹೋರಾಟ ಮಾಡಿದರೆ ನಾನು ಜೈಲಿಗೆ ಹೋಗಬೇಕಾಗುತ್ತದೆ ಎನ್ನುವ ಸಾಮಾನ್ಯ ಕಾನೂನಿನ ಪರಿಜ್ಞಾನ ಪ್ರತಿಯೊಬ್ಬ ಹಳ್ಳಿಗರಿಗೂ ಇದೆ. ಸರ್ಕಾರ ಮಾಡಬೇಕಾಗಿರುವಂಥದ್ದು, ಆ ಕೆರೆಯನ್ನು ಅಭಿವೃದ್ಧಿ ಮಾಡಬೇಕು, ಆ ಕೆರೆಯನ್ನು ಉಳಿಸಬೇಕೆಂದರೆ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ, ರಾಜ ಕಾಲುವೆಗಳ ಒತ್ತುವರಿಯನ್ನು ಮೊದಲು ತೆರವುಗೊಳಿಸಬೇಕು. ಅದರ ಜೊತೆಗೆ ಕೆರೆ ಸರ್ವೆ ಮಾಡಿಸಿ ಒತ್ತುವರಿ ತೆರವು ಮಾಡಿ ಆ ಕೆರೆಯನ್ನು ಸಂಪೂರ್ಣವಾಗಿ ಅಭಿವೃದ್ಧಿ ಮಾಡುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಮಾನ್ಯ ಯಡಯೂರಪ್ಪನವರ ಕಾಲದಲ್ಲಿ ತಮಗೆ ಗೊತ್ತಿರುವಂತೆ ಒಂದೊಂದು ಕ್ಷೇತ್ರಕ್ಕೆ ಐದು ಕೋಟಿ ರೂ.ಗಳ ಹಣವನ್ನು ಕೊಟ್ಟರು. ಆಗ ಏನು ಮಾಡಿದರು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಿಗಳು ಸೇರಿಕೊಂಡರು. ಈ ಕೆರೆಗೆ ಹತ್ತು ಲಕ್ಷ ರೂ.ಗಳು, ಆ ಕೆರೆಗೆ 15 ಲಕ್ಷ ರೂ.ಗಳು ಎಂದು ಹಾಕಿಕೊಂಡರು. ಈಗ ಒಂದೊಂದು ಕೆರೆಯದ್ದು ಇತಿಹಾಸ ತೆಗೆಸಿ, ಕಳೆದ 15 ವರ್ಷಗಳಿಂದ ಎಷ್ಟು ಹಣ ಖರ್ಚು ಮಾಡಿದ್ದಾರೆ ಎಂದು. ಹೋದವರ್ಷ ತೆಗೆದಿದ್ದ ಗುಂಡಿಗೆ ಅರ್ಧ ಮೇಲುಗಡೆ ಮಾಲೀಷ್ ಮಾಡಿದರು. ಇನ್ನರ್ಧ ಗುಂಡಿ ತೆಗೆದರು. ಹಳೆ ಗುಂಡಿಗೆ ಅರ್ಧ ಬಿಲ್, ಹೊಸ ಗುಂಡಿಗೆ ಅರ್ಧ ಬಿಲ್. ಈ ರೀತಿ ಆದರೆ ಇನ್ನು 25 ವರ್ಷ ಅಲ್ಲ, 50 ವರ್ಷ ಆದರೂ ಯಾವ ಕೆರೆಯನ್ನೂ ನಾವು ಸಂಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸುವುದಕ್ಕೆ ಆಗುವುದಿಲ್ಲ. ನಾವು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಎಲ್ಲಾ ಮಂತ್ರಿಗಳೂ, ಸರ್ಕಾರಗಳೂ ಘೋಷಣೆ ಮಾಡುತ್ತಲೇ ಇವೆ. ಕೆರೆ ಒತ್ತುವರಿ ತೆರವುಗೊಳಿಸುತ್ತೇವೆ,

ಕೆರೆಗಳನ್ನು ಅಭಿವೃದ್ಧಿ ಮಡುತ್ತೇವೆ ಎಂದು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ, ಮಾಧ್ಯಮಗಳಲ್ಲಿ ಕೇಳುತ್ತಿದ್ದೇವೆ. ಆದರೆ ಯಾವ ಕೆರೆಯೂ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಆಗಿಲ್ಲ. ಸರ್ಕಾರ ಏನಾದರೂ ಮನಸ್ಸು ಮಾಡಿದರೆ ಆ ಕೆರೆಗಳನ್ನು ಅಭಿವೃದ್ಧಿಪಡಿಸಲು ಬೇಕಾದಂತಹ ಹಣವನ್ನು ಬಿಡುಗಡೆ ಮಾಡಲಿ. ನಮಗೇನೂ ಕಾನೂನು ಬೇಕಾಗಿಲ್ಲ, ಪ್ರಾಧಿಕಾರ ಬೇಕಾಗಿಲ್ಲ. ಇರುವ ಕಾನೂನಿನಲ್ಲಿಯೇ ನಾವು ತೆರವು ಮಾಡಿಸುತ್ತೇವೆ. ನಮ್ಮ ಕ್ಷೇತ್ರದಲ್ಲಿ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ. ಯಾವ ರೈತನೂ ಮುಂದೆ ಬರುವುದಿಲ್ಲ. ನಾನು ಬಿಡುವುದಿಲ್ಲವೆಂದು ಮುಂದೆ ಬರುವಂತಹ ರೈತ ಇಲ್ಲ. ನಾನೇ 2004ರಲ್ಲಿ ಐದು ಎಕರೆ ತೆಂಗಿನ ಮರ ಇದ್ದುದ್ದನ್ನು ತೆರವುಗೊಳಿಸಿದ್ದೇನೆ. ಯಾವ ರೈತನೂ ನಾನು ಉಳಿಸಿಕೊಳ್ಳುತ್ತೇನೆ, ನನಗೆ ಉಳಿಸಿಕೊಳ್ಳಬೇಕೆಂದು ಮುಂದೆ ಬರುವುದಿಲ್ಲ. ಹಣ ಕೊಡುತ್ತೇವೆ. ಕೆರೆ ಹೂಳು ಎತ್ತುತ್ತೇವೆ, ಕೆರೆ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದರೆ ಎಲ್ಲಾ ರೈತರೂ ಕೂಡ ಮುಂದೆ ಬರುತ್ತಿದ್ದಾರೆ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿರುವಂತಹ ಹೇಳಿಕೆ ಬಹಳ ಸಮಂಜಸವಾಗಿದೆ. ಮೊದಲು ರಾಜಕಾಲುವೆಗಳನ್ನು ತೆರವುಗೊಳಿಸಬೇಕು. ಕೆರೆಗಳ ಹೂಳನ್ನು ಎತ್ತಬೇಕು. ಸುಭದ್ರವಾಗಿ ಮಾಡಬೇಕು. ಕೆರೆಬಂಡೆಯನ್ನು ಅಭಿವೃದ್ಧಿ ಮಾಡಬೇಕು. ತೂಬುಗಳೇ ಇಲ್ಲ. ಯಾವ ಕೆರೆಗಳಲ್ಲಿಯೂ ಇವತ್ತು Major Irrigation Tanksನಲ್ಲಿ ತೂಬುಗಳೇ ಇಲ್ಲ. ತೂಬುಗಳನ್ನು ರಿಪೇರಿ ಮಾಡಬೇಕಾದರೆ ನನ್ನ ಕ್ಷೇತ್ರದಲ್ಲಿ ಮೂರು ಕೋಟಿ ರೂ.ಗಳು ಬೇಕು. ಕೇಳಿದರೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಇವತ್ತಿನದಿವಸ ಈ ಪರಿಸ್ಥಿತಿ ಇದೆ. ನೀರು ತುಂಬಿಕೊಂಡು ಏನಾಗಬೇಕು? ಸಣ್ಣ ನೀರಾವರಿ ಇಲಾಖೆಯಲ್ಲಿ ಮಳೆಗಾಲದಲ್ಲಿಯೂ ಕೂಡ ಕೆರೆ ತುಂಬುವುದಿಲ್ಲ. ಇವತ್ತಿನ ದಿವಸ ನೀರೇ ಬರುವುದಿಲ್ಲ. ನಾವು ಅಭಿವೃದ್ಧಿ ಮಾಡಿಕೊಂಡು ರಾಜ ಕಾಲುವೆಯ ಮೂಲಕ ಬಂದ ಅಷ್ಟೋ ಇಷ್ಟೋ ನೀರನ್ನು ಶೇಖರಣೆ ಮಾಡಿಕೊಂಡರೆ ಅಂತರ್ಜಲ ವೃದ್ಧಿಯಾಗುತ್ತದೆ. ದಯಮಾಡಿ ಅದಕ್ಕೆ ಪ್ರಾಶಸ್ತ್ಯ ಕೊಡಬೇಕೆಂದು ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಉಪಾಧ್ಯಕ್ಷರೆ, ಅವರಷ್ಟು ಮಾತನಾಡುವುದಿಲ್ಲ. . .

ಉಪಾಧ್ಯಕ್ಷರು:- ಮೊದಲು ರಮೇಶ್‌ಕುಮಾರ್‌ರವರು ಮಾತನಾಡುವುದನ್ನು ಪೂರೈಸಲಿ. ನಿಮಗೆ ಅವಕಾಶ ಕೊಟ್ಟಾಗ ಮಾತನಾಡಿ.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ):- ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು ನಿಮಿಷ. ನಾನೇನೂ ಭಾಷಣ ಮಾಡುವುದಿಲ್ಲ. ಇದರಲ್ಲಿಯೇ ಹೇಳಿಬಿಡುತ್ತೇನೆ. ಮಲೆನಾಡಿನಲ್ಲಿ ಕೆರೆಗಳಿಗೆ ಗುಡ್ಡಗಳಿಂದ ನೀರು ಬರುತ್ತದೆ. ಆ ಬರುವಂತಹ ನೀರು ಇದೆಯಲ್ಲಾ ಅದನ್ನು ಜನ ಈಗ ಏನು ಮಾಡಿದ್ದಾರೆಂದರೆ, ಇವರು ಕೆರೆಯದ್ದು ಮಾತ್ರ ತೀರ್ಮಾನ ಮಾಡುತ್ತಿದ್ದಾರೆ, ಮಾನ್ಯ ಮಂತ್ರಿಯವರು ಅದನ್ನು ಗಮನಿಸಬೇಕು. ಮೇಲುಗಡೆಯಿಂದ ಎಲ್ಲಿ ಹುಟ್ಟುತ್ತದೆಯಲ್ಲಾ ಸರ ಅಲ್ಲಿಯೇ PVC pipe ಹಾಕಿ ಅವರವರ ತೋಟಗಳಿಗೆ ತೆಗೆದುಕೊಂಡು ಹೋಗಿ gravity ಯಲ್ಲಿ sprinkler ಮಾಡುತ್ತಾರೆ. ಮೊದಲು ಕೆರೆಗೆ ಬರುವಂತಹ ಸಂಪನ್ಮೂಲ ನೀರಿನ ಮೂಲ ಯಾವುದು ಇದೆ ಆ ಮೂಲ ಕಾಪಾಡಿ ಕೆರೆಗೆ ಬರುವ ಹಾಗೆ ನೋಡಿಕೊಳ್ಳಿ. ಕೆರೆಗಳ ಒತ್ತುವರಿ ಏನೆಂದರೆ major ಒತ್ತುವರಿ ಮಲೆನಾಡಿನಲ್ಲಿ ಆಗುತ್ತಿರುವಂಥದ್ದು. ಕೆರೆಗಳು ದೊಡ್ಡದು ಇಲ್ಲ. ಮೇಲಿನಿಂದ, ಸರದಿಂದ ಬರುವಂತಹ ನೀರನ್ನೇ tap ಮಾಡಿ ಕಿ.ಮೀಗಟ್ಟಲೇ ತೆಗೆದುಕೊಂಡು ಹೋಗಿದ್ದಾರೆ.

ಉಪಾಧ್ಯಕ್ಷರು:- ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುವುದನ್ನು ಮುಂದುವರೆಸುವುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮೊದಲನೆಯದು ಈ title ಅನ್ನು change ಮಾಡಿ. ಎರಡನೆಯದು, eviction ಇವೆಲ್ಲಾ ಮರೆತುಬಿಡಿ. ಇವೆಲ್ಲಾ indirect ಆಗಿ encroach ಮಾಡಿಕೊಂಡವರಿಗೆ legal remedies ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅವರು ಯಾವುದೋ

Munsiff Court ಗೆ ಹೋಗುತ್ತಾರೆ, injunction ತೆಗೆದುಕೊಂಡು ಬರುತ್ತಾರೆ ಅದು ಅಲ್ಲಿಗೇ ಮುಕ್ತಾಯವಾಗುತ್ತದೆ. ಮೂರನೆಯದು, ನೀವು ರೂಲ್ಸ್ ಮೇಲೆ ಆಧರಿಸದೇ ಈ ಶಾಸನವನ್ನು ಇನ್ನಷ್ಟು ವಿಸ್ತೃತವಾಗಿ ರೂಪಿಸಿ de- silting ವಿಚಾರವನ್ನು ಅದರಲ್ಲಿ ಸ್ಪಷ್ಟವಾಗಿ ತರಬೇಕು. ಮತ್ತೆ ನೀವು ಯಾರ ಸಹಾಯವನ್ನು ತೆಗೆದುಕೊಳ್ಳುತ್ತಿರಿ, ಪೊಲೀಸರ ಸಹಾಯ ತೆಗೆದುಕೊಳ್ಳುತ್ತೀರೋ, ಇನ್ನೊಬ್ಬರ ಸಹಾಯ ತೆಗೆದುಕೊಳ್ಳುತ್ತಿರೋ ಎನ್ನುವುದು ನಮಗೆ ಗೊತ್ತಿಲ್ಲ. ಈಗ digital survey ಬಂದಿದೆ. ಒಂದು ಕ್ಷಣ ನಿಮ್ಮ ಟ್ಯಾಂಕ್ ಏರಿಯಾ ಏನಿದೆ ಅದನ್ನು ಸರ್ವೆ ಮಾಡಿದರೆ ಅಲ್ಲಿಂದ ಒಂದು ಗಂಟೆಯಲ್ಲಿ ಈಗ JCB ಗಳಿವೆ ಉದ್ದಕ್ಕೂ ಒಂದು trench ಹೊಡೆದುಕೊಂಡು ಹೋದರೆ, trench ಹೊಡೆದು ಮೇಲೆ ಕೆರೆ ಏರಿಯಾದೊಳಗೆ ಯಾರು ಬಂದಿರುತ್ತಾರೆ he is as good as evicted. ಅವನು ಹೇಗೆ ಹೋಗುತ್ತಾನೆ? ಹೊರಗೇ ಹೋಗುವುದಕ್ಕೆ ಆಗುವುದಿಲ್ಲ. ಕಷ್ಟಪಟ್ಟು ಆ ಗುಂಡಿಯೊಳಗೆ ಇಳಿದು ಆಚೆಗೆ ಹೋಗಬೇಕು. ಆಮೇಲೆ ಮುಂದಕ್ಕೆ ಅವನು ಬರುವುದೇ ಇಲ್ಲ. ಈ eviction ಕಥೆಗಳೆಲ್ಲಾ ಹೇಳುವುದಕ್ಕೆ ಹೋಗಬೇಡಿ. ಇವೆಲ್ಲಾ ಆಗದೇ ಇರುವುದು. De-silting ಗೆ systematic ಆಗಿ ಮಾಡಿ. ಎಲ್ಲಾ tanks rejuvenate ಆಗಬೇಕು. ಯಾವ ಕೆರೆಗೆ ಉದ್ದೇಶಿತ ಅಚ್ಚುಕಟ್ಟು ಎಷ್ಟಿತ್ತೊ ಅಷ್ಟೂ ಸಮೃದ್ಧಿಯಾಗಿ ಅಚ್ಚುಕಟ್ಟು ಆಗುವಂಥದ್ದನ್ನು ಮಾಡಬೇಕು. ಇದರ ಜೊತೆಗೆ ದಯಮಾಡಿ ಊರುಗಳಲ್ಲಿದ್ದ ಕಲ್ಯಾಣಿಗಳು ಏನಿದ್ದವು, ಕೆರೆಕುಂಟೆಗಳು ಏನಿದ್ದವು, non Minor Irrigationಗೆ ಬರುವಂತಹ tank ಅವುಗಳನ್ನೂ ತೆಗೆದುಕೊಂಡು ಬನ್ನಿ, ನಿಮ್ಮ ಅಧಿಕಾರವನ್ನು ಜಾಸ್ತಿ ಮಾಡಿಕೊಳ್ಳಿ. ಸಂತೋಷವಾಗಿ ನಿಮಗೆ ಅಧಿಕಾರ ಕೊಡುತ್ತೇವೆ. NREG ಹಣವನ್ನು ಬಳಸಿಕೊಳ್ಳಿ. ಉಳಿದಿದ್ದನ್ನೂ ಬಳಸಿಕೊಳ್ಳಿ. ಒಂದು ಕಲ್ಯಾಣಿ ಊರಿನ ಮಧ್ಯೆ ಇದ್ದರೆ ಎಂತಹ ಬರಗಾಲದಲ್ಲಿಯೂ ಕೂಡ ನಮ್ಮ ಹಳ್ಳಿಗಳಲ್ಲಿ ಧನಕರುಗಳಿಗೆ ಕುಡಿಯುವುದಕ್ಕೆ ನೀರು ಆಗುತ್ತಿತ್ತು. ಊರಿನ ಜನ ಅದನ್ನೆಲ್ಲಾ ಉಪಯೋಗಿಸಿಕೊಳ್ಳುತ್ತಿದ್ದರು. Recharging ಆಗುತ್ತಿತ್ತು. ಈಗ ನಾವು ಕೆರೆ ಅಂಗಳದಲ್ಲಿ ಹೋಗಿ ಬೋರ್ ಹಾಕಿದರೂ ಕೂಡ ರಾತ್ರಿ ಒಂದು ಅಗ್ರಹಾರ ಊರಿನಲ್ಲಿ 1300 ಅಡಿ ತೋಡಿದರೂ ಕೂಡ ನಿರು ಸಿಗುತ್ತಿಲ್ಲ.

ಅಲ್ಲಿಗೆ ಬಂದು ನಾವು ನಿಂತಿದ್ದೇವೆ. ಇದನ್ನು ನಾಮಕಾವಸ್ತೆಗೆ ಮಾಡುವುದು ಬೇಡ. ಮಾನ್ಯ ಸಚಿವರಾದ ಶ್ರೀ ಬಿ. ರಮಾನಾಥ ರೈರವರು ಇದನ್ನು ಕ್ಯಾಬಿನೆಟ್‌ನಲ್ಲಿ ಈ ಸುದೀರ್ಘವಾಗಿ ಚರ್ಚೆ ಮಾಡುತ್ತೇನೆಂದು ಹೇಳಿದರು. ನೀವು ಮಾಡುತ್ತೀರೆಂಬ ವಿಶ್ವಾಸ ನಿಮ್ಮ ಮೇಲೆ ನಮಗೆ ಇದೆ. ಎಲ್ಲೋ ಚರ್ಚೆ ಮಾಡುವಾಗ ನಾನು ಹೇಳುವಂತಹ ವಿಚಾರವನ್ನು ಮರೆತುಬಿಟ್ಟಿದ್ದೀರಿ. ದಯಮಾಡಿ ಇದನ್ನು ತಾವು ಗಮನಕ್ಕೆ ತೆಗೆದುಕೊಂಡು ಇನ್ನೊಂದು ಸಾರಿ ಸುದೀರ್ಘವಾಗಿ ಚರ್ಚೆ ಮಾಡಿ ಎಲ್ಲಾ ಬಂದೋಬಸ್ತು ಮಾಡಿಕೊಂಡು ಈ ಬಿಲ್ಲನ್ನು ತಂದರೆ ಇಲ್ಲಿ ಎಲ್ಲರನ್ನು ಸಂತೋಷವಾಗಿ ಒಪ್ಪಿಸಬಹುದು, ಎರಡು ನಿಮಿಷದಲ್ಲಿ ಸದನವು ಈ ಮಸೂದೆಯನ್ನು ಪಾಸು ಮಾಡಿಕೊಡಬಹುದು. ನಾನು ಈ ಬಗ್ಗೆ ಜವಾಬ್ದಾರಿಯಾಗಿ ಸಲಹೆಯನ್ನು ಕೊಡುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಸಿರ್ಸಿ):- ಮಾನ್ಯ ಉಪಾಧ್ಯಕ್ಷರೆ, ಕೆರೆ ಅಭಿವೃದ್ದಿ ಪ್ರಾಧಿಕಾರ ವಿಧೇಯಕ 2014 ಈಗಾಗಲೇ ಎಲ್ಲಾ ಹಿರಿಯ ಸದಸ್ಯರುಗಳು ಮಾತನಾಡಿದಂತೆ ಇದೊಂದು ಸಮಗ್ರವಾಗಿ ಪರಿಪೂರ್ಣವಾಗಿ ಬಂದಿರುವುದಿಲ್ಲ. ಇದನ್ನು ತರಾತುರಿಯಲ್ಲಿ ಈ ಒಂದು ಬಿಲ್ಲನ್ನು ತಂದಿರುವುದು ಮೇಲ್ನೋಟಕ್ಕೆ ನಮಗೆಲ್ಲರಿಗೂ ಸಾಭೀತಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು 2013-14ನೇ ವರ್ಷದ ಬಜೆಟ್ ಅನ್ನು ಮಂಡಿಸುವಾಗ ಕರ್ನಾಟಕದಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಸುಮಾರು 3,579 ಕೆರೆಗಳು ಹಾಗೂ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಸುಮಾರು 26,000 ಕೆರೆಗಳಿವೆ. ಈ ಎಲ್ಲವುಗಳು ಕ್ರಮಬದ್ಧ ಅಭಿವೃದ್ದಿಗೋಸ್ಕರ "ಕೆರೆ ಅಭಿವೃದ್ಧಿ ಪ್ರಾಧಿಕಾರ" ರಚಿಸಲಾಗುವುದು ಎಂದು ಹೇಳಿದ್ದಾರೆ. ಆ ವರ್ಷ ಸರ್ಕಾರಕ್ಕೆ ಮಾಡುವುದಕ್ಕಾಗಲಿಲ್ಲ. ಅದಂತೂ ಮೇಲ್ನೋಟಕ್ಕೆ ನಮ್ಮ ಗಮನಕ್ಕೆ ಬರುತ್ತದೆ. ಇದನ್ನು ಆ ವರ್ಷವೇ ಮಾಡಬೇಕಾಗಿತ್ತು. ಕೆರೆಗೆ ಇರುವಂತಹ ಪ್ರಾಮುಖ್ಯತೆ ಅದರ ಬಗ್ಗೆ ಸರ್ಕಾರಕ್ಕೆ ಇರುವಂತಹ ಬದ್ಧತೆಯ ಹಿನ್ನೆಲೆಯಲ್ಲಿ ಆ ವರ್ಷವೇ ಈ ಕೆರೆ ಅಭಿವೃದ್ಧಿ ಪ್ರಾಧಿಕಾರದ ಬಿಲ್ಲನ್ನು ತರಬೇಕಾಗಿತ್ತು. ನಾನು ಬಹುಶಃ ಮೊದಲೇ

ಮಾತನಾಡಿದ್ದರೆ ನನಗೆ ಗೊತ್ತಾಗುತ್ತಿರಲಿಲ್ಲ. ಮಾನ್ಯ ಸದಸ್ಯರಾದ ಶ್ರೀ ಕೆ.ಆರ್. ರಮೇಶ್ ಕುಮಾರ್‌ರವರ ಒತ್ತಡದಿಂದ ಈ ಬಿಲ್ಲನ್ನು ತಂದಿದ್ದಾರೆಂದು ನನಗೆ ಗೊತ್ತಾಗುತ್ತಿದೆ. ಏಕೆಂದರೆ ತಾವು ಮಾನ್ಯ ಮುಖ್ಯಮಂತ್ರಿಗಳಿಗೊಂದು ಪತ್ರ, ಅವರಿಗೊಂದು ಪತ್ರ ಬರೆದು ನೀವು ಹೀಗೆ ಹೇಳಿದ್ದೀರಿ ಎಂದು ಅವರು ಎಚ್ಚರಿಕೆ ಮಾಡಿದ ಮೇಲೆ ಬಹುಶಃ ಆ ಕಾರಣದಿಂದ ಈ ಬಿಲ್ಲು ಬರುತ್ತಿದೆಯೋ ಏನೋ ಏಕೆಂದರೆ, ...

ಶ್ರೀ ಕೆ.ಆರ್. ರಮೇಶ್ ಕುಮಾರ್:- ನೀವು ಹೀಗೆ ಹೇಳಿದರೆ ಪೇಪರ್‌ನವರು ರಮೇಶ್ ಕುಮಾರ್‌ರವರು ಒತ್ತಡ ಮಾಡಿ ಬಿಲ್ಲನ್ನು ತರಿಸಿದ್ದಾರೆಂದು ನನ್ನ ಮೇಲೆ ಆರೋಪ ಮಾಡಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಇದು ಒಂದು ಒಳ್ಳೆಯ ಬಿಲ್ ಆಗಿದೆ. ಹಾಗೇ ಬರೆದರೆ ಒಳ್ಳೆಯದೆ.

ಶ್ರೀ ಕೆ.ಆರ್. ರಮೇಶ ಕುಮಾರ್:- ಮಾನ್ಯ ಕಾಗೇರಿಯವರೆ, ತಾವು ಹೇಳುವುದನ್ನು ಸರಿಯಾಗಿ ಹೇಳಿ, ಈ competition ನಲ್ಲಿ T.V.ಗಳು ಪೇಪರ್‌ನವರು ಏನು ಮಾಡುತ್ತಾರೋ ಗೊತ್ತಾಗುವುದಿಲ್ಲ. ಅವರು TRP ಅನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಒಬ್ಬರ ಮೇಲೆ ಒಬ್ಬರು competitionಗೆ ಬಿದ್ದು ನಮ್ಮನ್ನು ಬಲಿಕೊಟ್ಟುಬಿಡುತ್ತಾರೆ. Please, Protect me.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಸಣ್ಣ ನೀರಾವರಿ ಸಚಿವರಿಗೆ ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು 2013-14ನೇ ಸಾಲಿನ ಬಜೆಟ್‌ನಲ್ಲಿ ಹೇಳಿದ ಮೇಲೆ ಅದು ಆಗಲೇ ಬರಬೇಕಾಗಿತ್ತು. ಇದು ಬಂದಿಲ್ಲವೆಂದರೆ ನಿಮ್ಮ ಬದ್ಧತೆಯಲ್ಲಿ ಎಲ್ಲೋ ಒಂದು ಕಡೆಯಲ್ಲಿ ಸಡಿಲತೆ ಇದೆ ಎನ್ನುವುದು reflect ಆಗುತ್ತದೆ. ನಾನು ಅದನ್ನೇ ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ವರ್ಷದ 2014-15ನೇ ಸಾಲಿನ ಬಜೆಟ್‌ನಲ್ಲಿ ಇದೊಂದು ತರಹ slogan ಆಗುತ್ತಿದೆಯೇನೋ ಎಂದು ನಾನು ಹೇಳುತ್ತಿದ್ದೇನೆ. ರಾಜ್ಯದಲ್ಲಿ ಹಳೆಯ ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದು

ಅವಶ್ಯವಿದ್ದು, ಈ ದಿಸೆಯಲ್ಲಿ ಕೆರೆಯ ಅಭಿವೃದ್ಧಿ ನಾಡಿನ ಶ್ರೇಯೋಭಿವೃದ್ಧಿ ಎಂಬ ಕಾರ್ಯಕ್ರಮದಡಿ 2014–15ನೇ ಸಾಲಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದು ಕೆರೆಯನ್ನು ಸಮಗ್ರವಾಗಿ ಆಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ನೀವು ಒಂದು ಕಡೆಯಲ್ಲಿ 26,000 ಕೆರೆಗಳು, 3579 ಕೆರೆಗಳನ್ನು ಅಭಿವೃದ್ಧಿಪಡಿಸುತ್ತೇವೆನ್ನುವುದರ ಕಡೆಗೆ ಪ್ರಾಮುಖ್ಯತೆಯನ್ನು ಹೇಳುತ್ತೀರಿ. ಅದಕ್ಕಾಗಿ ಈ ಒಂದು ವಿಧೇಯಕವನ್ನು ತರುತ್ತಿದ್ದೇವೆಂದು ಹೇಳುತ್ತೀರಿ. ನೀವು ಏನು ಮಾಡುತ್ತೀರೆಂದು ಕೇಳಿದಾಗ ಕ್ಷೇತ್ರಕ್ಕೆ ಒಂದು ಕೆರೆಯಂತೆ 224 ಕೆರೆಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಿರಿ. ಆದರೆ ಇಲ್ಲಿ ಹೇಳುವುದೇನೆಂದರೆ **"ಕೆರೆಗಳ ಅಭಿವೃದ್ಧಿ ನಾಡಿನ ಶ್ರೇಯೋಭಿವೃದ್ಧಿ"** ಈ ಹೆಸರು ಮತ್ತು ಘೋಷಣೆಗಳನ್ನು ಕೊಟ್ಟು ನಾವು ಅದಕ್ಕೆ ತೋರಿಸಬೇಕಾದ ಬದ್ದತೆಯನ್ನು ತೊರಿಸುವುದರಲ್ಲಿ ಎಲ್ಲೋ ಒಂದು ಕಡೆಯಲ್ಲಿ ವಿಫಲರಾಗುತ್ತಿದ್ದೇವೆ. ನೀವು ಬಜೆಟ್‌ನಲ್ಲಿ 224 ಕೆರೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಹೇಳುತ್ತೀರಿ. ಅಂದರೆ ಕೆರೆಯನ್ನು ಸರಿಯಾಗಿ ಅಭಿವೃದ್ಧಿಪಡಿಸುವುದು. ಏನು ತಾವು ಈ ಪ್ರಾಧಿಕಾರದ ವಿಷಯವನ್ನು ತಂದಿದ್ದೀರಿ, ಇದರಲ್ಲಿ ನೀವು ನನಗೆ ಒಂದು ಸ್ಪಷ್ಟಗೊಳಿಸಬೇಕು. ನೀವು ಇಲ್ಲಿ ನಗರಕೆರೆಗಳನ್ನು ಬಿಟ್ಟಿರುವುದು ಮೊದಲನೆಯದಾಗಿ ತಪ್ಪಾಗಿರುವುದು. ಅದಕ್ಕೆ ತಾವು ಬೇರೆ ಕಾರಣಗಳನ್ನು ಹೇಳಿದ್ದೀರಿ. ಆ ಕಾರಣಗಳನ್ನು ಒಪ್ಪುವುದಲ್ಲ. ಒಂದು ಅಭಿವೃದ್ಧಿ ಪ್ರಾಧಿಕಾರ ಎಂದು ಮಾಡಿದ ಮೇಲೆ ಇದು ಸಮಗ್ರವಾಗಿರಬೇಕು. ನಾಳೇ ದಿನ ಇದನ್ನೇ shelter ತೆಗೆದುಕೊಂಡು ನಗರದ ಕೆರೆ ಬೇರೆ, ಗ್ರಾಮೀಣ ಕೆರೆದು ಬೇರೆ, ಅದು ಬೇರೆ ಇದು ಬೇರೆ ಎಂದು ಇನ್ನೇನು activitiesಗಳನ್ನು ಮಾಡಿಬಿಡುತ್ತಾರೆ. ಕೆರೆ ಅಂದರೆ ಕೆರೆ ಇರಬೇಕು, ಕೆರೆ ಅಂದರೆ ಅಲ್ಲಿ ನೀರು ನಿಲ್ಲುವುದು. ನೀರು ಇದರಲ್ಲಿ ಗ್ರಾಮೀಣ ಕೆರೆ ಬೇರೆ, ನಗರದ ಕೆರೆ ಬೇರೆ, ಆ ಕೆರೆಗಳಲ್ಲಿ ನೀವು ಬೇರೆ ಯಾವುದನ್ನು ಏತಕ್ಕಾಗಿ ಹುಟ್ಟುಹಾಕುತ್ತೀರಿ. ನೀವು ಈ ಬಗ್ಗೆ ಸಮಗ್ರವಾಗಿ ಬಿಲ್ ಅನ್ನು ತರಬೇಕು. ನೀವು ತಂದಿರುವಂತಹ ಬಿಲ್ ಅನ್ನು ನೋಡಿದರೆ ಇದಕ್ಕೆ ಹಲ್ಲಿಲ್ಲ, ಬಾಯಿ ಇಲ್ಲ, ನಾಲಿಗೆ ಇಲ್ಲ ಎಂತಹದ್ದು ಇಲ್ಲದ್ದು ಎಂದು ಕಾಣುತ್ತದೆ. ನಾನು ಇತ್ತೀಚಿಗೆ ನೋಡುವಂತಹದ್ದು ಶಾಸನಸಭೆ

1980ರ Forest Conservation Act. ಅದರಂತಹ ಪರಿಣಾಮಕಾರಿಯಾದಂತಹ ಕಾನೂನು ಇತ್ತೀಚಿನ ದಿನದಲ್ಲಿ ಬಂದಿರುವುದನ್ನೇ ನಾನು ನೋಡಿಲ್ಲ. ಆ Act ನಾಲ್ಕು ಪೇಜ್‌ಗಳನ್ನು ಒಳಗೊಂಡಿದ್ದು ಬಹಳ ಸಣ್ಣದು ಇದೆ. ಆ Conservation Actನ ಕಾರಣದಿಂದಾಗಿ ಇವತ್ತು ನಾವುಗಳು ಹೇಗೆ ಒದ್ದಾಡುತ್ತಿದೆ ಎಂದು ನೋಡುತ್ತಿದ್ದೇವೆ. ಇಡೀ ದೇಶ, ಬರೀ ಕರ್ನಾಟಕ ಒಂದೇ ಅಲ್ಲ, ಅದು ನೋಡುವುದಕ್ಕೆ ಸಣ್ಣ act ಆಗಿದೆ. ಆದರೆ ಅದರ ಪರಿಣಾಮ ಮಾತ್ರ ಇಷ್ಟು ಬಲವಾಗಿದೆ ಅದು ಆಗಬೇಕಾಗಿದ್ದು, ಅದನ್ನು ಆಗುವುದಕ್ಕೆ ಬಿಡುತ್ತಿಲ್ಲವೆಂದು ಆ ವಿಷಯ ಬೇರೆ. ಆದರೆ Forest ಅನ್ನು ರಕ್ಷಿಸಬೇಕೆನ್ನುವುದಕ್ಕೆ ಬದ್ಧತೆಯನ್ನು ತೋರಿಸಿರುವುದು ಇದೆಯಲ್ಲಾ, ಅದರಲ್ಲಿ ಬೇರೆ ಬೇರೆ ತೊಂದರೆ ಇರುವ ತೊಡಕುಗಳು ಭಾಗ ಬೇರೆ ಇದೆ. ಅದರ ಬಗ್ಗೆ ನಾವು ಬೇರೆ ರೀತಿಯಲ್ಲಿ ಯೋಚಿಸಬೇಕಾಗಿರುವುದು ಇದೆ. ಆದರೆ ಒಂದು act ಎಷ್ಟು ಪರಿಣಾಮಕಾರಿಯಾಗಿ ಬರಬಹುದು ಎನ್ನುವುದಕ್ಕೆ ಅದೊಂದು ಉದಾಹರಣೆಯಾಗಿದೆ. ಈ ಬಿಲ್‌ನ ಒಳಗಡೆ ಏನಿದೆ? ಸುಮ್ಮನೆ ಕಾಟಾಚಾರಕ್ಕೆ ತಂದಿರುವಂತಹ act ಎಂದು ಅನಿಸುತ್ತದೆ. ಹಾಗಾಗಿ ಇಲ್ಲಿ ನೀವು ನಗರವನ್ನು ಬಿಟ್ಟು ಮಾಡಿರುವುದೇ ತಪ್ಪಾಗಿದೆ. ನೀವು ನಗರವನ್ನು ಸೇರಿಸಿಕೊಂಡೆ ಈ ಬಿಲ್ ಅನ್ನು ಮಾಡಬೇಕಾಗಿತ್ತು. ನೋಡಿ, ಕೆರೆಯ ಬಗ್ಗೆ ಯಾರಿಗೂ ಸಹ ನಾವು ಅದರ ಬದ್ಧತೆಯನ್ನು ಪ್ರಶ್ನಿಸುವಂತಹ ವಿಷಯವಿಲ್ಲ. ಕೆರೆಗಳು ಉಳಿಯಬೇಕು, ಕೆರೆಗಳ ಅಭಿವೃದ್ಧಿಯಾಗಬೇಕು, ಕೆರೆಗೆ ನೀರು ಬರಬೇಕು, ಕೆರೆಯ ನೀರು ರೈತರ ಹೊಲಗದ್ದೆಗಳಿಗೆ ಹೋಗಬೇಕು, ಭೂಮಿಯಲ್ಲಿ ನೀರು ಇಂಗಬೇಕು, ಅದರಿಂದಾಗಿ ರೈತರು, ಪಶುಪಕ್ಷಿ ಪ್ರಾಣಿಗಳು, ಮನುಷ್ಯರು ನಾವೆಲ್ಲರೂ ಕೂಡ ಆ ಕೆರೆಯಿಂದ ಬದುಕಬೇಕು ಎಂದು ನಮಗೆಲ್ಲರಿಗೂ ಇದೆ. ಕೋಲಾರದಲ್ಲಿ ನೀರಿನ ಸಮಸ್ಯೆಯನ್ನು ಇಷ್ಟೊಂದು ಅನುಭವಿಸುತ್ತಿದೆಯಲ್ಲಾ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಈ ಭಾಗದಲ್ಲಿ ಕೆರೆಯನ್ನು ನಿರ್ಲಕ್ಷ್ಯ ಮಾಡಿರುವುದೇ ಪರಿಣಾಮವಾಗಿದೆ. ಕೆರೆಗೆ ನೀರು ಹೋಗದೆ ಇರುವುದರಿಂದಾಗಿಯೇ ಪರಿಣಾಮವಾಗಿದೆ. ಇದಕ್ಕಾಗಿ ನಾವು ಸಾವಿರಾರು ಕೋಟಿ ರೂಪಾಯಿಗಳ

ಯೋಜನೆಯನ್ನು ಮಾಡುತ್ತೇವೆ ಇದು ಯಾವಾಗ ಮುಗಿಯುತ್ತದೆಯೋ ಅದರ ಫಲ ಏನಾಗುತ್ತದೆಯೋ ಅದನ್ನು ಮುಂದೆ ನಾವು ನೋಡೋಣ. ಅದರ ಅರ್ಧ ಭಾಗದ ಹಣವನ್ನು ಕೆರೆಗಳಿಗಾಗಿ ಅಭಿವೃದ್ಧಿಪಡಿಸಿದ್ದರೆ ನಮಗೆ ನೀರಿನ ಅಭಾವದ ಸ್ಥಿತಿ ಬರುತ್ತಿರಲಿಲ್ಲ. ಹಾಗಾಗಿ ಕೆರೆಯನ್ನು ಅಭಿವೃದ್ಧಿಪಡಿಸುವುದರಲ್ಲಿ ಭಿನ್ನಾಭಿಪ್ರಾಯಗಳೇ ಇಲ್ಲ. ಆದರೆ ನೀವು ಕಾಟಾಚಾರಕ್ಕಾಗಿ ಈ ಬಿಲ್ ಅನ್ನು ತಂದು ನಾವೇನೋ ಮಾಡುತ್ತಿದ್ದೇವೆಂದು ನೀವು ಭಾಷಣ ಮಾಡುವುದಕ್ಕಾಗಿ ಒಂದು ವಿಷಯವನ್ನು ಇಟ್ಟುಕೊಂಡರೆ ಇದು ಆಗುವುದಿಲ್ಲ. ಹಾಗಾಗಿ ಈ ಬಿಲ್‌ನಲ್ಲಿ ನಗರವನ್ನು ಸೇರಿಸಿಕೊಂಡು ಸಮಗ್ರವಾಗಿ ಬರಬೇಕು. ಇದರಲ್ಲಿ ಮಾಲೀಕತ್ವ ಬೇರೆ ಬೇರೆ ಇದೆ. Minor Irrigation ಕೆರೆ ಬೇರೆ ಇದೆ, Major Irrigation ಕೆರೆ ಬೇರೆ ಇದೆ, Zilla Panchayath ಕೆರೆ ಬೇರೆ ಇದೆ, ಪಂಚಾಯಿತಿ ಕೆರೆ ಬೇರೆ ಇದೆ, forest ಕೆರೆ ಬೇರೆ ಇದೆ,

ಶ್ರೀ ಈ ತುಕಾರಾಂ:- ಮಾನ್ಯ ಕಾಗೇರಿಯವರೆ, ನಿಮಗೆ ನಾನು ಬೆಂಬಲವಾಗಿ ಹೇಳುತ್ತೇನೆ. ಇಲ್ಲಿ ಏನಾಗಿದೆ ಎಂದರೆ, ನಮ್ಮ ಸಂಡೂರಿನ ಶಿವಪುರ ಕೆರೆ ಎಂದು ಇದೆ ಅದು ಸುಮಾರು ಹೊಲಗಳಿಗೆ ನೀರು ಬರುತ್ತಿದೆ, ಅದು ಜಿಲ್ಲಾ ಪಂಚಾಯಿತಿಯಲ್ಲಿಲ್ಲ, ಸಣ್ಣ ನೀರಾವರಿಯಲ್ಲಿಯೂ ಇಲ್ಲ, ಅದು ಯಾವುದರಲ್ಲಿಯೂ ಇಲ್ಲ. ಅಂತಹ ಕೆರೆಗಳು ಬಹಳಷ್ಟು ಇವೆ. ಅದನ್ನು ಸಣ್ಣ ನೀರಾವರಿ ಇಲಾಖೆಯಲ್ಲಿಯೂ ತೆಗೆದುಕೊಳ್ಳಬಹುದು, ಜಿಲ್ಲಾ ಪಂಚಾಯಿತಿ ಕೆರೆಯಲ್ಲಿಯೂ ಸಹ ತೆಗೆದುಕೊಳ್ಳಬಹುದು. ಅದರ ಬಗ್ಗೆ ಎಲ್ಲಾ ಕಡೆಯಿಂದಲೂ report ತರಿಸಿಕೊಂಡು ಈ ಬಿಲ್‌ನಲ್ಲಿ ಸೇರಿಸಿಕೊಂಡರೆ ಅನುಕೂಲವಾಗುತ್ತದೆ. ಆಮೇಲೆ ಓಬಳಾಪುರದ ಹುಲಿಕುಂಟೆ ಕೆರೆ. ಅದೊಂದು ಕೆರೆ ಇದ್ದು ಸುಮಾರು ಅದರಿಂದ 50-60 ಎಕರೆಗೆ ನೀರಾವರಿಯಾಗುತ್ತಿದೆ. ಅಂತಹ ಕೆರೆಗಳನ್ನು ತೆಗೆದುಕೊಂಡರೆ ಅನುಕೂಲವಾಗುತ್ತದೆ. ಈ ಬಗ್ಗೆ ರಾಜ್ಯದಲ್ಲಿ ಎಷ್ಟು ಕೆರೆಗಳು ಇದೆ ಎಂದು ತಾವು ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಬೇರೆ ಬೇರೆ ಮಾಲೀಕತ್ವದಲ್ಲಿ ಇರುವಂತಹ ಕೆರೆಗಳು ಸಾಕಷ್ಟು ಇವೆ. ಅದನ್ನು ಈ ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸುವುದಕ್ಕೆ ಈ ಕಾನೂನಿನಲ್ಲಿ ಆಗುತ್ತದೆಯೇ? ಮಾಲೀಕತ್ವ ಅವರದ್ದು ಇದ್ದರೆ ನಾಳೆ ಏನಾಗುತ್ತದೆ ಎಂದರೆ ಏನೇ ತಂಟೆತಕರಾರು ಬಂದರೆ ನೀವು ಇಲ್ಲಿ ಹೇಳಿದ್ದೀರಲ್ಲಾ ನೋಟಿಸ್ ಕೊಟ್ಟು fine ಹಾಕಿ ಶಿಕ್ಷೆ ಕೊಟ್ಟು ಇದೆಲ್ಲದಕ್ಕೂ ಕೂಡ ತೊಂದರೆಯಾಗುತ್ತದೆ. ಇದರ ಮೂಲ ಮಾಲೀಕತ್ವ ಇರುವುದು ಯಾರು ಹತ್ತಿರ? ಅದು Forest Department, Zilla Panchayath, Minor Irrigation & Major Irrigation, Revenue Department ಈ ರೀತಿಯಾಗಿ ಇರುತ್ತದೆ. ಈ ಅಭಿವೃದ್ಧಿ ಪ್ರಾಧಿಕಾರಕ್ಕೆ ಆ Ownership ಅನ್ನು ಇವರು transfer ಮಾಡಿಕೊಡುತ್ತಾರಾ? ನೀವು ಆ ಬಗ್ಗೆ ಸ್ಪಷ್ಟಗೊಳಿಸಬೇಕಾಗಿದೆ. ಇಲ್ಲಿ Owner Ship ಕೆರೆ ಅಭಿವೃದ್ಧಿ ಪ್ರಾಧಿಕಾರದ್ದು ಇರುತ್ತದೆಯೋ ಅಥವಾ ಅವರವರದ್ದೇ ಇರುತ್ತದೆಯೋ, ಇಲ್ಲಿ ಅವರವರದ್ದೆ ಇದ್ದರೆ ಈ ಅಭಿವೃದ್ಧಿ ಪ್ರಾಧಿಕಾರಕ್ಕೂ ಮತ್ತು ಯಾರದ್ದು Owner ship ಇರುತ್ತದೆಯಲ್ಲಾ ಅವರಿಗೂ ತಂಟೆತಕರಾರು ಜಗಳ ಪ್ರಾರಂಭವಾಗುತ್ತದೆ. ಆಮೇಲೆ ಇದನ್ನು ಯಾರು encroachment ಮಾಡಿರುತ್ತಾರಲ್ಲಾ ಅವರು safe ಆಗಿಬಿಡುತ್ತಾರ. ಇಲಿ ಇವರ ತಂಟೆತಕರಾರು ಜಗಳ ಪ್ರಾರಂಭವಾಗುತ್ತದೆ. ಹೀಗಾಗಿ ಇದರಲ್ಲಿ ಸಾಕಷ್ಟು ambiguity ಇದೆ. ಇದನ್ನು ಸರಿಪಡಿಸಿಕೊಳ್ಳುವಂತಹ ಅಗತ್ಯತೆ ಇದೆ. ನಾನು ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಕೆರೆಗೆ ನೀರು ಬರುವ ವಿಷಯದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಜೀವರಾಜ್‌ರವರು ಸಣ್ಣದಾಗಿ ಉಲ್ಲೇಖ ಮಾಡಿದರು. ಆ ಕೆರೆಗಳಿಗೆ ಬರದ ರೀತಿಯಲ್ಲಿ ಅಡೆತಡೆಗಳಾಗುವುದು ಇದೆ. ಅದಕ್ಕೆ ಈ ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಇಲ್ಲಿ ಏನು ಬರುತ್ತದೆ? ಕೆರೆಯಲ್ಲಿ silt, ಹೂಳು ತೆಗೆಯುವ ವಿಷಯವನ್ನು ಹೇಳಿದರು. ಆ ಕೆರೆಯ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಬಳಕೆದಾರರ ಸಂಘ ಎಂದು ಬೇರೆ ಬೇರೆ ಇದ್ದು, ಅದು ಹೇಗೆ ಕಾರ್ಯ ನಿರ್ವಹಿಸುತ್ತದೆ. ಕೆರೆಗೆ ನೀರು ಬರಬೇಕು, ನೀರು ಸಂಗ್ರಹ ಆಗಬೇಕು, ಆ ಸಂಗ್ರಹ ಆದ ನೀರು ಬಳಕೆಯಾಗಬೇಕು, ನೀರು ಬರುವುದಕ್ಕೆ

ಮತ್ತು ಬಳಕೆಗೆ ಈ ಪ್ರಾಧಿಕಾರವು ಹೇಗೆ ಕೆಲಸ ಮಾಡುತ್ತದೆ ಎಂದು ಗೊತ್ತಿಲ್ಲ. ಇದು ಹೇಗೆ ಕೆಲಸ ಮಾಡುತ್ತದೆ ಎಂದು ಹೇಳಬೇಕಲ್ಲಾ? ಈಗಾಗಲೇ ನೀವು ಬೇರೆ ಬೇರೆ ಯೋಜನೆಯಲ್ಲಿ ನೀರು ಬಳಕೆದಾರರ ಸಂಘಗಳು ಮಾಡಿದ್ದೀರಿ. ಆ ಸಂಘದವರು ಆಮೇಲೆ ಈ ಕೆರೆ ಅಭಿವೃದ್ಧಿ ಪ್ರಾಧಿಕಾರದವರು ಇವರಿಗೂ ಮತ್ತು ಅವರಿಗೂ ತಂಟೆತಕರಾರು ಶುರುವಾಗುತ್ತದೆ. ನಮ್ಮ ಅಧಿಕಾರ ಇದಲ್ಲ, ನಿಮ್ಮ ಅಧಿಕಾರ ಇದಲ್ಲ ಎಂದು ಶುರುವಾಗುತ್ತದೆ. ಹಾಗಾಗಿ ಇದರ ಬಗ್ಗೆಯೂ ಕೂಡ ಸ್ಪಷ್ಟತೆ ಬರಬೇಕು. ಈಗ ಇರುವಂತಹ ಕೆರೆಗಳನ್ನು ಉಳಿಸಿಕೊಳ್ಳುವುದರ ಜೊತೆಯಲ್ಲಿ ಈ ಪ್ರಾಧಿಕಾರಕ್ಕೆ ಹೊಸ ಕೆರೆಗಳ ನಿರ್ಮಾಣಕ್ಕೆ ಏನು ಕಲ್ಪನೆ ಎಂದು ಹೇಳಬೇಕು. ನಮಗೆ ರಾಜಮಹಾರಾಜರುಗಳು ಕೆರೆಗಳನ್ನು ಮಾಡಿದರು ಸರಿ. ಸರ್ಕಾರವು ಇದ್ದ ಕೆರೆಗಳನ್ನು ಉಳಿಸಿಕೊಳ್ಳುವುದಕ್ಕೆ ಹೊಸ ಕೆರೆಗಳ ನಿರ್ಮಾಣಕ್ಕೂ ಕೂಡ ಬದ್ಧತೆಯನ್ನು ತೋರಿಸಬೇಕು. ಅದರದ್ದು ಏನೂ ಹೇಳಲಿಲ್ಲ. ಇದ್ದ ಕೆರೆಗಳನ್ನು ಉಳಿಸಿಕೊಂಡರೆ ಸಾಕು ಎನ್ನುವ ಸ್ಥಿತಿಯಲ್ಲಿ ನಿಮ್ಮ ಮನಃಸ್ಥಿತಿ ಇದ್ದರೆ ಅಷ್ಟಕ್ಕೆ ಈ ಪ್ರಾಧಿಕಾರದ ಅಗತ್ಯವಿಲ್ಲ. ಈಗ ಇದ್ದ Actಗಳಲ್ಲಿಯೇ ನಾವು ಅವುಗಳನ್ನು ನೋಡಿಕೊಂಡು ಹೋಗಬಹುದು. ಹಾಗಾಗಿ ಹೊಸ ಕೆರೆಗಳ ಬಗ್ಗೆ ಏನು ಎನ್ನುವುದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತಾ, ರಾಜ್ಯ ಮಟ್ಟದಲ್ಲಿ ಒಂದು ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿ ಮಾಡಿದ್ದಾರೆ. ರಾಜ್ಯ ಮಟ್ಟದ ಸಮಿತಿಯಲ್ಲಿ ಸಚಿವರ ಅಧ್ಯಕ್ಷತೆಯಲ್ಲಿ ಬೇರೆಬೇರೆಯವರು ಇರುತ್ತಾರೆ. ಅದಕ್ಕೆ ಮೂವರು ಅಧಿಕಾರೇತರ ಸದಸ್ಯರನ್ನು ಸೂಚಿಸಲು ಅವಕಾಶವಿದೆ. ಆದರೆ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅಧಿಕಾರೇತರ ಸದಸ್ಯರು ಇಲ್ಲ. ಅಥವಾ ಯಾವುದೇ ಜನಪ್ರತಿನಿಧಿಗಳು ಇಲ್ಲ. ಇದು ಪೂರ್ಣ ಪ್ರಮಾಣದಲ್ಲಿ ಅಧಿಕಾರಿಗಳ ಸಮಿತಿ. ನಾನು ಈ ಸಂದರ್ಭದಲ್ಲಿ ಆಗ್ರಹಿಸುವುದು ನೀವು ಈ ಬಿಲ್ಲನ್ನು ಇನ್ನೊಂದು ಸಾರಿ ಪುನರ್ ಪರಿಶೀಲಿಸಿ ಮಂಡಿಸುವಾಗ, ಈಗ ಮಂಡಿಸಿ ಅದನ್ನು ಸ್ವೀಕರಿಸುವುದಕ್ಕೆ ತರಾತುರಿ ಮಾಡಬೇಡಿ. ಅದರ ಬಗ್ಗೆ ಇನ್ನಷ್ಟು ವಿಸ್ತೃತವಾಗಿ ಚರ್ಚೆಯಾಗಲಿ. ಕೆರೆಗಳ ಬಗ್ಗೆ ಸರ್ಕಾರದ ಕಾಳಜಿ ಹಾಗೂ ನಮ್ಮೆಲ್ಲರ ಕಾಳಜಿ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಸಮಗ್ರವಾಗಿ ಬರಬೇಕು ಎನ್ನುವುದಕ್ಕೆ ಈಗ ನೀವು

ಅದನ್ನು ಸ್ವೀಕಾರ ಮಾಡುವ ಹಂತಕ್ಕೆ ಹೋಗದೆ, ಅದನ್ನು ಇನ್ನಷ್ಟು ವಿಸ್ತೃತವಾಗಿ ನಿಮ್ಮಲ್ಲಿ ಹಾಗೂ ಎಲ್ಲಾ ಕಡೆಗಳಲ್ಲಿ ಚರ್ಚೆಗೆ ಒಳಪಡಿಸಿ ಆ ಮೇಲೆ ಅದನ್ನು ತರಬೇಕು. ಆ ಹಂತದಲ್ಲಿ ಜಿಲ್ಲಾ ಮಟ್ಟದ ಸಮಿತಿಗಳಿಗೆ ಜನ ಪ್ರತಿನಿಧಿಗಳನ್ನು ಸೇರಿಸಬೇಕು. ಮತ್ತು ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಮಟ್ಟದ ಸಮಿತಿಗಳ ರಚನೆ ಆಗಬೇಕು. ಕ್ಷೇತ್ರ ಮಟ್ಟದ ಸಮಿತಿಗಳನ್ನು ಮಾಡಿ ನಾವು ಶಾಸಕರಾದವರು ಜನಪ್ರತಿನಿಧಿಗಳು ನಮ್ಮ ಬದ್ದತೆಯನ್ನು ನಮ್ಮ ನಮ್ಮ ಕ್ಷೇತ್ರಗಳಲ್ಲಿ ತೋರಿಸುವುದಕ್ಕೆ ಇದು ಒಂದು ಅವಕಾಶವಾಗುತ್ತದೆ. ಹಾಗಾಗಿ ನೀವು ಕ್ಷೇತ್ರ ಮಟ್ಟದ ಸಮಿತಿಗಳನ್ನು ಮಾಡಿ. ಶಾಸಕರು ಏಕೆ ಬೇಡ? ತಾಲ್ಲೂಕು ಮಟ್ಟದಲ್ಲಿ ಹಾಗೂ ಕ್ಷೇತ್ರ ಮಟ್ಟದಲ್ಲಿ ಏಕೆ ಸಮಿತಿಗಳು ಬೇಡ? ಬರೀ ಅಧಿಕಾರಿಗಳ ಸಮಿತಿಗಳನ್ನು ಮಾಡಿ ಮೂರು ತಿಂಗಳಿಗೊಂದು ಸಾರಿ ರಾಜ್ಯ ಮಟ್ಟದಲ್ಲಿ ಒಂದು ಸಮಿತಿ ಎಂದು ಹೇಳಿ ಈಗಾಗಲೇ ಜಿಲ್ಲಾಧಿಕಾರಿಗಳಿಗೆ 80 ಕಮಿಟಿಗಳಾದರೂ ಇರಬಹುದು. ಜಿಲ್ಲಾಧಿಕಾರಿಗಳು ಎಷ್ಟು ಸಮಿತಿಗಳಿಗೆ ಅಧ್ಯಕ್ಷರು ಎಂದು ನನಗೆ ಲೆಕ್ಕ ತಪ್ಪಿ ಹೋಗಿದೆ. 101ನೇ ಸಮಿತಿಗೆ ಅಧ್ಯಕ್ಷರು. ಅವರು ಸಭೆಗಳನ್ನು ಮಾಡುವುದನ್ನು ನೋಡಬೇಕು. ಕಾಟಾಚಾರಕ್ಕೆ ಸಭೆಗಳನ್ನು ಮಾಡುತ್ತಾರೆ. ಮುಖ್ಯ ಕಾರ್ಯದರ್ಶಿಯವರು ಸಭೆ ಮಾಡುತ್ತಾರೆ. ಈ ಮುಖ್ಯ ಕಾರ್ಯದರ್ಶಿ ಸಭೆ ಮಾಡಿದ್ದು ಒಂದಾದರೂ ಫಲಿತಾಂಶ ಬಂದಿದೆಯೇ? ಆ ಜಿಲ್ಲಾಧಿಕಾರಿಗಳು ಮಾಡಿದ ಸಭೆಗಳ ಒಂದಾದರೂ ಫಲಿತಾಂಶ ಬಂದಿದೆಯೇ? ಗ್ರೌಂಡ್ ಮಟ್ಟದಲ್ಲಿ ನಮಗೆ ಕಾಣುವಂತೆ ಏನಾಗಿದೆ ಎಂದು ನಾನು ಹುಡುಕುತ್ತಿದ್ದೇನೆ. ನೀವು ಅಧಿಕಾರಿಗಳಿಗೆ ಮಾಡಿದರೆ ಅವರು ಬೆಳೆದು ಬಂದಂತಹ ಬ್ರಿಟಿಷ್ ಪದ್ದತಿ ಒಂದು ಇದೆ ಅದನ್ನೇ ಮಾಡಿಕೊಂಡು ಹೋಗುತ್ತಾರೆ. ನೀವು ಅದಕ್ಕೆ ಜನಪ್ರತಿನಿಧಿಗಳನ್ನು ಸೇರಿಸಿ. ಜನಪ್ರತಿನಿಧಿಗಳಿಗೆ ಜನರಿಗೆ ಉತ್ತರ ಕೊಡುವಾಗ ಈ ರೀತಿ ಸಾರ್ವಜನಿಕ ವಿಷಯದಲ್ಲಿ ನಮ್ಮ ಬದ್ದತೆಯನ್ನು ತೋರಿಸುವುದಕ್ಕೆ ಕಾರಣವಾಗುತ್ತದೆ. ಜಿಲ್ಲಾ ಮಟ್ಟದ ಸಮಿತಿಯಲ್ಲಿ ಜನ ಪ್ರತಿನಿಧಿಗಳಿರಬೇಕು ಮತ್ತು ಕ್ಷೇತ್ರ ಮಟ್ಟದಲ್ಲಿ ಸಮಿತಿಯನ್ನು ಮಾಡಬೇಕು. ಎಲ್ಲವನ್ನು ಇನ್ನಷ್ಟು ವಿಸ್ತೃತವಾಗಿ ಚರ್ಚಿಸಿ ಇನ್ನಷ್ಟು ಸಮಗ್ರವಾಗಿ ಚಿಂತನೆ ಮಾಡಿ ನೀವು ಈ ಬಿಲ್

ಅನ್ನು ತರಬೇಕು. ಹಿರಿಯರು ಅನೇಕರು ಇದ್ದೀರಿ, ಈಗ ಅದನ್ನು ಸ್ವೀಕರಿಸುವಂತಹ ತರಾತುರಿಯನ್ನು ಸರ್ಕಾರ ಮಾಡಬಾರದು ಎನ್ನುವ ಆಗ್ರಹವನ್ನು ನಾನು ಮಾಡುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ):– ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಬಹಳ ಮುಂದಾಲೋಚನೆ ಮಾಡಿ ಇಂತಹ ಒಂದು ಮಸೂದೆಯನ್ನು ತರುತ್ತಿದೆ ನಾನು ಇದನ್ನು ಸ್ವಾಗತ ಮಾಡುತ್ತೇನೆ. ಆದರೆ ಅನೇಕ ಜನ ಸದಸ್ಯರು ಅನುಮಾನವನ್ನು ವ್ಯಕ್ತಪಡಿಸಿದ ಹಾಗೆ ತಾವು ಏನು ಉದ್ದೇಶ ಇಟ್ಟುಕೊಂಡು ಈ ಶಾಸನ ತರುತ್ತಿದ್ದೀರಿ ಆ ಉದ್ದೇಶ ಯಶಸ್ವಿಯಾಗಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಕುಳಿತು ಎಲ್ಲರ ಮಾತುಗಳನ್ನು ಕೇಳುತ್ತಿದ್ದೆ. ಮಾನ್ಯ ಕುಮಾರಸ್ವಾಮಿಯವರು ಹಾಗೂ ಮಾನ್ಯ ರಮೇಶ್ ಕುಮಾರ್‌ರವರ ಮಾತು ಕೇಳಿದೆ. ಇಲ್ಲಿ ನಾನು ಮತ್ತು ಮಾನ್ಯ ರಾಯರೆಡ್ಡಿಯವರು ಎಲ್ಲ ಬಯಲು ಪ್ರದೇಶದಿಂದ ಬಂದವರು. ಮಾನ್ಯ ಗೋವಿಂದ ಕಾರಜೋಳರವರಿಗೆ ಗೊತ್ತು ಅವರು ಮಂತ್ರಿಗಳಾಗಿದ್ದವರು. ಇಲ್ಲಿ ಮಹಾರಾಜರ ಕಾಲಕ್ಕೆ ಅವರ ದೂರದೃಷ್ಟಿ ಪ್ರಕಾರ ಅನೇಕ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಆ ಕಲ್ಪನೆಯಿಂದ ಈ ಭಾಗಕ್ಕೆ ಬಹಳ ದೊಡ್ಡ ಅನುಕೂಲವಾಗಿದೆ ಎಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ನಾವು ನಿಜಾಮನ ಅಧೀನದಲ್ಲಿದ್ದವರು ನಮ್ಮಲ್ಲಿ ಯಾವುದೇ ದೂರದೃಷ್ಟಿ ಗೊತ್ತು ಗುರಿ ಇಲ್ಲದೆ ರಾಜ್ಯ 300 ವರ್ಷ ನಡೆದು ಹೋಯಿತು. ಅಲ್ಲಿ ಕೆರೆಗಳೇ ಇಲ್ಲ. ಮಾನ್ಯ ಬಾಬುರಾವ್ ಚಿಂಚನಸೂರು ರವರು ಇಲ್ಲಿದ್ದಾರೆ. ನಿಮ್ಮ ಯಾದಗಿರಿಯಲ್ಲಿ ಮಾತ್ರ ಕೆರೆಗಳಿವೆ. ಬೇರೆ ಯಾವ ತಾಲ್ಲೂಕುಗಳಲ್ಲಿಯೂ, ಯಾವ ಜಿಲ್ಲೆಗಳಲ್ಲಿಯೂ ಕೆರೆಗಳು ಇಲ್ಲ. ನಮ್ಮ ಕಡೆ ಒಂದು ಗಾದೆ ಮಾತಿದೆ. ಒಂದು ಸಂತೆ ನಡೆದಾಗ ಉಪ್ಪು ಮಾರುತ್ತಿದ್ದ, ತೆಂಗು ಮಾರುತ್ತಿದ್ದ. ಮಳೆ ಬಂದು ಉಪ್ಪು ಕರಗಿ ಹೋದಾಗ ಅವನು ಅಳುವುದಕ್ಕೆ ಪ್ರಾರಂಭ ಮಾಡಿದ ಆಗ ತೆಂಗಿನಕಾಯಿಯವನೂ ಅಳುವುದಕ್ಕೆ ಪ್ರಾರಂಭ ಮಾಡಿದ. ನೀನೇಕೆ ಅಳುತ್ತಿದ್ದೀಯ ಎಂದರೆ, ಅವನು ಅಳುತ್ತಿದ್ದಾನೆ ಹಾಗಾಗಿ ನಾನೂ

ಅಳುತ್ತಿದ್ದೇನೆಂದು ಹೇಳಿದ. ಹಾಗಾಗಿ ಇವರೆಲ್ಲಾ ಅಳುವುದು ನೋಡಿ ನಾವೂ ಅಳಬೇಕು. ಆದರೆ ವಾಸ್ತವಿಕವಾಗಿ ನಮ್ಮ ಪರಿಸ್ಥಿತಿ ಬೇರೆ, ಅವರ ಪರಿಸ್ಥಿತಿ ಬೇರೆ. ಈಗ ನನ್ನ ಸಲಹೆ ಏನೆಂದರೆ, ನೀವು ಖಂಡಿತವಾಗಿ ಇನ್ನೂ ಹತ್ತು ಸಲ ತಜ್ಞರ ಜೊತೆ, ಶಾಸಕರ ಜೊತೆಗೆ, ನಮ್ಮಂತಹ ಆಸಕ್ತರ ಜೊತೆಗೆ ಚರ್ಚೆ ಮಾಡಿ ಒಂದು ಸಮಗ್ರವಾದ ಮಸೂದೆಯನ್ನು ತಾವು ತೆಗೆದುಕೊಂಡು ಬನ್ನಿ. ತಾವು ಇಲ್ಲಿ ಹೇಳಿದ್ದೀರಿ, ಅಂತರ್ಜಲ ಕುಸಿಯುತ್ತಿದೆ. ಅದನ್ನು ಹೆಚ್ಚಿಗೆ ಮಾಡಬೇಕೆಂಬ ಸದುದ್ದೇಶವನ್ನು ತಾವು ಇಟ್ಟುಕೊಂಡಿದ್ದೀರಿ. ಈಗ ಈ ಅಂತರ್ಜಲ ಬರೀ ಕೆರೆ ಇದ್ದಲ್ಲಿ ಹೆಚ್ಚಿಗೆ ಆಗಬೇಕೋ, ಅಥವಾ ಎಲ್ಲಿ ಕೆರೆಗಳು ಇಲ್ಲ ಅಲ್ಲಿ ಹೆಚ್ಚಿಗೆ ಆಗಬೇಕೋ? ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಈ ಸದನದಲ್ಲಿ ಆ ಕಡೆ ಈ ಕಡೆ ಬಹಳ ಗಂಭೀರವಾಗಿ ನಾವು ಚರ್ಚೆ ಮಾಡಿದ್ದೇವೆ. ಅಂತರ್ಜಲ ಕುಸಿದು ಕುಡಿಯುವುದಕ್ಕೆ ನೀರೇ ಸಿಗುತ್ತಿಲ್ಲ. Transport ಮಾಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಅಂತರ್ಜಲವನ್ನು ಹೆಚ್ಚಿಗೆ ಮಾಡುವಂತಹ ಒಂದು ಸಮಗ್ರವಾದ ಮಸೂದೆಯನ್ನು ತಾವು ತರಬೇಕು. ಈಗ ನಮ್ಮ ಮಾರುತಿಯವರು ಅನುಮಾನ ವ್ಯಕ್ತಿಪಡಿಸಿದರು. ನನಗೂ ಅನುಭವ ಇದೆ. ನಾನು 1983ರಲ್ಲಿ ಶಾಸಕನಾಗಿದ್ದಾಗ ಕೆರೆಗಳು ಹಾಗೂ ಸಣ್ಣ ಕೆರೆಗಳು PWD ಇಲಾಖೆ ಕೆಳಗಡೆ ಇದ್ದವು. ಆಗ ಪ್ರತ್ಯೇಕವಾದ ಇಲಾಖೆ ಇರಲಿಲ್ಲ. ಆ ನಂತರ ಮಾನ್ಯ ಹೆಗಡೆಯವರು ಈ ಪಂಚಾಯತ್ ರಾಜ್ ವ್ಯವಸ್ಥೆ ತಂದ ಮೇಲೆ ಅವತ್ತು ಆ ಕೆರೆಗಳನ್ನು ಪಂಚಾಯತ್ ರಾಜ್‌ಗೆ ವರ್ಗಾವಣೆ ಮಾಡಿದರು. ಪಂಚಾಯತ್ ರಾಜ್ ಇಲಾಖೆಯಲ್ಲಿ ಒಳ್ಳೆಯ ಕೆಲಸ ಮಾಡುವುದಕ್ಕದಾಗುವುದಿಲ್ಲವೆಂದು ಮತ್ತೆ ಒಂದು ಹೊಸ ಇಲಾಖೆ ಸ್ಥಾಪನೆ ಮಾಡಿದರು. ಸಣ್ಣ ನೀರಾವರಿ ಇಲಾಖೆ ಎಂದು ಮಾಡಿದರು. ಈ ಮಧ್ಯೆ ಅನೇಕ ಕೆರೆಗಳು ಬಿಟ್ಟು ಹೋಗಿವೆ. ತಾವು ಗಮನದಲ್ಲಿಡಬೇಕು. ನನ್ನ ಕ್ಷೇತ್ರದಲ್ಲಿ ಒಂದು ಕೆರೆ ಒಡೆಯಿತು. ಜಿಲ್ಲಾ ಪಂಚಾಯತ್‌ರವರಿಗೆ ಕೇಳಿದರೆ ನಮಗೆ ಬರುವುದಿಲ್ಲವೆಂದು ಹೇಳುತ್ತಾರೆ, ಸಣ್ಣ ನೀರಾವರಿ ಇಲಾಖೆಯವರಿಗೆ ಕೇಳಿದರೆ ನಮಗೆ ಬರುವುದಿಲ್ಲವೆಂದು ಹೇಳುತ್ತಾರೆ. ಆ ಕೆರೆ ಒಡೆದು ಊರು ಹರಿದುಕೊಂಡು ಹೋಗುವಂತಹ ಪರಿಸ್ಥಿತಿ ಇದೆ. ಈ ತರಹ ಬಹಳಷ್ಟು

ಲೋಪಗಳು ಇವೆ. ಇನ್ನೊಂದು ಸಾರಿ ತಾವು ತನಿಖೆ ಮಾಡಿ. ಎಲ್ಲೆಲ್ಲಿ ಕೆರೆಗಳಿವೆ, ಮಾನ್ಯ ಕಾಗೇರಿಯವರು ಹೇಳಿದ ಹಾಗೆ ಅವು ಅರಣ್ಯ ಇಲಾಖೆಗೆ ಸೇರಿವೆಯೋ ಅಥವಾ ಬೇರೆ ಬೇರೆ ಇಲಾಖೆಗಳಲ್ಲಿದ್ದವೋ, ಯಾವ ಕೆರೆಗಳನ್ನು ಕೈಬಿಟ್ಟಿದ್ದಾರೆ, ಅವುಗಳನ್ನು ಸಮಗ್ರವಾಗಿ ಇದರಲ್ಲಿ ಸೇರಿಸಿಕೊಳ್ಳಿ. ಸೇರಿಸಿಕೊಂಡು ಎಲ್ಲಿ ಕೆರೆಗಳಿಲ್ಲ ಆ ಕೆರೆಗಳನ್ನು ಅಲ್ಲಿ ಕಟ್ಟುವಂತಹ ಒಂದು ಚಿಂತನೆಯನ್ನು ಮಾಡಿ ಈ ಶಾಸನದ ಹೆಸರನ್ನು ದಯಮಾಡಿ ಬದಲಾವಣೆ ಮಾಡಿ 'ಕೆರೆ ನಿರ್ಮಾಣ ಮತ್ತು ಅಭಿವೃದ್ಧಿ ಮಂಡಳಿ' ಎಂದು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ನೀವು ಪ್ರಾಧಿಕಾರ ಮಾಡಿದರೆ ಇದ್ದ ಕೆರೆಗಳನ್ನು maintain ಮಾಡುವ ಕೆಲಸವಾಗುತ್ತದೆ. ಹೊಸ ಕೆರೆಗಳನ್ನು ಮಾಡುವುದು ಅದಕ್ಕೆ ಹಣಕಾಸು ತರುವುದು ನಿಮ್ಮಿಂದ ಆಗುವುದಿಲ್ಲ. ಮಾನ್ಯ ಕಾಗೇರಿಯವರು ಹೇಳಿದ ಹಾಗೆ ನಿಮ್ಮ manifestoದಲ್ಲಿ ಒಂದು ಕ್ಷೇತ್ರದಲ್ಲಿ ಒಂದು ವರ್ಷದಲ್ಲಿ 224 ಕೆರೆಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದ್ದೀರಿ. ಈ ರೇಷಿಯೋದಲ್ಲಿ ನೀವು ಮಾಡಿಕೊಂಡು ಹೋದರೆ, ನಿಮ್ಮ 33,000 ಕೆರೆಗಳು, ಜಿಲ್ಲಾ ಪಂಚಾಯತಿಯ 26,000 ಕೆರೆಗಳು ಇನ್ನೂ ಬೇರೆ ಬೇರೆ ಇಲಾಖೆ ಕೆರೆಗಳು ಅವುಗಳನ್ನೆಲ್ಲಾ ನೀವು ಹೇಗೆ ನಿರ್ವಹಣೆ ಮಾಡುತ್ತೀರಿ ಇದಕ್ಕೆ ಎಷ್ಟು ದುಡ್ಡು ಬೇಕಾಗುತ್ತದೆ, ಯಾವ ಮೂಲದಿಂದ ತರುತ್ತೀರಿ, ರಾಜ್ಯಸರ್ಕಾರದಿಂದ ಕೊಡುತ್ತೀರೋ ಅಥವಾ ಕೇಂದ್ರ ಸರ್ಕಾರದಿಂದ ತರುತ್ತೀರೋ? ನಿಮ್ಮಲ್ಲಿ ನಿಬ್ಬಂದಿ ವರ್ಗ ಎಷ್ಟು ಇದೆ? ಅದೂ ಕೂಡ ಬಹಳ ಮುಖ್ಯ. ಅದಕ್ಕೆ ಒಂದು ಸ್ಲೋಗನ್ ಹಾಕಿ "ಊರಿಗೊಂದು ಕೆರೆ ನೀರಿಗೊಂದು ನೆಲೆ" ಒಂದು ನಮ್ಮ ಚಿಂತನೆ ಕೂಡ ದೃಷ್ಟಿ ಕಡೆ ಇರಲಿ. ನೀರು ನಿಲ್ಲಿಸುವಂತಹ ಒಂದು ಕಲ್ಪನೆ ಆ ಕಡೆ ಹರಿಯಲಿಕ್ಕೆ ಅನುಕೂಲವಾಗುತ್ತದೆ. ಒತ್ತುವರಿ ಬಗ್ಗೆ ತಾವು ಹೇಳಿದಿರಿ. ಯಾರೂ ಬಡವರು ಒತ್ತುವರಿ ಮಾಡಿಕೊಂಡಿಲ್ಲ. ಬಲಿಷ್ಠರೇ ಮಾಡಿಕೊಂಡುರುವುದು. ಬಡವರಿಗೆ ಒತ್ತುವರಿ ಮಾಡಿಕೊಂಡು ಅದರ ಪರಿಣಾಮ ಎದುರಿಸುವ ಆ ಶಕ್ತಿ ಇಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಬಿ.ಆರ್. ಪಾಟೀಲರೆ, that is the definition. Law lexicom ಅನ್ನು ತೆಗೆಸಿ ನೋಡಿ. Encroachment ಎಂದರೆ, willful ಆಗಿ powerful ಆಗಿರುವವನು ಯಾರು ನನಗೇನು ಮಾಡುತ್ತಾರೆಂದು ದುರಂಹಕಾರದಿಂದ ಮಾಡುವವನೇ encroacher. Un-authorized occupation ಎಂದರೆ, ಗತಿ ಇಲ್ಲದವನು ಅನಿವಾರ್ಯವಾಗಿ ಬದುಕುವುದಕ್ಕೋಸ್ಕರ ಮಾಡುವಂಥದ್ದು. ನಾವು ಅದಕ್ಕೆ un-authorized occupants ಗೆ land confirm ಮಾಡುವಾಗ encroachers ಎಂದು ಹೇಳಲಿಲ್ಲ. Encroachment ಎಂದರೆ automatically it means eviction. Because, he is an arrogant fellow. He or she. Un-authorized occupation is done by a person who is helpless. Encroachment is done consciously. ಅದಕ್ಕೆ ನಾನು ಮಾನ್ಯ ಮಂತ್ರಿಗಳಲ್ಲಿ appeal ಮಾಡಿಕೊಂಡಿದ್ದು. Encroachment ಮಾಡಿದವನಿಗೆ that itself he is aware that he has committed a crime. ಅವನಿಗೆ ಮತ್ತೆ notice ಕೊಡುವುದು ಬೇಕಾಗಿಲ್ಲ. Mark your boundary. Go in for a trench and see that he goes by himself. That is the way. ಕಾನೂನನ್ನು ಗೌರವಿಸುವ ಜನರಿಗೆ ದೇಶದಲ್ಲಿ ರಕ್ಷಣೆ ಸಿಗದೇ ಹೋದರೆ, ಕಾನೂನನ್ನು ಮುರಿಯುವ ಹವ್ಯಾಸ ಇರುವಂತಹವರು ದೇಶ ಆಳುವ ಪ್ರಯತ್ನವನ್ನು ಮಾಡುತ್ತಾರೆ. ದೇಶದ ಕಾನೂನು ವ್ಯವಸ್ಥೆಯಲ್ಲಿ ಜನರಿಗೆ ನಂಬಿಕೆ ಹೋಗುತ್ತದೆ. ಅದು ಆಗಬಾರದು.

ಶ್ರೀ ಬಿ.ಆರ್. ಪಾಟೀಲ್:- ಅದೇ ಈ ದೇಶದ ದುರಂತ. Might is right. ಯಾರಿಗೆ ಶಕ್ತಿ ಇದೆ ಅವನು ಕಬಳಿಸಿಕೊಂಡು ಹೋಗುತ್ತಾನೆ. ಯಾರು ನಿರ್ಗತಿಕ ಶಕ್ತಿ ಇಲ್ಲ ಅವನು ಯಾವತ್ತು ಕಷ್ಟದಲ್ಲಿ ಬೀಳುತ್ತಾನೆ. ಇದು ನಿಸರ್ಗದಲ್ಲಿ ಇವತ್ತು ಆಗುತ್ತಿರುವ ಪರಿಸ್ಥಿತಿ. ಹೀಗಾಗಿ ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ಕಾನೂನಿನಲ್ಲಿ ಯಾರು ಒತ್ತುವರಿ ಮಾಡಿದ್ದಾರೆ ಅವರನ್ನು ಕಿತ್ತು ಹಾಕುವುದಕ್ಕೆ ನಮ್ಮ ಕಾನೂನುಗಳಲ್ಲಿ ಸಾಕಷ್ಟು ಅವಕಾಶಗಳಿವೆ. ಅದಕ್ಕೆ ಜಾಸ್ತಿ ಒತ್ತು ಕೊಡಬೇಕಾದಂತಹ ಅವಶ್ಯಕತೆಯಿಲ್ಲ. ಆದರೆ, ಈಗ ನೀವು ಹೂಳು

ಎತ್ತುವುದಕ್ಕೆ ಹೋದರೆ ಯಾರಾದರೂ ಬಂದು ಆ silt ಅನ್ನು ತೆಗೆಯುವುದಕ್ಕೆ ಹೋದರೆ ನೀವು ಅವರ ಮೇಲೆ ಕೇಸ್ ಹಾಕುವಂತಹ ಅವಕಾಶ ಇಟ್ಟುಕೊಂಡಿದ್ದೇವೆ. ನಾನು ಏನು ಹೇಳುತ್ತೇನೆ ಎಂದರೆ, ಇವರು ಕೆರೆ ಹೂಳು ತೆಗೆಯುವುದಕ್ಕೆ ದುಡ್ಡು ಕೊಡುವುದಿಲ್ಲ, ಯಾರಾದರೂ ರೈತರು ಬಂದು ಆ ಹೂಳು ಎತ್ತಿ ಅವನ ಹೊಲಕ್ಕೆ ಹಾಕುತ್ತೇನೆ ಎಂದರೆ ತಪ್ಪೇನಿದೆ? ಆ ಹೊತ್ತಿನಲ್ಲಿಯೇ ಬಂದು ನೀವು ಒತ್ತಾಯ ಮಾಡಿ ನಮ್ಮ ಸರ್ಕಾರಿ ಕೆರೆಯಲ್ಲಿ ಈ ಹೂಳನ್ನು ಎತ್ತಿ ತೆಗೆದುಕೊಂಡು ಹೋಗುತ್ತಾರೆ ಎಂದು ನೀವು ಅವರ ಮೇಲೆ ಕೇಸ್ ಹಾಕಿದರೆ ಅಂತಹವರು ಒಳ್ಳೆಯ ಉದ್ದೇಶವಿಟ್ಟುಕೊಂಡು ಆ ಹೂಳು ಎತ್ತುವವರಿಗೂ ಕೂಡ ನೀವು ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ನಾವು ಹೇಳುತ್ತಿದ್ದೇವೆ. ಕೆರೆಗಳ ಹೂಳು ಎತ್ತುವುದಕ್ಕೆ ದುಡ್ಡಿಲ್ಲಪ್ಪ, ನೀವೇ ಬೇಕಾದರೆ ತೆಗೆದುಕೊಂಡು ಹೋಗಿ, ನಾವು ಇಲಾಖೆಯಿಂದ permission ಕೊಡಿಸುತ್ತೇವೆ ಎಂದು ಹೇಳುತ್ತಿದ್ದೇವೆ. ಇಂತಹ ಪರಿಸ್ಥಿತಿ ಇರಬೇಕಾದರೆ ಇವರಿಗೆ ಈ ಕಾನೂನಿನ ದುರುಪಯೋಗ ಕೂಡ ಆಗುವಂತಹ ಸಾಧ್ಯತೆಯಿದೆ. ನಾಳೆ ಯಾರಾದರೂ ಹೋಗಿ ಟ್ರ್ಯಾಕ್ಟರ್ ನಿಲ್ಲಿಸಿದರೆ ಅವನ ಮೇಲೆ ಕೇಸ್ ಹಾಕಿ ಪೊಲೀಸ್ ಸ್ಟೇಷನ್ ಒಳಗೆ ಹಾಕಿದರೆ ಅವರ ಗತಿಯೇನು? ಹಾಗಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ವಾಪಸ್ಸು ತೆಗೆದುಕೊಳ್ಳಿ. ಅಂತಹ urgent ಏನೂ ಇಲ್ಲ. ಇದರಲ್ಲಿ ತಜ್ಞರ ಸಲಹೆ ಪಡೆಯಿರಿ. ಬಹಳಷ್ಟು ಜನ ಕೆರೆಗಳ ಬಗ್ಗೆ ಬಹಳ ದೊಡ್ಡ ದೊಡ್ಡ ಅಧ್ಯಯನ ಮಾಡಿಕೊಂಡಿರುವವರು ಇದ್ದಾರೆ. ಅವರ ಸಲಹೆ ಪಡೆಯಿರಿ. ಮತ್ತೆ ಪ್ರಾಧಿಕಾರದಲ್ಲಿ ಬರೀ ಅಧಿಕಾರಿಗಳನ್ನು ಇಟ್ಟುಕೊಂಡರೆ ನೀವು ಏನು development ಮಾಡುವುದಕ್ಕೆ ಆಗುತ್ತದೆ? ಪರಿಸರವಾದಿಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ, ಕಾನೂನಿನ ತಜ್ಞರನ್ನು ಇಟ್ಟುಕೊಳ್ಳಬೇಕಾಗುತ್ತದೆ ಮತ್ತು ಇದಕ್ಕೆ ಆಸಕ್ತಿ ಕ್ಷೇತ್ರದಲ್ಲಿದ್ದವರನ್ನೂ ಕೂಡ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಅಧಿಕಾರಿಗಳಿಂದ ಈ ದೇಶ ಬದಲಾವಣೆಯಾಗಿಲ್ಲ.

ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್:- ಮಾನ್ಯ ಉಪಾಧ್ಯಕ್ಷರೆ, ಎಂತಹ ಪರಿಸರವಾದಿಗಳನ್ನು ಇಟ್ಟುಕೊಳ್ಳಬೇಕೆಂದು ಹೇಳಿ. ಬರೀ ಪರಿಸರವಾದಿಗಳನ್ನು ಇಟ್ಟುಕೊಳ್ಳಬೇಕು ಎಂದು ಹೇಳಬೇಡಿ. ಅದರಿಂದ ಅನೇಕ ಯೋಜನೆಗಳು ನಮಗೆ ಬಂದ್ ಆಗಿದೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:- ಎಲ್ಲರನ್ನೂ ಕೂಡ ಒಂದೇ ದೃಷ್ಟಿಯಿಂದ ನೋಡುವುದಕ್ಕೆ ಹೋಗಬಾರದು.

ಶ್ರೀ ಬಿ. ನಾಗೇಂದ್ರ:- ಮಾನ್ಯ ಉಪಾಧ್ಯಕ್ಷರೆ, ತಮ್ಮ support ನಿಂದ ಒಂದು ಮಾತು ಹೇಳುತ್ತೇನೆ. ಈಗ ಮಾನ್ಯ ಸಚಿವರು ಈ ಒಂದು ಬಿಲ್ ತರುತ್ತಿದ್ದಾರೆ. ಬಹಳ ಸ್ವಾಗತಾರ್ಹ. ಆದರೆ, ಈ ಕೆರೆಗಳ ಅಂತರ್ಜಲವನ್ನು ಇನ್ನೂ ಜಾಸ್ತಿ ಮಾಡಬೇಕು ಎಂಬ ಉದ್ದೇಶವಿಟ್ಟುಕೊಂಡು ಮಾಡುತ್ತಿದ್ದರೆ, ನಮ್ಮ ಹಳ್ಳಿಗಾಡಿನ ಪ್ರದೇಶದ ಹಳ್ಳಗಳಲ್ಲಿ natural drain ಬರುತ್ತಿದೆ. ಸುಮಾರು 30–40 ಮೀಟರ್ ಅಗಲ ಬರುತ್ತಿದೆ. ಅದಕ್ಕೆ ಕೆರೆಗಳಿಗೆ ಹೋಗುವುದಕ್ಕಿಂತ ಮುಂಚಿತವಾಗಿ ಒಂದೊಂದು ಚೆಕ್ ಡ್ಯಾಮ್‌ಗಳನ್ನು ಹಾಕಿಕೊಂಡರೆ ಸುಮಾರು 50 ಹೆಕ್ಟೇರ್‌ನಷ್ಟು ಪ್ರದೇಶಕ್ಕೆ ನೀರನ್ನು ಒದಗಿಸುವ ಕಾರ್ಯಕ್ರಮ ಕೂಡ ಆಗುತ್ತದೆ. ಏಕೆಂದರೆ, ಕೆರೆಗಳಿಗೆ ಹೋಗುವುದಕ್ಕಿಂತ ಮುಂಚಿತವಾಗಿಯೇ ಅಂದರೆ ಈಗಾಗಲೇ ನಾವು ನಮ್ಮ ತಾಲ್ಲೂಕಿನಲ್ಲಿ 2–3 ಚೆಜ್‌ಡ್ಯಾಮ್‌ಗಳನ್ನು ಮಾಡಿಕೊಂಡಿದ್ದೇವೆ. ಅದರಲ್ಲಿ ಸುಮಾರು 0.2 . ..

ಉಪಾಧ್ಯಕ್ಷರು:- ಬಿಲ್ ಬಗ್ಗೆ ಮಾತನಾಡಿ. ಬಿಲ್ ಬಗ್ಗೆ ಹೇಳಿ.

ಶ್ರೀ ಬಿ. ನಾಗೇಂದ್ರ:- ಈಗ ಅಂತರ್ಜಲ ಜಾಸ್ತಿ ಮಾಡುವುದಕ್ಕೆ ಅವರು ಏನು ಉದ್ದೇಶವಿಟ್ಟುಕೊಂಡಿದ್ದರೆ, ಇದನ್ನು ಕೂಡ ಇಟ್ಟುಕೊಂಡರೂ ಸಹ ಎಲ್ಲಾ ಕೆರೆಗಳು ಬರುವುದಕ್ಕಿಂತ ಮುಂಚಿತವಾಗಿ natural drain ಗೆ 5–5 ಕಿ.ಮೀ.ಗೆ ಒಂದೊಂದು ಚೆಕ್‌ಡ್ಯಾಮ ಹಾಕಿಕೊಂಡರೆ ಇನ್ನಷ್ಟು ಅಂತರ್ಜಲ ಹೆಚ್ಚುತ್ತದೆ ಎಂದು ನಾನು ಸಲಹೆ ಕೊಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್:- ತಾವು ಒತ್ತುವರಿಯಾಗಬಾರದು ಎನ್ನುವ ಉದ್ದೇಶದಿಂದ ತರುತ್ತಿದ್ದೀರಿ. ನನ್ನ ಸಲಹೆ ಏನೆಂದರೆ, ಒಂದು ಸಲ ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಇಲಾಖೆಗೆ ಹೋಗಿ. ಭಾರತ ಸರ್ಕಾರ ಈ ನಿಟ್ಟಿನಲ್ಲಿ ಸಹಾಯ ಮಾಡುವುದಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಆ ಯೋಜನೆಯಡಿಯಲ್ಲಿ ನಮ್ಮ ರಾಜ್ಯದಲ್ಲಿ ಹೇಗೆ ಕೆರೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು ಮತ್ತು ಹೊಸ ಕೆರೆಗಳನ್ನು ಹೇಗೆ ಮಾಡಿಕೊಳ್ಳಬೇಕೆಂದು ಒಂದು ಸಮಗ್ರವಾದ ಚಿಂತನೆ ಮಾಡಿಕೊಂಡು ಈ ಒಂದು ಮಸೂದೆ ತಂದರೆ ಒಂದು ಬದಲಾವಣೆ ಮಾಡುವುದಕ್ಕೆ ಸಾಧ್ಯತೆಯಿದೆ. ಆ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ:- ಮಾನ್ಯ ಉಪಾಧ್ಯಕ್ಷರೆ, ನನಗೆ ಅವಕಾಶ ಕೊಡುವುದೇ ಇಲ್ಲ.

ಉಪಾಧ್ಯಕ್ಷರು:- ನಿಮಗೂ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಕಾರಜೋಳರವರು ಆದಮೇಲೆ ನೀವು ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):- ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಪ್ರಾಚೀನ ಕಾಲದಿಂದಲೂ ಕೆರೆಗಳನ್ನು ಕೊಟ್ಟುವಂತಹ ಸಂಸ್ಕೃತಿಯಿದೆ. ಕರ್ನಾಟಕದಲ್ಲಿ ಅಷ್ಟೇ ಅಲ್ಲ. ಇಡೀ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಕೆರೆ-ಕಟ್ಟೆಗಳನ್ನು ಸರ್ಕಾರ ಇಲ್ಲದಂತಹ ಸಂದರ್ಭದಲ್ಲಿಯೂ ಕೂಡ ಜನರು ಸೇರಿ ಕಟ್ಟಿರುವಂತಹ ಉದಾಹರಣೆಗಳಿವೆ. ರಾಜ್ಯದಲ್ಲಿ ಸುಮಾರು 36 ಸಾವಿರ water bodies ಇವೆ. ಕೆರೆ, ಗೋಕಟ್ಟ, ಬಾಂದಾರ, ಬ್ಯಾರೇಜ್ ಮತ್ತು ಚೆಕ್‌ಡ್ಯಾಮ್ಸ್ ಸೇರಿ ಸುಮಾರು 36 ಸಾವಿರ water bodies ಇವೆ. ಈ 36 ಸಾವಿರ water bodies ಕೂಡ ಈ Lake Development Authority ಎಂದು ಏನು ತಂದಿದ್ದೀರಿ, ಇದರ ಕೆಳಗಡೆ ಬರುವಂತಹದ್ದನ್ನು ಮಾಡಬೇಕಾಗಿದೆ. ಮಾನ್ಯ ಉಪಾಧ್ಯಕ್ಷರೆ, ನಾವು ಕೆರೆ ಕಟ್ಟಬೇಕಾದರೆ ಮೊದಲು ಸರ್ವೆ ಮಾಡುತ್ತೇವೆ. ಎಷ್ಟು square mile ನಿಂದ ನೀರು ಹರಿದು ಆ ಕೆರೆಗೆ

ಬರುತ್ತದೆ, ಎಷ್ಟು ನೀರು ಸಂಗ್ರಹ ಆಗಬಹುದು ಎಂದು ಒಂದು ಅಂದಾಜು ಮಾಡುತ್ತೇವೆ. ಈಗ ಏನಾಗಿದೆ ಎಂದರೆ, ಕೆರೆ–ಕಟ್ಟೆ ಕಟ್ಟಿದವರು ಯಾರೂ ಇಲ್ಲ. Maintenance ಮಾಡುವವರು ಸರಿಯಾಗಿ ಇಲ್ಲ. ಈಗ agriculture department, forest department ಹಾಗೂ ಇನ್ನೂ ಅನೇಕ departmentಗಳಿಗೆ ಚೆಕ್‌ಡ್ಯಾಮ್‌ಗಳನ್ನು ಕಟ್ಟುವುದಕ್ಕೆ, ಬಾಂದಾರುಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಒಂದು ಕೆರೆ ಕಟ್ಟಿದಮೇಲೆ ಎಷ್ಟು square mile ನಿಂದ ನೀರು ಹರಿದು ಬರುತ್ತದೆ, ಅದಕ್ಕೆ ಅಡೆತಡೆಗಳನ್ನು ಮಾಡತಕ್ಕಂತಹ ಯಾವುದೇ ವ್ಯವಸ್ಥೆ ಅಲ್ಲಿ ಇರಬಾರದು. ಆದರೆ, ಈಗ ಏನಾಗಿದೆ ಎಂದರೆ, ಕೆರೆ ಕಟ್ಟಿದ್ದೇವೆ, ಕೆರೆಗೆ ನೀರು ಏಕೆ ಬರುವುದಿಲ್ಲವೆಂದರೆ ಅದರ ಮೇಲೆ ಹತ್ತು ಸಣ್ಣ ಸಣ್ಣ water bodies ತಯಾರಾಗಿವೆ. ಗೋಕಟ್ಟೆ, ಬಾಂದಾರು ಮತ್ತು ಚೆಕ್ ಡ್ಯಾಮ್ಸ್ ಮಾಡಿದ್ದಾರೆ. ಹೀಗಾಗಿ ಕೆರೆಗೆ ನೀರು ಹರಿದು ಬರತಕ್ಕಂತಹದ್ದು ಇಲ್ಲ. ಇದು ಮೂಲ ಪ್ರಶ್ನೆ ಇರುವಂತಹದ್ದು. ಅದಕ್ಕೆ ನಾನು ಸರ್ಕಾರಕ್ಕೆ ಏನು ಸಲಹೆ ಮಾಡುತ್ತೇನೆ ಎಂದರೆ, ಮೊದಲನೆಯದು ಈ ಬಿಲ್ ವಾಪಸ್ಸು ತೆಗೆದುಕೊಳ್ಳಿ. ವಾಪಸ್ಸು ತೆಗೆದುಕೊಂಡು major irrigation ನಲ್ಲಿ ಕೆರೆಗಳಿವೆ, minor irrigation ನಲ್ಲಿ ಕೆರೆಗಳಿವೆ, ಗ್ರಾಮಪಂಚಾಯಿತಿಯಲ್ಲಿ ಕೆರೆಗಳಿವೆ, ಜಿಲ್ಲಾ ಪಂಚಾಯಿತಿಯಲ್ಲಿ ಕೆರೆಗಳಿವೆ, forest ನಲ್ಲಿ ಕೆರೆಗಳಿವೆ, Lake development Authority under ನಲ್ಲಿ ಕೆರೆಗಳಿವೆ ಮತ್ತು ಈ ರಾಜ್ಯದ ಎಲ್ಲಾ urban authorities ನಲ್ಲಿಯೂ ಕೆರೆಗಳಿವೆ. Urban authorities ನಲ್ಲಿ ಬರತಕ್ಕಂತಹ ಕೆರೆಗಳ ಪರಿಸ್ಥಿತಿ ಏನಿದೆ ಎಂದರೆ, ಕೆರೆ ಕಟ್ಟುವುದಕ್ಕಿಂತ ಮುಂಚಿತವಾಗಿ 100 ಎಕರೆ, 200 ಎಕರೆ, 500 ಎಕರೆ ಅಥವಾ ಒಂದು ಸಾವಿರ ಎಕರೆ ನೀರಾವರಿಯಾಗುತ್ತದೆ ಎಂದು catchment area ಮತ್ತು command area ಗುರುತು ಮಾಡಿ ಕೆರೆಗಳನ್ನು ಕಟ್ಟಿದ್ದಾರೆ. ಇವತ್ತು ಯಾವುದೇ ಕೆರೆಗೂ command area ಉಳಿದೇ ಇಲ್ಲ. ಏಕೆ ಉಳಿದಿಲ್ಲವೆಂದರೆ, ಅಲ್ಲಿ ಎಲ್ಲಾ ಲೇಔಟ್‌ಗಳು ಬಂದಿವೆ, ಮನೆಗಳಾಗಿವೆ, industryಗಳಾಗಿವೆ, ಹೋಟೆಲ್‌ಗಳಾಗಿವೆ, ಬೇರೆ ಬೇರೆ ಉದ್ದೇಶಕ್ಕಾಗಿ ಆ ಕೃಷಿ ಭೂಮಿಯೆಲ್ಲಾ ಹೋಗಿಬಿಟ್ಟಿವೆ. ಇವತ್ತು ಕೇವಲ ನೀರು ನಿಲ್ಲುವಂತಹದ್ದು ಮಾತ್ರ ನಮ್ಮ ರೆಕಾರ್ಡ್‌ನಲ್ಲಿವೆ. Water

storage ಆಗುವಂತಹ area ಏನಿದೆ, ಅಷ್ಟು ಮಾತ್ರ ನಮ್ಮ ರೆಕಾರ್ಡ್‌ನಲ್ಲಿದೆ. ಅದನ್ನೂ ಈಗ ಕೆಲವರು ಏನು ಮಾಡಿದ್ದಾರೆ ಎಂದರೆ, waste weir, ಕೆರೆಗೆ ತೂಬ್‌ಗಳನ್ನು ಒಡೆದು ಬಿಡುವಂತಹದ್ದು, waste weirಗಳನ್ನು damage ಮಾಡಿ ನೀರು ಹೊರಗೆ ಬಿಡುವಂತಹದ್ದು. ಬಂಡ್‌ಗಳನ್ನು ಹರಿದು ಬಿಡುವಂತಹದ್ದನ್ನು ಮಾಡಿ ಎಲ್ಲಿಯೂ ಒಂದು ಹನಿ ನೀರು ನಿಲ್ಲದ ಹಾಗೆ ಮಾಡಿದ್ದಾರೆ. ಅಷ್ಟೇ ಅಲ್ಲದೆ ಕೆರೆಗಳ ಅಂಗಳದಲ್ಲಿ ಏನು ಗುಡಿಸಲುಗಳನ್ನು ಹಾಕಿಕೊಂಡು, slumಗಳು create ಆಗಿವೆ, ಅವರು ಆ ಕೊಳಚೇ ನೀರನ್ನು ಸಹ ಅದಕ್ಕೇ ಬಿಡುತ್ತಾರೆ. ಹೀಗಾಗಿ ಪಟ್ಟಣ ಪ್ರದೇಶದಲ್ಲಿ ಬರತಕ್ಕಂತಹ ಎಲ್ಲಾ ಕೆರೆಗಳೂ ಇವತ್ತು ಕೊಳಚೆಗಳಾಗಿವೆ. ಅಲ್ಲಿ ಹಂದಿಗಳು ಓಡಾಡುತ್ತವೆ, ಹೊಲಸು ನಾರುತ್ತದೆ. ಜನ ಅಲ್ಲಿ ಬದುಕುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದರ ಬಗ್ಗೆ ಮಾನ್ಯ ಉಪಾಧ್ಯಕ್ಷರೆ, ಪ್ರತಿಯೊಬ್ಬರು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಕೆರೆ ಊರಿನಲ್ಲಿ ಇತ್ತು ಎಂದರೆ, ಅದಕ್ಕೆ ನೀರು ತುಂಬಿಸಿದ್ದೇವೆ ಎಂದರೆ, ಪಟ್ಟಣ ಪ್ರದೇಶಗಳಲ್ಲಿ ಪ್ರತಿಯೊಬ್ಬರ ಮನೆಗಳಲ್ಲೂ ಹೆಚ್ಚು-ಕಡುಮೆ alternative ಮನೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿಕೊಂಡಿದ್ದಾರೆ. ಆ ಬೋರ್‌ವೆಲ್‌ಗಳಿಗೆ ನೀರು ಎಲ್ಲಿಂದ ಬರಬೇಕು? ಕೆರೆ ತುಂಬಿತು ಎಂದರೆ, ground water recharge ಆಗುತ್ತದೆ. ಬೋರ್‌ಗಳಿಗೆ ನೀರು ಬರುತ್ತದೆ. ನಮಗೆ ಶುದ್ಧವಾದಂತಹ ನೀರು ಸಿಗುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ, ಭೂಮಿಯ ಮೇಲ್ಮೈಯಲ್ಲಿ ಇರತಕ್ಕಂತಹ ನೀರು ಶುದ್ಧವಾಗಿರುವಂತಹ ನೀರು. ಆ ನೀರನ್ನು ಪಡೆಯುವುದಕ್ಕೆ ಜನರು ಸಹಕಾರ ಮಾಡಬೇಕಾಗುತ್ತದೆ. ಕೇವಲ ಸರ್ಕಾರ ಮಾಡುವುದಕ್ಕೆ ಇದರಲ್ಲಿ ಸಾಧ್ಯವಿಲ್ಲ. ಆದರೆ, ಮಾನ್ಯ ಉಪಾಧ್ಯಕ್ಷರೆ, ನಮ್ಮಲ್ಲಿ minor irrigation ನಲ್ಲಿ staff ಇಲ್ಲ. 3-4 ತಾಲ್ಲೂಕುಗಳಿಗೆ ಒಂದೊಂದು sub-divisions ಇವೆ. ಒಬ್ಬರೋ ಇಬ್ಬರೋ Junior Assistant Engineer ಇದ್ದಾರೆ, ಒಬ್ಬರು AEE, ಇಷ್ಟು ಬಿಟ್ಟರೆ ಅಲ್ಲಿ ಯಾವುದೇ staff ಇಲ್ಲ. ಅದಕ್ಕೆ ಈ department ಅನ್ನು reorganize ಮಾಡಿ, ಪ್ರತಿ ತಾಲ್ಲೂಕಿಗೂ ಒಂದೊಂದು sub division ಗಳನ್ನು ಮಾಡಿ, ಆ ತಾಲ್ಲೂಕಿನಲ್ಲಿ ಬರತಕ್ಕಂತಹ ಎಲ್ಲಾ water bodies ಒಂದೇ ಕಡೆ

ತರತಕ್ಕಂತಹ ಪ್ರಯತ್ನ ಮಾಡಬೇಕು. (ಗೊಂದಲ) ನಾನು ಬಹಳ time ತೆಗೆದುಕೊಳ್ಳುವುದಿಲ್ಲ. ಮಾನ್ಯ ಉಪಾಧ್ಯಕ್ಷರೆ, state level ನಲ್ಲಿ ಕಮಿಟಿ ಮಾಡಿದ್ದಾರೆ. ಆ ಕಮಿಟಿಯ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿರುವುದು Minor Irrigation Minister. ಕಾರ್ಯದರ್ಶಿಗಳು ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಾರೆ. ಇಲಿ technical staff ಒಬ್ಬರನ್ನೂ ಹಾಕಿಕೊಂಡಿಲ್ಲ. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಅಡ್ಡಿಯಿಲ್ಲ. ಏಕೆಂದರೆ, ಹಣ ಕೊಡುವವರು ಬೇಕು. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ ಇಲಾಖೆ ಇರಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅವರದೂ ಕೆರೆಗಳಿವೆ ಇರಬೇಕು. ಕಂದಾಯ ಇಲಾಖೆ, ಭೂಮಿ ಮಾಲೀಕರು ಅವರೂ ಇರಬೇಕು. ನಗರಾಭಿವೃದ್ಧಿ ಇಲಾಖೆ ಅವರದೂ ಕೆರೆಗಳಿವೆ ಅವರೂ ಇರಬೇಕು. ಕೃಷಿ ಇಲಾಖೆಯವರು ಇದ್ದಾರೆ, ಅವರೂ ಇರಲಿ. ಪ್ರಧಾನ ಕಾರ್ಯದರ್ಶಿ, ಪಶು ಸಂಗೋಪನೆ. ಪ್ರಧಾನ ಕಾರ್ಯದರ್ಶಿ, ಮೀನುಗಾರಿಕೆ ಅವರೂ ಇದ್ದಾರೆ, fisheries activities ಮಾಡುವುದಕ್ಕೆ ಬೇಕಾಗುತ್ತಾರೆ ಮತ್ತು ಸಣ್ಣ ನೀರಾವರಿ ಇಲಾಖೆಯಿಂದ ಸರ್ಕಾರದ ಪದನಿಮಿತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂದು ಮಾಡಿದ್ದಾರೆ. ಇದರಲ್ಲಿ ಒಬ್ಬರೂ technical ಇಲ್ಲ. ಮಂತ್ರಿಗಳಿಂದ ಹಿಡಿದು ಕೊನೆಯವರೆಗೂ ಯಾರೂ technical member ಇಲ್ಲ. ಅದಕ್ಕೆ ನಾನು ಏನು ಸಲಹೆ ಮಾಡುತ್ತೇನೆ ಎಂದರೆ, ಒಬ್ಬರು chief Engineer ಅಥವಾ Engineer-in-Chief ಅವರನ್ನು ಸದಸ್ಯರನ್ನಾಗಿ ಮಾಡಿ. ನೀವೇ ಕುಳಿತು ಏನು ನಿರ್ಣಯ ತೆಗೆದುಕೊಳ್ಳುತ್ತೀರಿ? B.A., B.Com., ಓದಿದವರು ಇದರಲ್ಲಿ ಏನು ನಿರ್ಣಯ ತೆಗೆದುಕೊಳ್ಳುತ್ತೀರಿ? ಬೇಕಾಗಿರುವುದು technical man. ಇಲ್ಲಿ ಒಬ್ಬ ಮುಖ್ಯ ಇಂಜಿನಿಯರ್ ಹುದ್ದೆಯವರನ್ನು ಅಥವಾ ಅದಕ್ಕಿಂತ ಹೆಚ್ಚಿನ ಹುದ್ದೆಯವರನ್ನು technical member ಅನ್ನು ಒಬ್ಬರನ್ನು ಹಾಕಿಕೊಳ್ಳಬೇಕು. ನೀವು ಅದಕ್ಕೆ ಒಂದು ಹೆಸರನ್ನೇ ಇಟ್ಟುಬಿಡಿ. technical member ಎಂದು ಇಡಿ. ಒಬ್ಬ technical member ಮಾಡತಕ್ಕಂತಹ ಅವಶ್ಯಕತೆಯಿದೆ. ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು ಹೇಳುತ್ತೇನೆ. ಏಕೆ ನಮ್ಮ ಶಿವರಾಜ್‌ರವರು ಈ ತರಹ dropt ಮಾಡಿದ್ದಾರೆ

ಎಂಬುದು ನನಗೆ ಗೊತ್ತಿಲ್ಲ. ಈ non-official members ಅನ್ನು nominate ಮಾಡುವುದಕ್ಕೆ ಅಧಿಕಾರ ಏನು ತೆಗೆದುಕೊಂಡಿದ್ದಾರೆ, ಅದರಲ್ಲಿ ಎಸ್.ಸಿ./ಎಸ್.ಟಿ. ಬಗ್ಗೆ ಹೇಳುತ್ತಾರೆ. ಹಾಗೆ ಆಗುವುದಿಲ್ಲ. SC ಅಥವಾ ST ಎಂದು ನೀವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ನೀವು SC ಅವರನ್ನು ಮಾಡಬೇಕೋ ಅಥವಾ ST ಯವರನ್ನು ಮಾಡಬೇಕೋ ಎಂದು ಇವರನ್ನೇ ಬಡಿದಾಟಕ್ಕೆ ಹಚ್ಚುತ್ತೀರಿ. ಈ ಕೆಲಸವನ್ನು ಮಾಡಬೇಡಿ. ಇನ್ನೊಬ್ಬ ಸದಸ್ಯರು ಹೆಚ್ಚಾದರೆ ನಿಮ್ಮ ಗಂಟೇನು ಹೋಗುವುದಿಲ್ಲ ಅಲ್ಲಿ SC ಒಂದು, ST ಒಂದು ಹಾಕಿ. ಜಿಲ್ಲಾ ಮಟ್ಟದಲ್ಲಿ ಈಗಾಗಲೇ ಮಾನ್ಯ ಬೋಪಯ್ಯನವರು ಮಾತನಾಡುವ ಸಂದರ್ಭದಲ್ಲಿ Civil service KAS ಅಧಿಕಾರಿಯೆಂದು ಹೇಳಿದರು, ಅದು ಬೇಕಾಗಿಲ್ಲ. ಇಲ್ಲಿ ಅಧಿಕಾರವಿರುವಂತಹ ಯಾರಾದರೊಬ್ಬರನ್ನು ನೇಮಿಸಬೇಕಾಗುತ್ತದೆ. ಇಲ್ಲಿ Deputy Commissioner ಅನ್ನು ಮಾಡಿ Revenue Act ಪ್ರಕಾರ ಇವನ್ನೆಲ್ಲಾ ಮಾಡುವುದಕ್ಕೆ ಅವರಿಗೆ ಅಧಿಕಾರವಿರುವುದು. ಶಿಕ್ಷೆ ಮಾಡುವಂತಹ ಅಧಿಕಾರ ಕೊಡುವಾಗ ನಾವು ಸರಿಯಾದ ಅಧಿಕಾರಿಗೆ ಕೊಡಬೇಕು. ಒಬ್ಬ ತಹಶೀಲ್ದಾರ್ ಮಾಡಿದರೆ ಯಾರು ಕೇಳುತ್ತಾರೆ, ಅವರಿಗೆ ಕೆಎಎಸ್ ಅಧಿಕಾರಿಯಿರುತ್ತಾನೆ. ಯಾರು ಕೂಡ ಕೇಳುವುದಿಲ್ಲ. ಇನ್ನೊಂದು ದುರ್ದೈವ ಸಂಗತಿಯೆಂದರೆ, ಇದರಲ್ಲಿ ಏನು ಹೇಳಿದ್ದಾರೆಂದರೆ ತಪ್ಪು ಮಾಡಿದವರನ್ನು machinery seize ಮಾಡಿದರೆ ಅಥವಾ ಒಬ್ಬ ವ್ಯಕ್ತಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡರೆ ಅವನನ್ನು ಅಲ್ಲೇ ಪೋಲಿಸ್ ಸ್ಟೇಷನ್‌ನಲ್ಲಿ ಬಿಟ್ಟು ಬಿಡಬಹುದೆಂದು ಮಾಡಿದ್ದಾರೆ. ದಸ್ತಗಿರಿಯಾದ ವ್ಯಕ್ತಿಯನ್ನು ಬಾಂಡ್ ಮೇಲೆ ಅಲ್ಲೇ ಬಿಡುಗಡೆ ಮಾಡುವುದು ಹಾಗಾದರೆ ಹಾಪ್ ಚಣ್ಣಾ ಹಾಕಿಕೊಂಡ ಒಬ್ಬ ಹೆಡ್‌ಕಾನ್ಸಟೇಬಲ್ ಬಿಟ್ಟುಬಿಡುತ್ತಾನೆ, ಹವಾಲ್ದಾರ್ ಸಾಕು ಬಿಟ್ಟು ಬಿಡುವುದಕ್ಕೆ. ಅದನ್ನು ಮಾಡಬೇಡಿ. Magistrate ಮುಂದೆ, ನ್ಯಾಯಾಲಯದ ಮುಂದೆ ಹೋಗಿಬರಲಿ. ಅವನನ್ನು court ಗೆ ಕಳುಹಿಸಿ. ನೀವು ಹವಾಲ್ದಾರ್ ಮುಂದೆ ಅಧಿಕಾರ ಕೊಟ್ಟರೆ ಇದನ್ನು ತರುವಂತಹ ಅವಶ್ಯಕತೆಯೇ ಇರುವುದಿಲ್ಲ. ಈ clause ನ ಜರೂರತ್ತೇ ಇಲ್ಲ. ಯಾರೆಂದರೆ ಅವರು ಒತ್ತುವರಿ ಮಾಡಿಕೊಂಡು

ಹೋಗಲಿ. ಆ ರೀತಿ ಆಗುತ್ತದೆ. ಇನ್ನೊಂದು ಮಹತ್ವವಾದ ವಿಷಯವೆಂದರೆ, ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ ಇಡೀ ರಾಜ್ಯದಲ್ಲಿ ಅತ್ಯಂತ ಹೆಚ್ಚು ಕೆರೆಗಳಿರುವುದು ನಿಮ್ಮಲ್ಲಿ. ಇವತ್ತು ಮಳೆಯಿಲ್ಲದೆ, ಅಡೆ-ತಡೆಗಳಾಗಿ ಅವಶ್ಯಕತೆಯಿದೆ. ಕೆರೆಗಳಿಗೆ ನೀರೇ ಬರುತ್ತಿಲ್ಲ ಆ ವಿಷಯ ಬೇರೆ ಆದರೆ desilting ಮಾಡುವುದು ಬಹಳ ಅವಶ್ಯಕತೆಯಿದೆ. ಕೆರೆಗಳನ್ನು ಕಟ್ಟಿ ನೂರಾರು ವರ್ಷಗಳಾಗಿದೆ ನಾವು record ಪ್ರಕಾರ ನೋಡಿದರೆ 400 ವರ್ಷಗಳ ಹಿಂದೆ ಕೆರೆಗಳನ್ನು ಕಟ್ಟಿರುವುದು ಸಿಗುತ್ತವೆ. ಬಿಜಾಪುರದಲ್ಲಿ ಬೇಗಂ ತಲಾಬ್ ಎಂದು ಕೆರೆಯಿದ್ದು, ಆ ಕೆರೆಯ ವಿಸ್ತೀರ್ಣ 262 ಎಕರೆ ಅದು water storage ಆಗುವ, water spread ಆಗುವ area ಇದೆ. ಅದನ್ನು ನಾವು Minor Irrigation Department ನಿಂದ ರಿಪೇರಿ ಮಾಡುತ್ತಿದ್ದೇವೆ. ಬಹುಶಃ ಅದು ಈಗ ಮುಗಿದಿರಬಹುದು. 400-500 ವರ್ಷಗಳ ಹಳೆ ಕೆರೆಗಳು ನಮಗೆ ಸಿಗುತ್ತಿವೆ. ಅವೆಲ್ಲಾ silt up ಆಗಿವೆ. ಇವತ್ತು ನೀರು ನಿಲ್ಲುವುದಿಲ್ಲ, ಜನರ ದುರಾಸೆಯಿಂದ ಅಕ್ಕಪಕ್ಕ ರೈತರು ಮತ್ತು ಅಲ್ಲಿ ಮನೆಗಳನ್ನು ಕಟ್ಟಿಕೊಂಡಿರುವವರು ಮತ್ತು ಗುಡಿಸಲನ್ನು ಹಾಕಿಕೊಂಡಂತಹವರು ಅದನ್ನು ಒತ್ತುವರಿ ಮಾಡಿದ್ದಾರೆ. ಈ ಬಿಲ್‌ನ್ನು ಹಳ್ಳಿಯಲ್ಲಿ ತರುವ ಅವಶ್ಯಕತೆಯೇ ಇಲ್ಲ. ಹಳ್ಳಿಯಲ್ಲಿ ಒತ್ತುವರಿ ಆಗಿಲ್ಲ, ಒತ್ತುವರೆಯೆಂದರೆ ಏನು ನನ್ನ ಹೊಲವಿದೆ ಪಕ್ಕದಲ್ಲಿ ಒಂದು ಎಕರೆ, ಎರಡು ಎಕರೆಯಲ್ಲಿ ಬೆಳೆಯನ್ನು ಬಿತ್ತಿದ್ದಾನೆ, ಬಾಳೆ, ಕಬ್ಬು ಹಾಕಿದ್ದಾನೆ, ಜೋಳ, ಗೋಧಿ ಬಿತ್ತಿದ್ದಾನೆ, ಆಸೆಗಾಗಿ ಲಿಂಬೆಹಣ್ಣಿನ ಗಿಡ ಹಾಕಿದ್ದಾನೆ ಇಂತಹವುಗಳನ್ನು ಮಾಡಿದ್ದು, ಅದನ್ನು ತೆರವು ಮಾಡುವುದಕ್ಕೆ ಇಂತಹ ದೊಡ್ಡ ಶಕ್ತಿ ಬೇಕಾಗಿಲ್ಲ. ರೈತರು ಬೇಡಪ್ಪ ಎಂದರೆ ಮರುದಿನ ಅಳತೆ ಮಾಡಿದರೆ ಅಲ್ಲಿಂದ ಸರಿದು ಖುಲ್ಲಾ ಮಾಡಿ ಹೋಗಿಬಿಡುತ್ತಾರೆ. ಇಲ್ಲವಾದರೆ ಬೆಳೆ ಬಿತ್ತಿದ್ದೇನೆ ಇದೊಂದು ಬೆಳೆಯನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತಾರೆ ಅದನ್ನು ಬಿಟ್ಟು ಹೆಚ್ಚೇನು ಮಾಡುವುದಿಲ್ಲ. ನಮಗೆ ಬೇಕಾಗಿರುವುದು urban area ಇಲ್ಲಿ ಭೂಮಿ ಬೆಲೆ ಐದು ಕೋಟಿ, 10 ಕೋಟಿ ರೂಪಾಯಿಗಳವರೆಗಿದೆ. ನಮ್ಮ ಮುಧೋಳದಂತಹ ಸಣ್ಣ ಊರಿನಲ್ಲಿ ಕೂಡ ಭೂಮಿ ಬೆಲೆ ಒಂದೊಂದು, ಎರಡೆರಡು ಕೋಟಿ ರೂಪಾಯಿಗಳಾಗಿದೆ. ಅವುಗಳನ್ನು

ತೆರವುಗೊಳಿಸಿ ಲಕ್ಷಾಂತರ ಕೋಟಿ ರೂಪಾಯಿಗಳ ಹಣ ಸರ್ಕಾರಕ್ಕೆ ಬರುತ್ತದೆ. ಹೊಸದಾಗಿ ಕೇಂದ್ರ ಸರ್ಕಾರದವರು ನಿಯಮಾವಳಿಗಳನ್ನು ಮಾರ್ಪಾಡು ಮಾಡಿದ್ದಾರೆ. 28 ಹೆಕ್ಟೇರ್‌ಗೂ ಕೂಡ ಅವರು ಹಣ ಕೊಡುತ್ತಾರೆ ಮೊದಲು ಇರಲಿಲ್ಲ. 28 ಎಕರೆ ಮಾಡಿದರೂ ಕೂಡ ಕೆರೆಗಳನ್ನು ಕಟ್ಟುವುದಕ್ಕೆ ಹಣ ಕೊಡುವ ವ್ಯವಸ್ಥೆಯಿದೆ. ಅದಕ್ಕೆ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಹಳ್ಳ-ಕೊಳ್ಳವಿದೆ, ಎಲ್ಲೆಲ್ಲಿ suitable site ಇದೆ, feasible site ಗಳಿವೆ ಅವುಗಳನ್ನು ಹುಡುಕಿ comprehensive plan ಮಾಡಿ. ರಾಜ್ಯದಲ್ಲೊ ಎಷ್ಟು ಸಿಗುತ್ತವೆ ಅಷ್ಟನ್ನು list ಮಾಡಿ ಕಳುಹಿಸಿದರೆ ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆ. ಒಂದೇ ವರ್ಷದಲ್ಲಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ವರ್ಷಾವರ್ಷಾ ಇಷ್ಟಿಷ್ಟು ಎಂದು ಕೊಟ್ಟರು ನಾಲ್ಕೈದು ವರ್ಷಗಳಲ್ಲಿ ನಾವು ಸಂಪೂರ್ಣವಾಗಿ ಮಳೆ ನೀರು ಹರಿದು ವ್ಯರ್ಥವಾಗಿ ಸಮುದ್ರ ಸೇರುತ್ತದೆ ಅದನ್ನು ಹಿಡಿದಿಟ್ಟು ಭೂಮಿಯಲ್ಲಿ ಹಿಂಗಿಸುವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಸರ್ಕಾ ಆ ನಿಟ್ಟಿನಲ್ಲಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ..........

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಕಾರಜೋಳರವರೆ ಒಳ್ಳೆಯ ಮಾತನ್ನು ಹೇಳಿದ್ದೀರಿ, ಮಹಾರಾಷ್ಟ್ರದಲ್ಲಿ "ನಮ್ಮ ಹೊಲ ನಮ್ಮ ಕೆರೆ" ಎಂಬ ಕಾನೂನನ್ನು ತಂದಿದ್ದಾರೆ. "ನಮ್ಮ ಹೊಲ ನಮ್ಮ ಕೆರೆ" ಇದಕ್ಕೆ ಕೇಂದ್ರ ಸರ್ಕಾರದಿಂದ ಅನುದಾನ ಸಿಗುತ್ತದೆ. ಈ ಹೊಸ ಯೋಜನೆಯಲ್ಲಿ ಯಾವುದೇ ಭೂಸ್ವಾಧೀನಕ್ಕೆ ಹಣವನ್ನೇ ಕೊಡಬೇಕಾಗಿಲ್ಲ. ಕೆರೆ ನಿರ್ಮಾಣಕ್ಕೆ ಹಣವನ್ನು ಖರ್ಚು ಮಾಡಿದರೆ ಸಾಕು. ಆ ರೀತಿ ಒಂದು ಯೋಜನೆಯಿದೆ.

ಶ್ರೀ ಜಿ.ಟಿ. ದೇವೆಗೌಡ:- ಮಾನ್ಯ ಉಪಾಧ್ಯಕ್ಷರೆ, ಒಂದು clarification ಕೇಳುತ್ತೇನೆ.

ಉಪಾಧ್ಯಕ್ಷರು:- ಬೇಡ ಮಾನ್ಯ ಕಾರಜೋಳರವರು ಮುಗಿಸಲಿ.

ಶ್ರೀ ಜಿ.ಟಿ. ದೇವೇಗೌಡ:– ಅವರಿಗೆ ಅವಕಾಶ ಕೊಡುತ್ತೀರಿ ನಮಗೆ ಕೊಡುವುದಿಲ್ಲ. ಒಂದೇ ನಿಮಿಷ, Minor Irrigation ಬಗ್ಗೆ ಹೇಳುತ್ತಿದ್ದೇನೆ. ಕೃಷಿ ಇಲಾಖೆ ಮತ್ತು ಜಲಾನಯನ ಇಲಾಖೆ ಎರಡು ಇಲಾಖೆಗಳನ್ನು merge ಮಾಡಿದ್ದಾರೆ. ಸಣ್ಣ ನೀರಾವರಿ ಇಲಾಖೆಗೆ ಹೋದ ಸಾರಿ ಐದ್ಯೆದು ಕೋಟಿ ರೂಪಾಯಿಗಳನ್ನು, ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರಲ್ಲ ಇದರಿಂದ ಎಷ್ಟು ಕೆರೆಗಳು ಅಭಿವೃದ್ಧಿ ಆಗಿವೆ? Minor Irrigation, Major Irrigation, ಜಿಲ್ಲಾ ಪಂಚಾಯಿತಿ, ಮಂಡಲ ಪಂಚಾಯಿತಿ ಮತ್ತು ಪುರಸಭೆಗಳಲ್ಲಿ ಎಷ್ಟು ಕೆರೆಗಳಿವೆ ಎಂಬುದನ್ನು ಲೆಕ್ಕಹಾಕಿ ಮೊದಲು ಸದನಕ್ಕೆ ತಿಳಿಸಲಿ. ಎಷ್ಟು ಕೆರೆ ಅಭಿವೃದ್ಧಿಯಾಗಿವೆ ಎಂಬುದನ್ನು ಹೇಳಲಿ. ಸಾವಿರ ಕೋಟಿ ರೂಪಾಯಿಗಳು ಲೂಟಿ ಆಗುತ್ತಿದೆ. ಇದರಿಂದ ಯಾವುದೇ ಅಭಿವೃದ್ಧಿ ಆಗುತ್ತಿಲ್ಲ. ಕೆರೆಗಳು ಆಗಬೇಕೆಂಬ ಕಳಕಳಿ ಎಲ್ಲರಿಗೂ ಇದೆ ಆದರೆ ರಾಜ್ಯದಲ್ಲಿ ಒಂದು ಕೆರೆ ಕೂಡ ಆಗುತ್ತಿಲ್ಲ. ಮೋಸವಾಗುತ್ತಿದೆ, ಲೂಟಿ ಆಗುತ್ತಿದೆ. ಎಷ್ಟು ಹಣ ಖರ್ಚಾಗಿದೆಯೆಂಬುದನ್ನು ಮೊದಲು ಸದನಕ್ಕೆ ಸಾಬೀತುಪಡಿಸಲಿ.

ಶ್ರೀ ಗೋವಿಂದ ಎಂ. ಕಾರಜೋಳ:– ಕೆರೆಗಳ maintenanceಗೆ grant ಇರುವುದಿಲ್ಲ. ಒಂದು ಹೆಕ್ಟೇರ್‌ಗೆ ಒಂದು ನೂರು ರೂಪಾಯಿಗಳನ್ನು ಕೂಡ ಕೊಡುವುದಿಲ್ಲ. Watch man ಗೆ ಪಗಾರ ಕೊಡುವುದಕ್ಕೂ ಕೂಡ ಆಗುವುದಿಲ್ಲ.

ಉಪಾಧ್ಯಕ್ಷರು:– ಬೇರೆ ವಿಚಾರಗಳು ಬೇಡ. Bill ಬಗ್ಗೆ ಮಾತನಾಡಿ, developments ಬಗ್ಗೆ ನಂತರ ಮಾತನಾಡೋಣ. Bill ಬಗ್ಗೆ ನಿಮ್ಮ comments ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಅವರಿಗೆ ಅನುಕೂಲವಾಗುವ ವಿಷಯವನ್ನೇ ಹೇಳುತ್ತಿರುವುದು. ಬೇರೆ ಯಾವುದನ್ನು ಹೇಳಿಲ್ಲ. Maintenance grant revise ಮಾಡಬೇಕು. ಯಾವ ಕಾಲದಲ್ಲಿ ಮಾಡಿದ್ದಾರೋ ಅದೇ rate ಅನ್ನು ಇವತ್ತಿಗೂ ಇಟ್ಟುಕೊಂಡು ಬಂದಿದ್ದಾರೆ. Maintenance grant ಅನ್ನು ಹೆಚ್ಚುವರಿ ಮಾಡಿ ಕೆರೆಗಳ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕು ಮತ್ತು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು

ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ವಾಪಸ್ಸು ತೆಗೆದುಕೊಂಡು ಮಾನ್ಯ ರಮೇಶ್ ಕುಮಾರ್ ರವರು, ಮಾನ್ಯ ಬಿ.ಆರ್. ಪಾಟೀಲ್‌ರವರು, ಮಾನ್ಯ ಕುಮಾರಸ್ವಾಮಿಯವರು, ಮಾನ್ಯ ಬೋಪಯ್ಯರವರು ಮತ್ತು ಮಾನ್ಯ ಕಾಗೇರಿಯವರು ಹೇಳಿದ ಹಾಗೆ ಒಂದು ಸಭೆಯನ್ನು ಕರೆದು ತಜ್ಞರೊಂದಿಗೆ ಮತ್ತು ಅನುಭವಸ್ಥರೊಂದಿಗೆ ಸಮಾಲೋಚನೆ ಮಾಡಿ, ಕೆರೆ–ಕಟ್ಟೆಗಳಿರುವ ಊರುಗಳಿಂದ ಬಂದಿರುವ ನಿಮ್ಮಂತಹವರ ಸಲಹೆ–ಸೂಚನೆ ತೆಗೆದುಕೊಂಡು ಸಮಗ್ರವಾಗಿ ಬಿಲ್‌ನ್ನು ತಯಾರು ಮಾಡಿದರೆ ಇದಕ್ಕೊಂದು ಅರ್ಥ ಬರುತ್ತದೆ. ಇಲ್ಲವಾದರೆ ಇದಕ್ಕೆ ಯಾವುದೇ ಅರ್ಥ ಬರುವುದಿಲ್ಲ. ಇದಕ್ಕೆ ಹಲ್ಲಿಲ್ಲ, ಉಗುರಿಲ್ಲ. ಹಲ್ಲಿದ್ದರೆ ಕಚ್ಚಬಹುದು, ಉಗುರಿದ್ದರೆ ಕೆರೆಯಬಹುದು ಎರಡನ್ನು ಮಾಡುವುದಕ್ಕಾಗುವುದಿಲ್ಲ. ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನೇನು ಮಂಡನೆ ಮಾಡಿದ್ದಾರೆ. 2013–14ನೇ ಸಾಲಿನಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದ ನಂತರ ಮಾನ್ಯ ಮುಖ್ಯಮಂತ್ರಿಗಳು ಹೊಸದಾಗಿ ಬಂದು ಬಜೆಟ್ ಮಂಡನೆ ಮಾಡಿದ ನಂತರ ಸಮಗ್ರವಾದಂತಹ ಕೆರೆಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದರೆ ವಿನಃ ಈ ರೀತಿ MI ಕೆರೆಗಳಿಗೆ ಒಂದು ಪ್ರಾಧಿಕಾರ ಮಾಡುತ್ತೇವೆಂದು ಹೇಳಲಿಲ್ಲ. ಕರ್ನಾಟಕ ರಾಜ್ಯದಲ್ಲಿರುವ 23000 ಮತ್ತು 36000 ಎಲ್ಲಾ ಕೆರೆಗಳನ್ನು ಒಟ್ಟು ಸೇರಿಸಿ ಒಂದು ಪ್ರಾಧಿಕಾರವನ್ನು ಮಾಡಿ ಈ ರಾಜ್ಯದ ರೈತರಲ್ಲಿ ಒಂದು ನೆಮ್ಮದಿ ಕಾಣುವಂತಹ ವ್ಯವಸ್ಥೆ ಮಾಡುತ್ತೇವೆಂದು ಘೋಷಣೆ ಮಾಡಿದ್ದರು ಅದಕ್ಕೆ ನಾವೆಲ್ಲಾ ಇಲ್ಲಿ ಕುಳಿತು ಮೇಜು ತಟ್ಟಿದ್ದೆವು. ಅದರಲ್ಲಿ ಎರಡನೆ ಮಾತಿಲ್ಲ. ಆದರೆ ಕಾರಣಾಂತರಗಳಿಂದ ಮೊದಲನೇ ವರ್ಷ ಅವರು ತರುವುದಕ್ಕೆ ಆಗಿಲ್ಲ. ತರುವುದಕ್ಕಾಗದ ಸಂದರ್ಭದಲ್ಲಿ ಎರಡನೇ ವರ್ಷ ಅದನ್ನು ತಂದಿದ್ದಾರೆ. ಯಾವ ಒತ್ತಡದಿಂದ ತಂದಿದ್ದಾರೆಂದು ನಮಗೆ ಗೊತ್ತಿಲ್ಲ. ಆದರೆ ತಂದಿರುವಂತಹ ಈ ಸಂದರ್ಭದಲ್ಲಿ ಇವತ್ತು ಯಾವ

ಕೆರೆಗಳಿಗೆ ತಂದಿದ್ದೇವೆ, ಎಷ್ಟು ಕೆರೆಗಳಿಗೆ ತಂದಿದ್ದೇವೆ? ಇವತ್ತು ಕೆರೆಗಳ ಪ್ರಾಧಿಕಾರವೆಂದರೆ ಅದು ಸಮಗ್ರವಾಗಿರುವಂತಹ ಪ್ರಾಧಿಕಾರವಾಗಿರಬೇಕು, ಪ್ರಾಧಿಕಾರದ ಜೊತೆಗೆ ಕೆರೆಗಳನ್ನು ಇಲ್ಲಿ ಸಂರಕ್ಷಣೆ ಮಾಡುವುದಕ್ಕೆ ಇಲ್ಲಿ ಬಿಲ್ ತಂದಿದ್ದಾರೆ. ಪ್ರಾಧಿಕಾರವೆಂದರೆ ಕೇವಲ ಸಂರಕ್ಷಣೆ ಮಾಡುವುದಕ್ಕೆ ಪ್ರಾಧಿಕಾರವೋ ಅಥವಾ ಇಡೀ ಸಮಗ್ರವಾದಂತಹ ಕೆರೆಗಳನ್ನು ಪುನಶ್ಚೇತನಗೊಳಿಸಿ ರಾಜ್ಯದಲ್ಲಿ ಅಂತರ್ಜಲ ಮಟ್ಟ ಏನು ಕುಸಿದಿದೆ, ನೀರು ಸಂಗ್ರಹಣೆ ಆಗದೆ ಬೋರ್‌ವೆಲ್ ವ್ಯವಸ್ಥೆಗೇನು ಹೋಗಿದ್ದೇವೆ ಆ ಬೋರ್‌ವೆಲ್ ವ್ಯವಸ್ಥೆಗೆ ಹೋದ ತಕ್ಷಣದಿಂದ ಇವತ್ತು ಅಂತರ್ಜಲದ ಮಟ್ಟ ಕುಸಿದುಹೋಗಿದೆ. ಹವಾಮಾನ ವೈಪರೀತ್ಯದಿಂದಾಗಿ ಕೆಲವು ಪ್ರದೇಶಗಳಲ್ಲಿ ಅದರಲ್ಲೂ ಹೆಚ್ಚಾಗಿ ಬಯಲು ಸೀಮೆಯಲ್ಲಿ ಅಂತರ್ಜಲದ ಸಮಸ್ಯೆಯನ್ನು ಅನುಭವಿಸುತ್ತಿದ್ದೇವೆ, ಇವತ್ತು ಸಮಗ್ರವಾದ ಕೆರೆಗಳ ಅಭಿವೃದ್ಧಿಯ ಚಿಂತನೆ ಆಗಬೇಕಾಗಿರುವುದು ನಿಜವಾಗಿ ನಮ್ಮ ಪ್ರದೇಶಕ್ಕೆ. ಇಂದು ಮಾನ್ಯ ಸದಸ್ಯರಾದ ಶ್ರೀ ಡಿ.ಸಿ. ತಮ್ಮಣ್ಣನವರು ಮಾತನಾಡುವ ಸಂದರ್ಭದಲ್ಲಿ ನೀರಾವರಿಯಿಮದ, ಕನ್ನಂಬಾಡಿ ಕಟ್ಟೆಯ ಮೇಲುಭಾಗದಿಂದ ನೀರನ್ನು ಹರಿಸುತ್ತೇವೆಂದಾಗ, ಆ ನೀರನ್ನು ಕೆರೆಯಲ್ಲಿ ಹೆಚ್ಚಾಗಿ ಶೇಖರಣೆ ಮಾಡಿಕೊಂಡಾಗ ಅದರಿಂದ ಕಬ್ಬು ಹೆಚ್ಚಾಗಿ ಬೆಳೆಯಬಹುದೆಂದು ಹೇಳಿ, ಒಂದು ವೇಳೆ ಯಾರಾದಾರೂ ಕೆರೆಯನ್ನು ಒತ್ತುವರಿ ಮಾಡಿದರೆ, ಅಲ್ಲಿನ ರೈತರು ಮತ್ತು ಜನರೆಲ್ಲರೂ ಸೇರಿ ಅದನ್ನು ಕಿತ್ತು ಹಾಕಿ ಆ ಕೆರೆಯನ್ನು ಅಭಿವೃದ್ಧಿ ಮಾಡುತ್ತಾರೆ. ಇವತ್ತು ಕೆರೆಗಳನ್ನು ಸಂರಕ್ಷಣೆ ಮಾಡುವಂತಹ ಸಂದರ್ಭದಲ್ಲಿ ಒತ್ತುವರಿ ಆಗಿರುವುದನ್ನೂ ಪರಿಗಣಿಸಬೇಕು. ಅದಕ್ಕೆ ಬಹಳ ಪೆಟ್ಟು ಬಿದ್ದಿದೆ. ಆದರೆ ನಮ್ಮ ಸಚಿವರು ನಮ್ಮನ್ನು ಒಂದು ದಿವಸವಾದರೂ ಸಹ ಕರೆದು ಆ ಕೆರೆಗಳಿಗೆ ಯಾವ ರೀತಿಯ ಪೆಟ್ಟುಬಿದ್ದಿದೆ, ಯಾವ ರೀತಿಯಲ್ಲಿ ಕೆರೆಯನ್ನು ಆಕ್ರಮಿಸುತ್ತಾರೆ ಎನ್ನುವ ಬಗ್ಗೆ ಕೇಳಿರುವುದಿಲ್ಲ, ಅದರ ಬಗ್ಗೆ ಹೇಳುತ್ತಿದ್ದೆವು. ನೀರು ಹೋಗುವ ಕೋಡಿಯ ಒಂದು ಅಂತಸ್ತಿನ ಕಲ್ಲನ್ನೇ ಕಿತ್ತು ಹಾಕಿ ಅದಕ್ಕೊಂದು ಕಾಂಕ್ರೀಟ್ ಅನ್ನು ಹಾಕುತ್ತಾರೆ. ಏತಕ್ಕೆಂದರೆ ಹಿಂದೆ ಇರುವವರು ಒತ್ತುವರಿ ಮಾಡಿರುವುದು ಮುಳಗಬಾರದು, ಒಂದು ನೀರು ಹೆಚ್ಚಿಗಾದರೂ

ಕೂಡ ಬೆಳೆ ಬೆಳೆಯುವುದಿಲ್ಲ. ತೆಂಗಿನ ಮರಗಳೆಲ್ಲಾ ಹಾಳಾಗುತ್ತವೆ. ಹಾಗಾಗಿ ಮುಂದಿರುವ ಕೋಡಿಗಳನ್ನು ಕಿತ್ತುಹಾಕುತ್ತಾರೆ. ಎಲ್ಲಾ ಮಾಡುತ್ತೀರಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಎಲ್ಲಕ್ಕಿಂತಲೂ ಹೆಚ್ಚಾಗಿ ನೀವು ಪ್ರಾಧಿಕಾರ ಮಾಡುವುದರ ಜೊತೆಗೆ ಮಾನ್ಯ ಸದಸ್ಯರಾದ ಶ್ರೀ ರಮೇಶ್ ಕುಮಾರ್ ಅವರು ಹೇಳಿದ ಹಾಗೆ ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನೂ ಮಾಡಿ. ಅದನ್ನು ಜಾರಿಗೆ ತಂದು ಅದರಲ್ಲಿ ಎಲ್ಲಾ ಕೆರೆಗಳನ್ನೂ ಸೇರಿಸಿ, ಅದಕ್ಕೆ ದೊಡ್ಡ ಪ್ರಮಾಣದಲ್ಲಿ ಬಜೆಟ್ ಇಡಿ. ಇದರ ಬಗ್ಗೆ ಎಲ್ಲಿಯೂ ಪ್ರಸ್ತಾಪವಾಗಿಲ್ಲ. ನಾವು ತಿಳಿದುಕೊಂಡಿರುವುದೇನೆಂದರೆ, ಮೈನರ್ ಇರಿಗೇಷನ್‌ಗೆ, ಮಾನ್ಯ ಸದಸ್ಯರಾದ ಶ್ರೀ ಕಾರಜೋಳ್ ಅವರು ಹೇಳಿದ ಹಾಗೆ, ಅವರೂ ಸಹ ಐದು ವರ್ಷಗಳ ಕಾಲ ಮಂತ್ರಿಗಳಾಗಿದ್ದರು. ಅಲ್ಲಿ ಯಾವ ರೀತಿಯ grant ಕೊಡುತ್ತಾರೆ? ಮಾನ್ಯ ಕೆರೆ ಕುಂಟೆ ಸಚಿವರೇ ಅಲ್ಲಿ ಏನೂ ಇಲ್ಲ. ಅಲ್ಲಿ ಕೊಡುವ grant ಯಾವುದಕ್ಕೂ ಅಂದರೆ ಒಂದು ಕೆರೆಗೂ, ಅರ್ಧ ಕೆರೆಗೆ ಹೂಳನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಆ ಬಜೆಟ್ ಕಡಿಮೆ ಇರುವುದರಿಂದ ಪ್ರಾಧಿಕಾರ ರಚನೆ ಮಾಡಿ. ಆ ಪ್ರಾಧಿಕಾರದ ಮುಖಾಂತರ ಕೆರೆಗಳ ಪುನಃಶ್ಚೇತನ ಮಾಡುತ್ತಾರೆ, ಬಹಳಷ್ಟು ದುಡ್ಡನ್ನು ಒದಗಿಸುತ್ತಾರೆ, ಈ ಕೆರೆಗಳೆಲ್ಲಾ ಅಭಿವೃದ್ಧಿಯಾಗುತ್ತದೆನ್ನುವ ದೃಷ್ಟಿಯಿಂದ ಬಹಳಷ್ಟು ಜನ ಮೇಜನ್ನು ಕುಟ್ಟಿದ್ದೆವು. ಆದರೆ ಇಲ್ಲಿ ತಂದಿರುವುದೇನೆಂದರೆ, ಕೆರೆಗಳನ್ನು ಒತ್ತುವರಿಯಿಂದ ಯಾವ ರೀತಿ ಸಂರಕ್ಷಣೆ ಮಾಡಬಹುದು ಎನ್ನುವ ಬಗ್ಗೆ ತಂದಿದ್ದೀರಿ. ಮಾನ್ಯ ಕುಮಾರಸ್ವಾಮಿ ಅವರು ಹೇಳಿರುವ ಹಾಗೆ 1964 ರಲ್ಲಿಯೇ ಕಾನೂನನ್ನು ತಂದಿದ್ದು, ಯಾರಾದರೂ ಕೆರೆಗಳನ್ನು ಒತ್ತುವರಿ ಮಾಡಿದರೆ, ಅವರ ಮೇಲೆ ಯಾವ ರೀತಿ ಕ್ರಮ ಜರುಗಿಸಬೇಕೆನ್ನುವುದೂ ಇದೆ. ಆದರೆ ನೀವು ಸ್ವಲ್ಪ ಸ್ಪೆಷಲ್ ಆಗಿ ತಂದಿದ್ದೀರಿ. ಆದರೂ ಇದೂ ಸಾಲದು. ಹಳ್ಳಿಯಲ್ಲಿರುವ ರೈತರು ಇದ್ಯಾವುದಕ್ಕೂ ಬಗ್ಗುವುದಿಲ್ಲ. ನಿಮ್ಮ ಕಾನೂನಿಗೆಲ್ಲಾ ಉಪ್ಪು–ಸೊಪ್ಪು ಹಾಕುವ ಜನರಿಲ್ಲ, ಬಹಳ ಬಲಾಢ್ಯರಿದ್ದಾರೆ. ನಮ್ಮ ಭಾಗದಲ್ಲಿ ಕೆರೆಯ ಪಕ್ಕ ಎಂದರೆ ತೆಂಗಿನ ಮರಗಳನ್ನೇ ಬೆಳೆಯುತ್ತಾರೆ.

ಉಳಿದ ಕಡೆಗಳಲ್ಲಿ ಯಾವ್ಯಾವ ಬೆಳೆಯಿದೆಯೋ ಆ ಬೆಳೆಗಳನ್ನು ಬೆಳೆದುಕೊಂಡಿದ್ದಾರೆ. ಒಂದೊಂದು ಕೆರೆ ಸುಮಾರು 10–15–20 ಎಕರೆಯವರೆಗೂ ಒತ್ತುವರಿಯಾಗಿದೆ. ಕೆರೆಯ ಲಕ್ಷಣಗಳಲ್ಲಿ ಹಿಂದೆ ಗೋಕಟ್ಟೆ ಎಂದು ನೀರು ಕುಡಿಯುವುದಕ್ಕಾಗಿ ರಾಜ ಮಹಾರಾಜರು ಕಟ್ಟಿಸಿದ್ದರು. ಇಂದು ಅವುಗಳು ಎಲ್ಲಿವೆ? ಇಂದು ಅವುಗಳೆಲ್ಲವನ್ನು ಬಲಾಢ್ಯರು ಆಕ್ರಮಿಸಿ, ಜೊತೆಯಲ್ಲಿ ಪಕ್ಕದಲ್ಲಿರುವ ಜಮೀನಿಗೆ ಏರಿಯನ್ನು ಹೊಡೆದು ಸೇರಿಸಿಕೊಂಡು ಕಾಲುವೆಗೆ ತೆಗೆದುಕೊಂಡು ಪಕ್ಕದಲ್ಲಿ ನೀರು ಬಿಟ್ಟಿರುತ್ತಾನೆ. ಗೋಕಟ್ಟೆಗಳನ್ನು ಯಾರು ಸಂರಕ್ಷಣೆ ಮಾಡುತ್ತಾರೆ? ಇದಕ್ಕೊಂದು ಗೋಕಟ್ಟೆ ಸಂರಕ್ಷಣೆ ಪ್ರಾಧಿಕಾರವೆಂದು ಮಾಡುತ್ತೀರಾ? ಜಿಲ್ಲಾ ಪಂಚಾಯಿತಿ ಕೆರೆಗಳಿಗೊಂದು ಪ್ರಾಧಿಕಾರ ಮಾಡುತ್ತೀರಾ? ಸಮಗ್ರ ಪ್ರಾಧಿಕಾರ ತರುವುದಾದರೆ ಕೆರೆಗಳ ಪುನಃಶ್ಚೇತನ ಮಾಡುವಂತಹದ್ದು ಮತ್ತು ಅದಕ್ಕೆ ಸಂರಕ್ಷಣೆ ಮಾಡುವಂತಹ ಕೆಲಸಕ್ಕೆ ಒಂದು ಪ್ರಾಧಿಕಾರವನ್ನು ರಾಜ್ಯದಲ್ಲಿ ಜಾರಿಗೆ ತಂದು ದೊಡ್ಡ ಮಟ್ಟದಲ್ಲಿ ಮಾಡಿ. ಅದಕ್ಕೆ ಪುನಶ್ಚೇತನ ಮಾಡುವ ದೃಷ್ಟಿಯಲ್ಲಿ ವ್ಯವಸ್ಥಿತವಾದ ಕಾನೂನನ್ನು ಜಾರಿಗೆ ತನ್ನಿ. ಆದರೆ ಇಲ್ಲಿ ಜಾರಿಗೆ ತಂದಿರುವ ಎಲ್ಲಾ ಕಾನೂನನ್ನು ಓದಿದೆವು. ಆದರೆ ಈ ಕಾನೂನಿಗೆ ಯಾರೂ ಕೂಡ ಒಪ್ಪುವುದಿಲ್ಲ. 1964 ರಿಂದಲೂ ನಿಮ್ಮ ಜಿಲ್ಲಾಧಿಕಾರಿಗಳು ಬರುತ್ತಲೇ ಇದ್ದಾರೆ. 1964 ರಲ್ಲಿ ಕಾನೂನನ್ನು ಏನು ಜಾರಿಗೆ ತಂದಿದ್ದೀರಿ, ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳು ಬರುತ್ತಲೇ ಇದ್ದಾರೆ. 1964 ರಲ್ಲಿ ಕಾನೂನನ್ನು ಏನು ಜಾರಿಗೆ ತಂದಿದ್ದೀರಿ, ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳು ಎಲ್ಲರೂ ಬಂದು ಕೆರೆಕಟ್ಟೆಗಳನ್ನು ಬಿಡಸಬೇಕೆಂಬ ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇಲೆ ಬಂದಿದ್ದಾರೆ. ಅಲ್ಲಿ ಬಂದಾಗ ಊರಿನ ಜನರು ಅವರವರೇ ಹೊಡೆದಾಟಕ್ಕೆ ಬೀಳುತ್ತಾರೆ. ನಾನು ಒತ್ತುವರಿ ಮಾಡಿಲ್ಲ, ನೀನು ಬಿಡು, ನಾನು ಬಿಡುತ್ತೇನೆ ಎಂದು ಊರಿನ ಜನರೇ ಕಿತ್ತಾಡುತ್ತಾರೆ. ಹೀಗಾಗಿ ಯಾವುದೇ ಕೆರೆಕಟ್ಟೆಗಳನ್ನು ಬಿಡಿಸುವುದಕ್ಕೆ ಯಾವುದೇ ಅಧಿಕಾರಿಗಳ ಕೈಯಲ್ಲಿ ಆಗಿರುವುದಿಲ್ಲ. ಹಾಗಾಗಿ ಇದಕ್ಕೊಂದು ಬಲಾಢ್ಯವಾದ ಕಾನೂನೊಂದನ್ನು ಜಾರಿಗೆ ತರುವುದಕ್ಕೆ ಸರ್ಕಾರ ಆಲೋಚನೆ ಮಾಡಬೇಕು. ಇದರ ಜೊತೆಗೆ ಕರೆಗಳನ್ನು ಸಂರಕ್ಷಣೆ

ಮಾಡಬೇಕು. ಕೆರೆಗಳಲ್ಲಿ ಹೂಳೆತ್ತಿದ ಕೂಡಲೇ, ಆ ಕೆರೆಗಳಲ್ಲಿ ಮತ್ತೆ ಹೂಳು ತುಂಬುದನ್ನು ನಿಲ್ಲಿಸಬೇಕು. ಆ ಕೆರೆಗಳಲ್ಲಿ ಬರುವ ಹೂಳಿಗೆ ತಡೆಯುವ ವ್ಯವಸ್ಥೆಯಾಗಬೇಕು. ಅಲ್ಲೇ ಚೆಕ್-ಡ್ಯಾಂಗಳನ್ನು ಆಳವಡಿಸಬೇಕು. ನೀರು ಮಾತ್ರ ಕೆರೆಗಳಿಗೆ ಬರಬೇಕು ಮತ್ತು ಹೂಳೆಲ್ಲವೂ ಅಲ್ಲೇ ತಡೆಯುವ ವ್ಯವಸ್ಥೆಯಾಗಬೇಕು. ಇದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಮೀಸಲಿಟ್ಟು ಚೆಕ್-ಡ್ಯಾಂಗಳನ್ನು ನಿರ್ಮಾಣ ಮಾಡುವ ಕೆಲಸವೂ ಸಹ ಆಗಬೇಕು. ರಾಜ್ಯದಲ್ಲಿರುವ ಹಳ್ಳಗಳ ಬಗ್ಗೆ ಹೇಳಿದ್ದಾರೆ. ಇದನ್ನು ಕೆರೆಗೆ ಹೋಗುವ ಹಳ್ಳಗಳು ಎಂದು ಕರೆಯುತ್ತೇವೆ. ಈ ಹಿಂದೆ 30-40-50 ಅಡಿಗಳೆಷ್ಟು ಹಳ್ಳಗಳಿದ್ದವು. ಹಿಂದೆ ಬಹಳ ಮಳೆಯಿದ್ದು ಅದನ್ನು ತಡೆಯುವುದಕ್ಕಾಗುತ್ತಿರಲಿಲ್ಲ. ಮಳೆ ಕಡಿಮೆಯಾಗುತ್ತಿದ್ದಂತೆ ಅದನ್ನು ಹಳ್ಳಗಳಿಗೆ ಕಲ್ಲು-ಮಣ್ಣು ಹಾಕಿ ಒತ್ತುವರಿ ಮಾಡಿಕೊಂಡು, ಇಂದು ಆ ಹಳ್ಳಗಳನ್ನು 3 ಅಡಿ ಅಗಲಕ್ಕೆ ಬಿಟ್ಟಿರುತ್ತಾರೆ. ಮಳೆಯು ಹೆಚ್ಚಾಗಿ ಆಗದೇ ಇರುವ ಕಾರಣದಿಂದ ತಡೆದಿದೆ. ಒಂದು ವೇಳೆ ಮಳೆ ಹೆಚ್ಚಾಗಿ ಆಗಿದ್ದರೆ ಈ ಕೆಲಸ ನಿಂತುಹೋಗುತ್ತಿತ್ತು, ಅಣೆಕಟ್ಟುಗಳೆಲ್ಲವೂ ಒಡೆದು ಹೋಗುತ್ತಿತ್ತು. ರಾಜ ಕಾಲುವೆಗಳನ್ನೂ ಸಹ ಒತ್ತುವರಿ ಮಾಡಿರುತ್ತಾರೆ. ಈ ರಾಜ ಕಾಲುವೆಗಳನ್ನು ಬಿಡಿಸುವ ಕೆಲಸ ಮೊದಲು ಆಗಬೇಕು. ಕೆರೆಗಳಿಗೆ ನೀರು ಸಲೀಸಾಗಿ ಸೇರುವಂತಹ ಕೆಲಸ ಕೂಡ ಆಗಬೇಕೆನ್ನುವ ಮಾತನ್ನು ಸದನದ ಮುಖಾಂತರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಮಿತಿಯೊಂದನ್ನು ರಚನೆ ಮಾಡಿ, ಜಿಲ್ಲಾಧಿಕಾರಿಗಳನ್ನು ಅಧಿಕಾರಿಯನ್ನಾಗಿ ಮಾಡಿರುವುದು ಅನಿವಾರ್ಯ, ಏಕೆಂದರೆ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳೇ ಹೆಡ್. ರಾಜ್ಯ ಸಮಿತಿಯಲ್ಲಿ ಮೂರು ಜನರನ್ನು ಸಮಿತಿಯ ಸದಸ್ಯರನ್ನಾಗಿ ಮಾಡಿದ್ದೀರಿ. ನಾನು ಸಲಹೆ ಕೊಡುವುದೇನೆಂದರೆ ಯಾವತ್ತಿಗೂ ಅಧಿಕಾರರೇತರನ್ನು ನಿಷ್ಪಕ್ಷವಾಗಿ ಕಾನೂನನ್ನು ಜರುಗಿಸುವಂತಹ ಕಾಲದಲ್ಲಿ ಯಾವುದೇ ಕಾರಣಕ್ಕೂ ಇವರನ್ನು ಸದಸ್ಯರನ್ನಾಗಿ ಸೇರ್ಪಡೆ ಮಾಡಬೇಡಿ. ಮಂತ್ರಿಗಳಾದವರು ಮೂರು ಜನ ಸದಸ್ಯರನ್ನು ನೇಮಕ ಮಾಡಿರುತ್ತೀರಿ.

ಅವರ ಹತ್ತಿರ ನಾಳೆ ಬೆಳಿಗ್ಗೆ ನನ್ನ ಪರವಾಗಿ ವಾದ ಮಾಡಿ ಎಂದು ನೀವೇ ಹೇಳಬಹುದು. ಎಲ್ಲೋ ಒಂದು ಕಡೆ ಅಧಿಕಾರಿಗಳೇ ನಿರ್ದಿಷ್ಟವಾದ ಕ್ರಮವನ್ನು ಜರುಗಿಸುವಂತಹ ದೃಷ್ಟಿಯಿಂದ ಜಿಲ್ಲಾ ಸಮಿತಿಗಳಿಗೆ ಶಾಸಕರನ್ನು ಸೇರಿಸಿಕೊಳ್ಳಿ ಎಂದು ಮಾನ್ಯ ಕಾಗೇರಿಯವರು ಹೇಳಿದರು, ಬೇಕಾದರೆ ಅವರ ಭಾಗಕ್ಕೆ ಸೇರಿಸಿಕೊಳ್ಳಿ, ನಮ್ಮ ಭಾಗಕ್ಕೆ ಮಾತ್ರ ಬೇಡ. ಏಕೆಂದರೆ ಮುಂದಿನ ಸಾರಿ ವಿಧಾನಸಭೆಗೆ ಬರುವುದಕ್ಕೆ ಆಗುವುದಿಲ್ಲ. ಏಕೆಂದರೆ ಎಲ್ಲರೂ ಒತ್ತುವರಿ ಮಾಡಿರುತ್ತಾರೆ, ಎಂ.ಎಲ್.ಎ. ಅಧ್ಯಕ್ಷನಾಗಿ, ಕೆರೆಯನ್ನು ಒತ್ತುವರಿ ಮಾಡುತ್ತಿದ್ದಾರೆಂದರೆ, ತೆಗೆಸುತ್ತಿದ್ದಾನೆಂದರೆ, ಆ ಊರಿನಲ್ಲಿ ಗುಂಪುಗಾರಿಕೆ ನಡೆಸಿ ಗಲಾಟೆ ಮಾಡುತ್ತಾರೆ. ಹಾಗಾಗಿ ದಯಮಾಡಿ ಶಾಸಕರನ್ನು ಮಾತ್ರ ನಮ್ಮ ಭಾಗದಲ್ಲಿ ಸದಸ್ಯರನ್ನಾಗಿ ಮಾತ್ರ ಮಾಡಬೇಡಿ. ಅವರ ಭಾಗದಲ್ಲಿ ಏನೂ ತಕರಾರು ಇಲ್ಲದಿದ್ದರೆ, ಕಾರವಾರ, ಮಂಗಳೂರು ಜಿಲ್ಲೆಯಲ್ಲಿ ಮಾಡಿ ಎನ್ನುವುದು ನನ್ನ ಸಲಹೆ. ನಮ್ಮ ಬಯಲು ಸೀಮೆಗೆ ಮಾತ್ರ ಸದಸ್ಯರನ್ನಾಗಿ ಮಾತ್ರ ಮಾಡುವುದು ಬೇಡವೆಂದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಅರಸೀಕೆರೆಯ ಯಾವುದೇ ಭಾಗಕ್ಕೂ ಬೇಡ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸದಸ್ಯರಾದ ಜೀವರಾಜ್ ಮತ್ತು ಕಾಗೇರಿಯವರಿಬ್ಬರೂ ಮಾತನಾಡುವ ಸಂದರ್ಭದಲ್ಲಿ ಪೈಪಲೈನ್ ಹಾಕಿಕೊಂಡು ರಾಜ ಕಾಲುವೆ ಮುಖಾಂತರ ಅತ್ತ ಕಡೆ ತಿರುಗಿಸುತ್ತಾರೆಂದು ಹೇಳಿದ್ದರು. ಅದು ಮಲೆನಾಡಿನಲ್ಲಿ. ಆದರೆ ನಮ್ಮಲ್ಲಿ ನೀರೇ ಇಲ್ಲ, ಮಳೆಯೇ ಬರುವುದಿಲ್ಲ. ನಾವು ಪೈಪ್ ಎಲ್ಲಿ ಹಾಕಿಕೊಂಡು ತಿರುಗಿಸಿಕೊಳ್ಳೋಣ. ನಮ್ಮಲ್ಲಿ ಅದರ ಅವಶ್ಯಕತೆಯೇ ಬರುವುದಿಲ್ಲ. ಹಾಗಾಗಿ ನಾವು ಅದರ ಬಗ್ಗೆ ಯೋಚನೆ ಮಾಡುವುದು ಸರಿಯಿಲ್ಲ. ಊರಿನ ಪಕ್ಕದಲ್ಲಿಯೇ ಕೆರೆಯಿದ್ದರೆ, ಕೆರೆ ಮೈದಾನ ಪ್ರದೇಶದಲ್ಲಿಯೇ ಹಲವಾರು ಮನೆಗಳನ್ನು ನಿರ್ಮಾಣ ಮಾಡಿರುತ್ತಾರೆ. ನೀವು ಕಾನೂನನ್ನು ಜಾರಿಗೆ ತಂದು ಮನೆಗಳನ್ನು vacate ಮಾಡುವ ಸಂದರ್ಭದಲ್ಲಿ, ಯಾರು ಮನೆ ಕಟ್ಟಿರುತ್ತಾರೆಂದರೆ ನಿರ್ಗತಿಕರು ಮಾತ್ರ. ಮನೆ ಮತ್ತು ಜಮೀನು

ಇರುವಂತಹವರು ಯಾರು ನಿರ್ಮಾಣ ಮಾಡಿರುವುದಿಲ್ಲ. ನಿರ್ಗತಿಕರಾದವರು ಯಾರೂ ಕೇಳುವುದಿಲ್ಲವೆನ್ನುವ ಕಾರಣಕ್ಕೆ ವಿಧಿಯಿಲ್ಲದೆ, ಅಲ್ಲಿ ಹೋಗಿ ಮೊದಲು ಗುಡಿಸಲುಗಳನ್ನು ನಿರ್ಮಿಸಿಕೊಳ್ಳುತ್ತಾರೆ. ತದನಂತರ, ಜನತಾ ಮನೆ ಕೊಟ್ಟ ನಂತರ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಇವರನ್ನು vacate ಮಾಡಿಸುವಾಗ ಇವರಿಗೆ ಸೂಕ್ತವಾದಂತಹವ ಪರಿಹಾರ ಕೊಟ್ಟು ಅಥವಾ ಮನೆಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಿ. ಅವರನ್ನು ಒಮ್ಮೆಲೇ ಒಕ್ಕಲೆಬ್ಬಿಸುವುದಕ್ಕೆ ಆಗುವುದಿಲ್ಲ. ಬಹಳಷ್ಟು ಊರುಗಳಲ್ಲಿ ಈ ರೀತಿಯ ಸಮಸ್ಯೆಯನ್ನು ನೋಡಿದ್ದೇವೆ. ಯಾರೋ ಊರಿಗೆ ಬಂದಂತಹ ಸಂದರ್ಭದಲ್ಲಿ ಅವರಿಗೆ ಕೆರೆ ಹತ್ತಿರ ಹೋಗಿ ಗುಡಿಸಲನ್ನು ನಿರ್ಮಿಸಿಕೊಳ್ಳುವಂತೆ ಹೇಳುತ್ತೇವೆ. ಬಹಳ ವರ್ಷಗಳಿಂದ ಮಳೆಯಿಲ್ಲದೇ ಕೆರೆಗಳು ಸಹ ತುಂಬಿರುವುದಿಲ್ಲ. ಅವರು ನಿರ್ಗತಿಕರಾಗಿರುತ್ತಾರೆ. ಅವರಿಗೆ ಒಂದು ಮನೆಯನ್ನು ಕೊಟ್ಟು, ಜಾಗ ಕೊಟ್ಟು ಅವರನ್ನು ಖಾಲಿ ಮಾಡಿಸಿ. ನಮ್ಮದೇನೂ ತಕರಾರು ಇಲ್ಲ. ನೀವು ಪ್ರಾಧಿಕಾರವನ್ನು ಮಾಡಿ, ಬಹಳ ಕಟ್ಟುನಿಟ್ಟಾದ ಕಾನೂನನ್ನು ತೆಗೆದುಕೊಂಡು ಬನ್ನಿ. ನಾವು, ಈಗ ತಂದಿರುವ ಕಾನೂನನ್ನು ಓದಿದ್ದೇವೆ. ಇದನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋದರೆ 3 ಗಂಟೆಗಳ ಕಾಲ ಬೇಕಾಗುತ್ತದೆ. ಬೇಡ. ಈ ಕಾನೂನಿನಲ್ಲಿ ತಾವು ಒಂದು ಸತ್ವಯುತವಾದ ಬಿಲ್ ಅನ್ನು ತಂದಿಲ್ಲ. ಇದರಲ್ಲಿ ಇನ್ನೂ ಬಹಳಷ್ಟು ವಿಚಾರಗಳು ಅಡಕವಾಗಬೇಕಾಗಿದೆ. ಕಾನೂನು ಶಿಕ್ಷೆ ಕೊಡುವುದರಲ್ಲಿ cite and order ರೀತಿಯಲ್ಲಿ ಮಾಡಬೇಕು. ಈ ಕಾನೂನಿಂದ ಮುಂದೆ ಏನು ತಡೆಯುವುದಕ್ಕೆ ಆಗುವುದಿಲ್ಲವೆನ್ನುವ ರೀತಿಯಲ್ಲಿ ರಾಜ್ಯದಲ್ಲಿ ಪ್ರಚಾರ ಆದರೆ ಮಾತ್ರ ಈ ಕೆರೆಯಂಗಳವನ್ನು ಬಿಡುಸುವುದಕ್ಕೆ ಸಾಧ್ಯವಾಗುತ್ತದೆ. ಯಾವ ಊರಿನಲ್ಲಿ ನೋಡಿದರ ಸಹ ಒತ್ತುವರಿ ಇಲ್ಲದೆ ಇಲ್ಲ. ಯಾವ ಕೆರೆನೂ ಒತ್ತುವರಿ ಇಲ್ಲದೆ ಇಲ್ಲ. ಪ್ರತಿಯೊಬ್ಬರು ಒತ್ತುವರಿ ಮಾಡಿಕೊಂಡು ಉತ್ತುಕೊಂಡಿದ್ದಾರೆ. ಅವರಿಗೆ ಏನು ಬೇಕೋ ಅದನ್ನು ಮಾಡಿಕೊಂಡು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಅದರ ಜೊತೆಗ, ತಾವು, ಈ ಬಳ್ಳಾರಿ ಜಾಲಿಯನ್ನು ತೆಗೆಯುವುದಕ್ಕೂ ಒಂದು ಕಾನೂನನ್ನು ತರಬೇಕು. ಇಲ್ಲವಾದರೆ

ಕೆರೆಗಳು ಉಳಿಯುವುದಿಲ್ಲ. ಇವತ್ತು ಯಾವ ಕೆರೆಯಲ್ಲೂ ಸಹ ಕೆರೆ ಅಂಗಳವಿಲ್ಲ. ಎಲ್ಲಾ ಕೆರೆಗಳು ಬಳ್ಳಾರಿ ಜಾಲಿಯಿಂದ ತುಂಬಿ, ಚಿರತೆ, ಹುಲಿ, ಕರಡಿ ಬಂದು ಅದರೊಳಗೆ ಸೇರಿಕೊಂಡಿವೆ. ಊರಿನ ಪಕ್ಕದಲ್ಲಿ ಯಾರು ಮನುಷ್ಯರು ಜೀವನ ಮಾಡುವ ಹಾಗಿಲ್ಲ. ಬಳ್ಳಾರಿಯಿಂದ ಜಾಲಿ ಹೇಗೆ ಬಂತೋ ಗೊತ್ತಿಲ್ಲ. ಇವತ್ತು ಯಾವ ಕೆರೆಗೂ ಸಹ ಉಳಿವಿಲ್ಲ. ತಾವು ಕೆರೆಯ ಹೂಳು ತೆಗೆಯುವ ಮೊದಲು ಕೆರೆಯಲ್ಲಿ ಬಳ್ಳಾರಿ ಜಾಲಿಯನ್ನು ತೆಗೆಯಬೇಕು. ಬಳ್ಳಾರಿ ಜಾಲಿಯನ್ನು ತೆಗೆಯುವುದಕ್ಕೆ act ಬೇಕಾಗಿಲ್ಲ. ನಾವು ಸಲಹೆ ಕೊಡುತ್ತಿದ್ದೇವೆ ಅಷ್ಟೇ. ಅವರು ಮೊದಲ ಭಾಷಣದ ಬಜೆಟ್‌ನಲ್ಲಿ ಸಮಗ್ರವಾದಂಥ ಕೆರೆಯ ಅಭಿವೃದ್ಧಿಗೋಸ್ಕರ ನಾವು ಪ್ರಾಧಿಕಾರವನ್ನು ತರುತ್ತಿದ್ದೇವೆಂದು ಹೇಳಿದ್ದರಿಂದ ನಾವು ಮೇಜು ಕುಟ್ಟಿದ್ದು. ಆದರೆ, ಈಗ ಕೇವಲ ಸಂರಕ್ಷಣೆಗೆ ಮಾತ್ರ ಪ್ರಾಧಿಕಾರವನ್ನು ತಂದಿದ್ದೀರಿ. ಕೆರೆಯನ್ನು ಹೇಗೆ ಒತ್ತುವರಿ ಮಾಡಿಕೊಂಡಿದ್ದಾರೆ? ಅವರನ್ನು ಅಲ್ಲಿಂದ ಹೇಗೆ ತೆರವುಗೊಳಿಸಬೇಕು? ಎನ್ನುವುದನ್ನು ಬಿಟ್ಟರೆ ನೀವು ಅಭಿವೃದ್ಧಿ ಬಗ್ಗೆ ಒಂದಿಷ್ಟು ಚಕಾರ ಎತ್ತಿರುವುದಿಲ್ಲ. ಈ ಪ್ರಾಧಿಕಾರವನ್ನು ತಾವು ಮಾಡಿದ್ದೀರಿ. ಆದರೆ MI ನಿಮಗೆ allot ಆಗಿದೆಯಲ್ಲಾ, ಅದರಲ್ಲಿ ನೀವು ಮಾಡುತ್ತೀರಾ? ನಿಮ್ಮ MIಗೆ allocation ಯಾಗಿದಯಲ್ಲಾ ಬಜೆಟ್ ಅದರಲ್ಲಿ ಪ್ರಾಧಿಕಾರವನ್ನು ನಡೆಸುವುದಕ್ಕೆ ಆಗುತ್ತದೆಯೇ? ಪ್ರಾಧಿಕಾರವನ್ನು ಏತಕ್ಕೋಸ್ಕರ ತರಬೇಕು? ಪ್ರಾಧಿಕಾರವೆಂದು ಮಾಡಿದ ಮೇಲೆ ಅದಕ್ಕೆ finance implication ಇರಲೇಬೇಕು. ಒಂದು ಪ್ರಾಧಿಕಾರವನ್ನು ಘೋಷಣೆ ಮಾಡಬೇಕಾದರೆ ಇಷ್ಟು ವರ್ಷದಲ್ಲಿ ಇಷ್ಟು ಸಾವಿರ ಕೋಟಿ ಹಣವನ್ನು ತೊಡಗಿಸುತ್ತೇವೆ. ಒಂದು ಕೋಟಿ ರೂ.ಗಳಲ್ಲಿ ಏನು ಮಾಡುತ್ತೀರಿ? ಎಷ್ಟು ಕೆರೆಗಳಿವೆ? ಪ್ರಾಧಿಕಾರವನ್ನು ನಡೆಸುವುದಕ್ಕೆ ಬೇಕಾಗುವ ಖರ್ಚಿಗೆ ಆ ಹಣ ಸಾಕಾಗವುದಿಲ್ಲ. ಈ ಬಾರಿಯ ಬಜೆಟ್‌ನಲ್ಲಿ ಒಂದು ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕೆಂದರೆ ತಾವು ಒಂದು ಕ್ಷೇತ್ರಕ್ಕೆ ಒಂದು ಲಕ್ಷ ಅಥವಾ ಒಂದು ಕೋಟಿ ರೂ.ಗಳನ್ನು ಕೊಡುತ್ತೀರಿ. ಅದರಲ್ಲಿ ಆ ಕೆರೆಯನ್ನು ಏನು ಮಾಡುವುದಕ್ಕೆ ಸಾಧ್ಯ? ಇದನ್ನು ತಾವು ಯೋಚನೆ ಮಾಡಬೇಕು. ಇವತ್ತು ಮಳೆಯಂಥೂ ಬರುವುದಿಲ್ಲ.

10 ವರ್ಷವಾದರೂ ಕೆಂರೆಗಳು ತುಂಬಿಲ್ಲ. ಬಯಲು ಪ್ರದೇಶಗಳಾದ ಅರಸೀಕೆರೆಯಿಂದ ಕೋಲಾರದ ಶ್ರೀನಿವಾಸಪುರದವರೆಗೆ ಕೆರೆಯಲ್ಲಿ ನೀರು ನೋಡಿ 10 ವರ್ಷ ಆಗಿದೆ. ಆದ್ದರಿಂದ, ದಯಮಾಡಿ, ತಾವು ಹೇಮಾವತಿ ನದಿ ಮೂಲದಿಂದ ಅಥವಾ ಯಾವುದೇ ಬೇರೆ ಮೂಲದಿಂದ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವುದಕ್ಕೆ ಈ ಪ್ರಾಧಿಕಾರದಲ್ಲಿ ನೀವು ಸ್ವಲ್ಪ ಹಣವನ್ನು ಜೋಡಣೆ ಮಾಡಿ. ಇದಕ್ಕೊಂದು ವ್ಯವಸ್ಥೆ ಮಾಡಿ. ತಾವು, ಎತ್ತಿನಹೊಳೆ ಯೋಜನೆ ತಂದಿದ್ದಾರೆ. MI ಹಣದಲ್ಲಿ ಕೆರೆ ಕೆರೆ ನೀರು ತುಂಬಿಸುತ್ತೇವೆಂದು ಹೇಳುತ್ತೀರಿ. ಎಷ್ಟು ವರ್ಷಕ್ಕೆ ತುಂಬುತ್ತೀರಿ? MI ರವರು ಕೆರೆ ಮಾಡುವುದಕ್ಕೆ ಬಂದಿದ್ದಾರೆ. ಇದು ಹೇಗೆ ಆಗುತ್ತದೆ? ನಿಮ್ಮ ಬಜೆಟ್‌ನಲ್ಲಿ ಕೆರೆ ಕೆರೆ ನೀರು ತುಂಬುವುದಕ್ಕೆ ಆಗುತ್ತದೆಯೇ? ಇದನ್ನೇ ಪದೇ ಪದೇ ಹೇಳಿಕೊಂಡು ಎಷ್ಟು ವರ್ಷಗಳ ಕಾಲ ರೈತರು ಈ ಸಂಕಷ್ಟಕ್ಕೆ ಸಿಕ್ಕಿಕೊಳ್ಳುವುದು? ತಾವು ಈ ಪ್ರಾಧಿಕಾರವನ್ನು ಮಂಡಿಸಿದ ಮೊದಲ ದಿನವೇ ಇದರಲ್ಲಿ ಮಹತ್ವವಾದ ತೀರ್ಮಾನವನ್ನು ತೆಗೆದುಕೊಂಡಿರುತ್ತಾರೆ ಎಂದುಕೊಂಡು ನಾವು ಇದನ್ನು ಓದಿದಾಗ ಅದರಲ್ಲಿ ಕೇವಲ ಕೆರೆಗಳನ್ನು ಹೇಗೆ ಸಂರಕ್ಷಣೆ ಮಾಡಿಕೊಳ್ಳುವುದು ಎನ್ನುವುದರ ಬಗ್ಗೆ ಇದೆ. ಅದು ಬಿಟ್ಟರೆ ಬೇರೆನೂ ತೋರಿಸಿಲ್ಲ. ದಯಮಾಡಿ, ಸಮಗ್ರವಾಗಿ ಈ ಪ್ರಾಧಿಕಾರವನ್ನು ತಂದು. . .

ಅಧ್ಯಕ್ಷರು:– ಇದೆಯಲ್ಲಾ ಗೌಡರೆ, Functions of Authorityನಲ್ಲಿ ಎಲ್ಲಾ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಇದೆ. ನಾನು ನೋಡಿದ್ದೇನೆ. ಸರಿಯಾಗಿ ಮಾಡಿಲ್ಲ. ಒಂದು ಸಾವಿರ ಕೋಟಿ ರೂ.ಗಳನ್ನು ಇಟ್ಟುಕೊಂಡು ಏನು ಮಾಡುತ್ತೀರಿ? ಸಾವಿರ ಕೋಟಿಯಲ್ಲಿ ಏನು ಮಾಡುವುದಕ್ಕೆ ಸಾಧ್ಯ? ಆ ಹಣದಿಂದ ಒಂದು ಕಡೆಯಿಂದ ಕೆರೆಯ ಬಳ್ಳಾರಿ ಜಾಲವನ್ನು ತೆಗೆಸುವುದಕ್ಕೆ ಆಗುವುದಿಲ್ಲ. ಅವರು ಇಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ಇಟ್ಟಿಲ್ಲ.

ಅಧ್ಯಕ್ಷರು:- ಒಂದು ಕಾನೂನನ್ನು ಮಾಡುವಾಗ ಅದಕ್ಕೆ ಬೇಕಾಗುವಂಥ ಹಣವನ್ನು ಒಟ್ಟಿಗೆ ಇಟ್ಟುಕೊಳ್ಳುವಂಥ. . .

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿರುವ ಒತ್ತುವರಿ ಕೆರೆಗಳನ್ನು ತೆರೆವುಗೊಳಿಸುವುದಕ್ಕೆ ಒಂದು ಪ್ರಾಧಿಕಾರವನ್ನು ರಚನೆ ಮಾಡುತ್ತೇವೆಂದು ಘೋಷಣೆ ಮಾಡಿದ್ದರೆ ನಾವು ಇಷ್ಟು ಭಾಷಣವನ್ನು ಮಾಡುತ್ತಿರಲಿಲ್ಲ. ತೆರವುಗೊಳಿಸುವುದಕೋಸ್ಕರ ಒಂದು ಕಾನೂನು ತಂದಿದ್ದಾರೆಂದು ನಾವು ಸುಮ್ಮನೆ ಇರುತ್ತಿದ್ದೆವು. ಆದರೆ, ಮೊದಲ ಬಜೆಟ್‌ನಲ್ಲಿ ಈ ಪ್ರಾಧಿಕಾರವನ್ನು ತಂದು 26+36 ಸಾವಿರ ಕೆರೆಗಳನ್ನು ಈ ರಾಜ್ಯದಲ್ಲಿರುವಂಥ ಸಮಗ್ರವಾದಂಥ ಎಲ್ಲಾ ಕೆರೆಗಳನ್ನು ಸರ್ವಾಂಗೀಣವಾಗಿ ಅಭಿವೃದ್ಧಿ ಪಡಿಸುತ್ತೇವೆಂದು ಹೇಳಿದ್ದರಿಂದ ನಾವು ಈ ಮಾತನ್ನು ಹೇಳುತ್ತಿದ್ದೇವೆ. ಆದ್ದರಿಂದ, ಕೇವಲ ಕೆರೆಗಳ ಸಂರಕ್ಷಣೆಗೋಸ್ಕರವಾಗಿ ಈ ಕಾಯಿದೆಯನ್ನು ನಾವು ತಂದಿದ್ದೇವೆಂದರೆ ಅದು ಸರಿಯಾಗಿದೆ.

ಅಧ್ಯಕ್ಷರು:- ಇದೆಯಲ್ಲಾ. ...to protect, conserve, reclaim, regenerate and restore tank, lake facilities... ಅಂಥ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಹೇಳಿದ್ದಾರೆ. ಅದಕ್ಕೆ ಹಣ ತೋರಿಸುತ್ತಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ಕೇವಲ act ನಲ್ಲಿ ಆಗುತ್ತದೆಯೇ? ಅದಕ್ಕೆ ಹಣದ provision ಏನು? ಆರ್ಥಿಕವಾಗಿ ಏನು ಬಲ ಕೊಡದಿದ್ದರೆ ಹೇಗೆ? ಅವರು ಹಣವನ್ನು ಎಲ್ಲಿಂದ ತರುತ್ತಾರೆ ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಒಂದು ಪ್ರಾಧಿಕಾರವನ್ನು ತರಬೇಕಾದರೆ ಹಣವನ್ನು express ಮಾಡಬೇಕು. ನಾಳೆಯಿಂದ effect ಗೆ ಬರುತ್ತದೆ. ಆಗ ಈ ಕೆಲಸಗಳೆಲ್ಲಾ ಆಗಬೇಕಲ್ಲಾ?

ಅಧ್ಯಕ್ಷರು:– ಒಂದು ಸರ್ಕಾರ ರಚನೆ ಮಾಡಿದಾಗ ಆ ಸರ್ಕಾರದಲ್ಲಿ ಒಬ್ಬರು ಮುಖ್ಯಮಂತ್ರಿಗಳಾಗುತ್ತಾರೆ. ಮುಖ್ಯಮಂತ್ರಿಗಳಾಗಬೇಕಾದರೆ, ಮುಖ್ಯಮಂತ್ರಿಯಾಗಿ ಕೆಲಸ ಮಾಡಬೇಕಾದರೆ ಇಷ್ಟೇ ಹಣ ಕೊಡಬೇಕೆಂದು ಮುಂಚಿತವಾಗಿ ಹಣವನ್ನು ಕೊಟ್ಟಿರುತ್ತಾರೆಯೇ? ಮುಖ್ಯಮಂತ್ರಿ ಆದಮೇಲೆ resource ಅನ್ನು generate ಮಾಡಿ, ಯೋಜನೆಯನ್ನು restore ಮಾಡಿ ಮಾಡುತ್ತಾರೆ. Authority ಆದಮೇಲೆ ಅದರ ಕಾರ್ಯವ್ಯಾಪ್ತಿಗೆ ಎಷ್ಟು ಹಣ ಬೇಕಾಗುತ್ತದೆ? ಏನೇನು ಬೇಕಾಗುತ್ತದೆ ದನ್ನು ಚಿಂತನೆ ಮಾಡಿ ಅಷ್ಟು ಹಣವನ್ನು. . . .

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಅದನ್ನು ಇದರಲ್ಲಿ ಹೇಳಬೇಕು. ಅಭಿವೃದ್ಧಿ ಮಾಡುತ್ತೇವೆಂದು ಹೇಳಿದ ಮೇಲೆ ಇಷ್ಟು ಹಣಕಾಸಿನ sources ಅನ್ನು ಇಡುತ್ತೇವೆಂದು ಹೇಳಬೇಕು.

ಅಧ್ಯಕ್ಷರು:– ಒಂದು ಕಾನೂನು ಮಾಡುವಾಗ ಕಾನೂನಿನಲ್ಲಿ ಇದಕೋಸ್ಕರ ಇಷ್ಟೇ ಹಣ ಬೇಕು ಎಂದು ಹೇಳುವುದಕ್ಕಾಗುವುದಿಲ್ಲ. ಇದು ಅಣೆಕಟ್ಟು ಕಟ್ಟಿದ ಹಾಗೆ ಅಲ್ಲ. ಡ್ಯಾಮ್ ಕಟ್ಟುವಾಗ paln-estimate ನಲ್ಲಿ ಇಷ್ಟು ಹಣ ಬೇಕಾಗುತ್ತದೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗುತ್ತದೆ. ಇದು ಒಂದು ಕಾರ್ಯಕ್ರಮವನ್ನು ಮಾಡುವುದಕ್ಕೆ ಒಂದು Authority. ಅಧಿಕಾರಯುತವಾದಂಥ ಒಂದು ಸಮಿತಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ನಾವು ಇಲ್ಲವೆಂದು ಹೇಳುತ್ತಿಲ್ಲ. Authority ತರುವಾಗ ಯಾವ ರೀತಿ ತರುತ್ತೀರಿ? ಏನೇನು ಅಭಿವೃದ್ಧಿ ಮಾಡುತ್ತೇವೆ ಎನ್ನುವುದು ಬೇಕಲ್ಲಾ.

ಅಧ್ಯಕ್ಷರು:– ಇದು ಬಂದಾದ ಮೇಲೆ ಎಷ್ಟು ಕೆರೆಗಳಿವೆ. ಈ ವರ್ಷ ನೂರು ಕೆರೆಗಳನ್ನು ರಿಪೇರಿ ಮಾಡುತ್ತೇವೆಂದು ಹೊರಟರೆ ಆ ನೂರು ಕೆರೆಗೆ ಎಷ್ಟು ಹಣ ಬೇಕು ಎನ್ನುವುದು ಅವರ ಬಜೆಟ್‌ನಲ್ಲಿ ಇಲ್ಲದೆ ಹೋದರೆ ನೀವು ಆಗ ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, 26,000 ಕೆರೆಗಳಿವೆ...

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಈ ಪ್ರಾಧಿಕಾರ ರಚನೆ ಮಾಡಿದ ತಕ್ಷಣ ಅಭಿವೃದ್ಧಿ ಮಾಡುತ್ತಾರೆಂದು ನಂಬಿಕೆಯೇನೂ ಉಳಿದಿಲ್ಲ. ತಾವು ಇರಲಿಲ್ಲ ಅಧ್ಯಕ್ಷರೆ, ನಮ್ಮ ಉಪಾಧ್ಯಕ್ಷರು ಇದ್ದರು. ಇದನ್ನು ಬೆಂಗಳೂರು ಹೊರತುಪಡಿಸಿ ತಂದಿದ್ದಾರೆ.

ಅಧ್ಯಕ್ಷರು:- ಹೌದು. ನಾನು ನೋಡಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಬೆಂಗಳೂರಿನ್ನದನ್ನು Lake Authorityಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. Lake Authority ಬಗ್ಗೆ ಚರ್ಚೆ ಮಾಡುವಾಗ ಇದನ್ನು ಇನ್ನೊಂದು ರೂಪದಲ್ಲಿ ತನ್ನಿ ಎಂದು ಮಾನ್ಯ ಉಪಾಧ್ಯಕ್ಷರು ಹೇಳಿದ್ದಾರೆ. ಬೆಂಗಳೂರಿಗೆ Lake Development Authority ಎಂದು ಮಾಡಿ ಇವತ್ತಿನ ದಿವಸ ಎಷ್ಟರ ಮಟ್ಟಿಗೆ ಬೆಂಗಳೂರು ಕೆರೆಗಳನ್ನು ಉಳಿಸಿದ್ದಾರೆ ಅದೇ ರೀತಿ ಬಹುಶಃ ಕರ್ನಾಟಕದ ವ್ಯಾಪ್ತಿಗೆ ಏನು ಈ ಕೆರೆ ಅಭಿವೃದ್ಧಿ ಪ್ರಾಧಿಕಾರ ತಂದಿದ್ದಾರೆ ಇದರ ಹಣೆಬರಹವನ್ನು ಅಲ್ಲಿಗೆ ತಂದು ನಿಲ್ಲಿಸುತ್ತಾರೆಂಬ ಅನುಮಾನದಲ್ಲಿ ಮಾನ್ಯ ಶಿವಲಿಂಗೇಗೌಡರು ಹೇಳುತ್ತಿದ್ದಾರೆ.

ಶ್ರೀ ಕೆ.ಎಂ. ಶಿವಲೀಂಗೇಗೌಡ:- ಮಾನ್ಯ ಅಧ್ಯಕ್ಷರೆ, ಒಂದು ಪ್ರಾಧಿಕಾರವನ್ನು ರಚನೆ ಮಾಡಬೇಕಾದರೆ ಸಂರಕ್ಷಣೆ ಬಗ್ಗೆ ಹೇಳಿದ್ದಾರೆ. ಅದಕ್ಕೆ ಕಾನೂನನ್ನು ತರಲೇಬೇಕು, ಅದನ್ನು ಬಿಡಿಸಲೇಬೇಕೆಂದು ಹೇಳಿದ್ದಾರೆ. 1964ರಲ್ಲಿ ಇದ್ದಂಥದ್ದನ್ನು ನಾವು ಈಗ ಕಾನೂನನ್ನು ಕೈಗೆ ತೆಗೆದುಕೊಂಡು ಬಿಡಿಸುತ್ತೇವೆಂದು ಹೊರಟಿದ್ದಾರೆ. ಬಹಳ ಸಂತೋಷ. ಕಂದಾಯ ಇಲಾಖೆಯಿಂದ ಸಾಧ್ಯವಾಗದೆ ಇರುವುದರಿಂದ ಕೆರೆಗಳ ಒತ್ತುವರಿ ಬಿಡಿಸುವುದನ್ನು ನಾವು ತೆಗೆದುಕೊಳ್ಳುತ್ತೇವೆಂದು ಸಣ್ಣ ನೀರಾವರಿಯವರು ಹೇಳಿದ್ದಾರೆ. ಆದರೆ, ಎಲ್ಲೋ ಒಂದು ಕಡೆ ನಾವು ಪ್ರಾಧಿಕಾರವನ್ನು ರಚನೆ ಮಾಡುವಂಥ ಸಂದರ್ಭದಲ್ಲಿ finance ಅನ್ನು ಯಾವ ಮೂಲದಿಂದ

ತೆಗೆದುಕೊಳ್ಳುತ್ತೇವೆ? ಯಾವ ಮೂಲದಿಂದ ತಂದು ಇವೆಲ್ಲಾವನ್ನೂ ಸಮಗ್ರವಾಗಿ ಅಭಿವೃದ್ಧಿ ಮಾಡುತ್ತೇವೆ ಎನ್ನುವ ಬಗ್ಗೆ ಪ್ರಸ್ತಾಪವಿಲ್ಲ. ಹಣಕಾಸಿನ ಬಗ್ಗೆ ಇದರಲ್ಲಿ ಪ್ರಸ್ತಾಪನೇ ಇಲ್ಲ. ಎಲ್ಲಾದರೂ ಇರಲಿ, ಎಷ್ಟಾದರೂ ಖರ್ಚು ಮಾಡಲಿ ಅಥವಾ ಖರ್ಚು ಮಾಡುತ್ತವೆಂದಾದರೂ ಹೇಳಲಿ. ಸಣ್ಣ ನೀರಾವ್ರಿ ಇಲಾಖೆಯನ್ನು ಹೊರತುಪಡಿಸಿ, ಅದಕ್ಕೆ ಇರುವಂಥ ಬಜೆಟ್ ಅನ್ನು ಹೊರತುಪಡಿಸಿ, ಈ ಪ್ರಾಧಿಕಾರಕ್ಕೆ ಪ್ರತ್ಯೇಕವಾದಂಥ ಹಣವನ್ನು ಒದಗಿಸಿ ಕೆರೆಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಒಂದು ವಾಕ್ಯವನ್ನು ಸೇರಿಸದ್ದರೆ ಬಹುಶಃ ನಾನು ಇಷ್ಟೊಂದು ಪ್ರಸ್ತಾಪವನ್ನು ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಕೆರೆ ಅಭಿವೃದ್ಧಿ ಬಗ್ಗೆ ಇನ್ನೂ ಹಲವಾರು ವಿಚಾರಗಳನ್ನು ಬಿಟ್ಟಿದ್ದೀರಿ. ಆ ವಿಚಾರಗಳನ್ನು ಬಿಡತಕ್ಕಂಥ ಸಂದರ್ಭದಲ್ಲಿ ನೀವು ಈ ಗ್ರಾಮೀಣ ಪ್ರದೇಶದಿಂದ ಬಂದಿರುವಂಥ ಶಾಸಕರನ್ನು ಹಾಗೂ ಕೇವಲ ಅಧಿಕಾರಿಗಳ ಮಾತುಗಳನ್ನು ಕೇಳಿಕೊಂಡು ಪ್ರಾಧಿಕಾರ ರಚನೆ ಮಾಡಿದರೆ ಆಗುವುದಿಲ್ಲ. ಒಂದು ಸಭೆ ಕರೆದು, ಒಂದು ದಿವಸ ಒಂದು ಕಾರ್ಯಗಾರ ಮಾಡಬೇಕು. ಒಂದು ಕಾರ್ಯಗಾರ ಮಾಡಿ ಹೇಳಿ ಎಂದು ಹೇಳಿದ್ದರೆ, ಅಲ್ಲಿ ಏನಿದೆ, ಕೆರೆಯನ್ನು ಏನು ಮಾಡಿದ್ದಾರೆ, ಯಾವ ರೀತಿ ಉಪಯೋಗಿಸಿಕೊಂಡಿದ್ದಾರೆ, ಅದನ್ನು ಯಾವ ರೀತಿ vacate ಮಾಡಿಸಬೇಕು, ಏನು ಮಾಡಬೇಕು, ಈ ರಾಜಕಾಲುವೆಗಳನ್ನು ಹೇಗೆ ತಡೆದಿದ್ದಾರೆ, ಯಾವುದಕ್ಕೋಸ್ಕರ ರಾಜಕಾಲುವೆಗಳನ್ನು ತಡೆದಿದ್ದಾರೆ, ಯಾವ ಉಪಯೋಗಕ್ಕೆ ತಡೆದಿದ್ದಾರೆ ಈ ಎಲ್ಲವನ್ನೂ ಹೇಳುತ್ತಿದ್ದೆವು. ಅದನ್ನೆಲ್ಲಾ ಆ amendmentನೊಳಗೆ ಸೇರಿಸಿದ್ದರೆ ಸರಿಯಾಗುತ್ತಿತ್ತು. ನೀವು ನಾಳೆ ಬೆಳಿಗ್ಗೆ ಅಲ್ಲಿ ರಾಜಕಾಲುವೆಯನ್ನು ತೆರವುಗೊಳಿಸಲು ಹೋಗಿ, ಅವರದ್ದೇ ಆದಂಥ 71 ಕಥೆಗಳನ್ನು ಹೇಳುತ್ತಾರೆ. ಏನೇನೋ ಕಥೆ ಹೇಳುತ್ತಾರೆ. ಆ ರೀತಿ ಬಹಳಷ್ಟು ಇನ್ನೂ ವಿಚಾರಗಳನ್ನು ಈ ತಿದ್ದುಪಡಿಯಲ್ಲಿ ಸೇರಿಸಬೇಕಾಗಿತ್ತು ಎನ್ನುವುದು ನಮ್ಮ ಅಭಿಲಾಷೆ. ಆದ್ದರಿಂದ, ನೋಡಿ ನೀವೇನು ಮಾಡುತ್ತೀರೆಂದು, ಸೇರಿಸುತ್ತೀರೋ ಅಥವಾ ಹೌದು, ಹೌದು ಎಂದು ಹೇಳಿ ಬಿಲ್ ಪಾಸ್ ಮಾಡಿಕೊಳ್ಳುತ್ತೀರೋ, ಇದು ನಿಮ್ಮಿಷ್ಟ.

ಶ್ರೀ ಎಸ್.ಆರ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡಿ. ನೀವು ಪೀಠಕ್ಕೆ ಬರುವುದಕ್ಕಿಂತ ಮುಂಚೆ ನನ್ನ ಸರದಿ ಇತ್ತು. ಎರಡೇ ಮಾತನ್ನು ಮಾತನಾಡುತ್ತೇನೆ. ರವಿಯಣ್ಣ, ನನ್ನದು ಎರಡೇ ಮಾತು ಮುಗಿಸಿಬಿಡುತ್ತೇನೆ. ಬೆಂಗಳೂರಿಗೆ ಸಂಬಂಧಪಟ್ಟಂತೆ ಮಾತನಾಡುತ್ತೇನೆ.

ಅಧ್ಯಕ್ಷರು:- ಈಗಾಗಲೇ 10-11 ಜನ ಮಾತನಾಡಿದ್ದಾರೆ.

ಶ್ರೀ ಎಸ್.ಆರ್. ವಿಶ್ವನಾಥ್ (ಯಲಹಂಕ):- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕುಮಾರಸ್ವಾಮಿಯವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂದು ಪ್ರಸ್ತಾವನೆ ಮಾಡಿದ್ದಾರೆ. ಅದರಲ್ಲಿ ಮತ್ತೊಂದು ತಿದ್ದುಪಡಿ ತರುವುದಕ್ಕೆ ಸರ್ಕಾರದವರು ಹೊರಟಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೊರಗಡೆ ಇರುವಂಥ notified area ಎಂದು, ಎಂದರೆ BIAAPA ಬರುತ್ತದೆ, Bangalore International Airport Area Planning Authority ಅದಕ್ಕೆ ದೇವನಹಳ್ಳಿ, ಹೊಸಕೋಟೆ, ಯಲಹಂಕದ ಕೆಲವು ಭಾಗ, ಬ್ಯಾಟರಾಯನಪುರ ಸಹ ಸೇರುತ್ತದೆ. Nelamangala Development Authorityಗೆ ನೆಲಮಂಗಲ ಕ್ಷೇತ್ರ ಹಾಗೂ ನನ್ನ ಕ್ಷೇತ್ರವೂ ಸಹ ಸೇರುತ್ತದೆ. ಆನೇಕಲ್ Development Authority, Hosakote Development Authority ಈ ವ್ಯಾಪ್ತಿಯ ಕೆರೆಗಳನ್ನು ಸಹ ಇದರಿಂದ ಹೊರತುಪಡಿಸಿ ಎಂದು ಹೇಳಿ ಮಾಡಿರುವಂಥ ಬಿಲ್ ಇದು. ಇವತ್ತು ಯಾವುದೇ ಪ್ರಾಧಿಕಾರವಿರಲಿ ಅಲ್ಲಿ ಕೆರೆಗಳನ್ನು ನೋಡುವುದಕ್ಕೆ ಇಂಜಿನಿಯರ್‌ಗಳೇ ಇಲ್ಲ. ಇವತ್ತು ಆ ಪ್ರಾಧಿಕಾರಗಳಿಗೆ ದುಡ್ಡು ಕೊಟ್ಟರೂ ಸಹ ಅದನ್ನು ನೋಡಿಕೊಳ್ಳುವವರು ಜಿಲ್ಲಾ ಪಂಚಾಯತಿ ಇಂಜಿನಿಯರ್‌ಗಳೇ ಆಗಿದ್ದಾರೆ.

ಅಧ್ಯಕ್ಷರು:- All Municipal Corporation and Bangalore Development Authority or any other notified bodies. . . ಎಂದು ಬಿಲ್‌ನಲ್ಲಿ ಇದೆ.

ಶ್ರೀ ಎಸ್.ಆರ್. ವಿಶ್ವನಾಥ್:- ನಾನು ಹೇಳುತ್ತಿರುವುದು notified areas ಬಗ್ಗೆ, Notified area ಎಂದರೆ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಯಾವ ಪ್ರದೇಶಗಳಿಗೂ ಬರುವುದಿಲ್ಲ. ಬಿಡಿಎ ಬಿಟ್ಟು ಹೊರಗಡೆ ಸಹ ಈ ವ್ಯಾಪ್ತಿ ಬರದಂತೆ ಮಾಡಿದ್ದಾರೆ. ಗ್ರಾಮಾಂತರ ಜಿಲ್ಲೆಯಲ್ಲಿಯೂ ಸಹ ಇದರ ವ್ಯಾಪ್ತಿ ಬರದಂತೆ ಇವರು ಮಾಡುತ್ತಿದ್ದಾರೆ. ನಗರ ಪಾಲಿಕೆ ಅಲ್ಲ, ಪ್ರಾಧಿಕಾರಗಳು, notified area.

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):- ನಗರಪಾಲಿಕೆ ಮತ್ತು ಬಿಡಿಎ, ನಗರಪಾಲಿಕೆಯನ್ನು ಹೊರತುಪಡಿಸಿ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ ಇವೆಲ್ಲವೂ ಇದರಲ್ಲಿ ಸೇರುತ್ತವೆ.

ಶ್ರೀ ಎಸ್.ಆರ್. ವಿಶ್ವನಾಥ್:- Notified area ಎಂದರೆ ಯಾವುದು?

ಶ್ರೀ ಶಿವರಾಜ್ ಎಸ್. ತಂಗಡಗಿ:- 5 ನಗರ ಪಾಲಿಕೆಗಳು ಬರುವುದಲ್ಲ, ಬಿಡಿಎ ಮತ್ತು ನಗರ ಪಾಲಿಕೆ ಬರುವುದಿಲ್ಲ. ಮಿಕ್ಕಿದ್ದೆಲ್ಲಾ ಬರುತ್ತವೆ.

ಶ್ರೀ ಎಸ್.ಆರ್. ವಿಶ್ವನಾಥ್:- ಬಿಡಿಎ ಎಂದರೂ ಸಹ ಬಿಬಿಎಂಪಿ ವ್ಯಾಪ್ತಿ ಹೊರಗಡೆ ಸಹ ಬಿಡಿಎ ಇದೆ. ಈಗ ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿಬಿಎಂಪಿಯವರು ಬಿಡಿಎ ಕೆರೆಗಳ develop, lake developmentನವರು ಮಾಡುತ್ತಿದ್ದಾರೆ. ಆದರೆ, ಹೊರಗಡೆ ಎಂದರೆ ನಮ್ಮ ಊರು ಎಂದು ಅಂದುಕೊಂಡರೆ, ಬಿಡಿಎ ವ್ಯಾಪ್ತಿಗೆ ಬರುವಂಥದ್ದು Minor Irrigation ಕೆರೆ ಇದೆ, ಇದನ್ನು ನೋಡುವವರು ಯಾರು? ಬಿಡಿಎನವರು ಹೊರಗಡೆಗೆ ಬರುವುದೇ ಇಲ್ಲ. ಅವರ ಬಳಿ ಸದ್ಯಕ್ಕೆ ರೋಡ್ ಮಾಡುವುದಕ್ಕೇ ದುಡ್ಡಿಲ್ಲವೆಂದ ಮೇಲೆ ಬೇರೆ ಏನು ಮಾಡುತ್ತಾರೆ, ಒಂದೇ ಒಂದು ಅಧ್ಯಕ್ಷರೆ, ಸಣ್ಣ ಉದಾಹರಣೆ ಕೊಡುತ್ತೇನೆ. ಬಿಡಿಡನವರು ನಮ್ಮ ರಾಮಗೊಂಡನಹಳ್ಳಿ ಕೆರೆ ಎಂದು ಇದೆ, ಆ ಕೆರೆಯೊಳಗೆ ಹಳ್ಳಿಯವರು ಓಡಾಡುವುದಕ್ಕೆ ರಸ್ತೆ ಮಾಡಿದ್ದೇವೆ. ಆ ಕೆರೆ ರಸ್ತೆಯನ್ನು ತೋರಿಸಿ ಬಿಡಿಎ ನವರು plan approval

ಕೊಟ್ಟಿದ್ದಾರೆ. ಇದಕ್ಕೋಸ್ಕರ ನೀವು ಬಿಡಿಎ ನವರನ್ನು ಬಿಡಬೇಕಷ್ಟೆ. ಕೆರೆ ಅಭಿವೃದ್ಧಿ ಹೊರಗಡೆ ಮಾಡುವುದಕ್ಕೆ ಸಾಧ್ಯವಿಲ್ಲ. ಇದು ಬಹಳ ವಿಶೇಷವಾಗಿ ನೀವು ಹಳ್ಳಿಗಳಲ್ಲಾದರೂ ಸಹ ಜೋಳ ಅಥವಾ ಮತ್ತೊಂದು ಬೆಳೆಯುವುದಕ್ಕೆ ಕೆರೆ ಒತ್ತುವರಿ ಮಾಡುತ್ತಾರೆ. ನೀವು ಏನಾದರೂ ಇದನ್ನು ಬಿಟ್ಟು ಬಿಡಿಎ ವ್ಯಾಪ್ತಿಯಲ್ಲಿ ನಾವು ನೋಡಿಕೊಳ್ಳುವುದಿಲ್ಲವೆಂದು ಬಿಟ್ಟರೆ immediate apartment, buildingಗಳು ಬರುತ್ತವೆ, ಕೆರೆಗಳು ಸರ್ವನಾಶವಾಗುತ್ತವೆ. ಆದ್ದರಿಂದ, ದಯವಿಟ್ಟು ಇದು ಬಹಳ serious ಆಗಿರುವಂಥ ವಿಚಾರ. ಈ ಅಧಿನಿಯಮಕ್ಕೆ, ಅದಕ್ಕೋಸ್ಕರ ಇದಕ್ಕೆ ಸಂಬಂಧಪಟ್ಟಂತೆ ನೀವು ಚರ್ಚೆ ಮಾಡುವುದಕ್ಕೆ ಆಗಲೇ ಅವಕಾಶ ಕೊಡುತ್ತೇವೆಂದು ಹೇಳಿದ್ದಾರೆ. ದಯವಿಟ್ಟು ಇದಕ್ಕೆ ವಿಶೇಷವಾದ ಚರ್ಚೆಗೆ ನಮಗೆ ಅವಕಾಶ ಕೊಡಬೇಕು.

ಅಧ್ಯಕ್ಷರು:– ಮತ್ತೆ ಅವಕಾಶವೇ?

ಶ್ರೀ ಎಸ್.ಆರ್. ವಿಶ್ವನಾಥ್:– ಚರ್ಚೆ ಮಾಡುವುದಕ್ಕೆ ತಯಾರಾದೆವು, ಇದಕ್ಕೆ ಬೇರೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇವೆಂದು ಆಗಲೇ ಹೇಳಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಬೆಂಗಳೂರಿಗೆ ಸಂಬಂಧಪಟ್ಟಂತೆ ಚರ್ಚೆಯಾಗಬೇಕೆಂದು ಹೇಳಿದೆ, ಅದಕ್ಕೆ ಬೆಂಗಳೂರನ್ನು ಹೊರತುಪಡಿಸಿ ಈ ಬಿಲ್ಲನ್ನು ತರುತ್ತಿರುವುದು. ಆದ್ದರಿಂದ ಬೇರೆ ಇನ್ನೊಂದು ರೂಪದಲ್ಲಿ ಚರ್ಚೆಗೆ ತನ್ನಿ ಎಂದು ಉಪಾಧ್ಯಕ್ಷರು ಹೇಳಿದ್ದಾರೆ. ದಯವಿಟ್ಟು ಬಹಳ ಅತ್ಯಂತ ಸೂಕ್ಷ್ಮವಾದ 2 ಲಕ್ಷ ಕೋಟಿ ರೂಪಾಯಿಗಳ ಬೆಲೆ ಬಾಳುವ ಭೂಮಿ ಇವತ್ತು ಬೆಂಗಳೂರಿನ ಸುತ್ತ ಮುತ್ತ ಲೂಟಿಯಾಗಿರುವುದು. ಅದಕ್ಕಾಗಿ ಬೇರೊಂದು ರೂಪದಲ್ಲಿ ನಾಳೆ ಅಥವಾ ನಾಡಿದ್ದರಲ್ಲಿ ಚರ್ಚೆಗೆ ನೀವು ಅವಕಾಶ ಕೊಡದೆ ಹೋದರೆ ಎಲ್ಲೋ ಒಂದು ಕಡೆ ನಾವು ಬೆಂಗಳೂರು ನಗರದಲಲಿ ಈಗ ಆಗಿರುವಂಥದ್ದನ್ನು ನೋಡುತ್ತಾ ಸುಮ್ಮನೆ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡರೆ ಮುಂದಿನ ಜನಾಂಗದಲ್ಲಿ ಕೆಟ್ಟ ಹೆಸರು ತೆಗೆದುಕೊಳ್ಳುವುದಕ್ಕೆ ಒಂದು ರೀತಿ ನಾವೇ ಆಸ್ಪದ ಕೊಟ್ಟಂತೆ ಆಗುತ್ತದೆ.

ಅಧ್ಯಕ್ಷರು:– ಕುಮಾರಸ್ವಾಮಿಯವರೆ, ನನಗೆ ಏನು ಆಶ್ಚರ್ಯವಾಗುತ್ತಿದೆಯೆಂದರೆ, ಬೆಂಗಳೂರು ನಗರವನ್ನು ಪ್ರತಿನಿಧಿಸುವಂಥ ಒಂದು ಚುನಾಯಿತ body ಇದೆ. ಅದು ತನ್ನ ವ್ಯಾಪ್ತಿಯಲ್ಲಿರುವಂಥ ಕೆರೆಗಳನ್ನು encroach ಮಾಡಿದರೆ ಅದಕ್ಕೆ ಒತ್ತುವರಿಯನ್ನು ತೆರವುಗೊಳಿಸುವುದಕ್ಕೆ ಪೂರ್ಣ ಅಧಿಕಾರವಿದೆ. ತನ್ನ ಕರ್ತವ್ಯದಿಂದ ಅದು ವಿಫಲವಾಗಿದ್ದರೆ, ಅಂಥ bodyಯನ್ನು ತೆಗೆದು ಹಾಕುವುದಕ್ಕೂ ಸರ್ಕಾರಕ್ಕೆ ಅಧಿಕಾರವಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಅದಕ್ಕಾಗಿ ಸರ್ಕಾರ ಇಲ್ಲಿಯವರೆಗೆ ಏನು ಮಾಡುತ್ತೇವೆಂದು ಸ್ಪಷ್ಟವಾದಂಥ ನಿಲುವನ್ನು ನಮಗೆ ಕೊಟ್ಟೇ ಇಲ್ಲ. ಅದು ಸುದೀರ್ಘವಾದ ಚರ್ಚೆ ಆಗಬೇಕಾಗಿದೆ. 350 ಕೋಟಿ ರೂಪಾಯಿಗಳನ್ನು ಕೆರೆಗಳ ಅಭಿವೃದ್ಧಿಗಾಗಿ ಬಿಬಿಎಂಪಿ. ಬಿಡಿಎ ಮತ್ತು Lake Development Authorityಯವರು ಖರ್ಚು ಮಾಡಿದ್ದಾರೆ. ಆ ಕೆರೆಗಳಿಗೆ ಹೋಗಿ ನೋಡಿದರೆ, ಅಲ್ಲಿ ಕೆರೆಗಳೇ ಇಲ್ಲ. ನಾನು ಬೆಳಿಗ್ಗೆ ನಿಮ್ಮ ಗಮನಕ್ಕೆ ತಂದಿದ್ದೇನೆ. ಆದ್ದರಿಂದ, ದಯವಿಟ್ಟು ಈ ಅಧಿವೇಶನದಲ್ಲೇ ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು:– ಗೊತ್ತಿದೆ, ಚರ್ಚೆ ಮಾಡುವ ಅಗತ್ಯವಿದೆ, ಇಲ್ಲವೆಂದು ನಾನು ಹೇಳುವುದಿಲ್ಲ.

ಶ್ರೀ ಎಸ್.ಆರ್. ವಿಶ್ವನಾಥ್:– ನಮ್ಮ ಹಳ್ಳಿಗಳಲ್ಲಿ ಸಣ್ಣ ಕೆರೆಗಳಲ್ಲಿ ನಮ್ಮ ಶಿವಲಿಂಗೇಗೌಡರು ಹೇಳಿದ ರೀತಿಯಲ್ಲಿ ಕೆರೆ ಖಾಲಿಯಿದೆಯೆಂದು ಜಾಲಿ ಗಿಡ, ಅಕೇಷಿಯಾ ಗಿಡ, ನೀಲಗಿರಿ ಗಿಡ ಬೆಳೆಸಿದ್ದಾರೆ.

ಅಧ್ಯಕ್ಷರು:– ವಿಶ್ವನಾಥ್‌ರವರೆ, ಒಂದು ಉದ್ದೇಶವನ್ನಿಟ್ಟುಕೊಂಡು ಮಾಡಿದ್ದಾರೆ. ಅದರಲ್ಲಿ reclamation, ತೆರವು ಮಾಡುವುದು, ವಗೈರೆ, ವಗೈರೆ ಎಲ್ಲಾ ಇದೆ. ಜಾಲಿ ಗಿಡ, ಅಕೇಷಿಯಾ, ನೀಲಗಿರಿ ಗಿಡ ಇರಬಹುದು.

ಶ್ರೀ ಎಸ್.ಆರ್. ವಿಶ್ವನಾಥ್:- ಇದನ್ನು ತಂದ ಮೇಲೆ forestನವರು ಬೆಳೆಸುವುದಕ್ಕೆ ತಂದು ಹಾಕುತ್ತಿದ್ದಾರೆ.

ಅಧ್ಯಕ್ಷರು:- ಇದನ್ನು ತಂದ ಮೇಲೆ ಅವರೆಲ್ಲಿ ಹಾಕುತ್ತಾರೆ? ಅವರಿಗೇನು ತಲೆ ಕೆಟ್ಟಿದೆಯೇ?

ಶ್ರೀ ಎಸ್.ಆರ್. ವಿಶ್ವನಾಥ್:- ಅದನ್ನು ಯಾವುದೇ ಕಾರಣದಿಂದ ಇರಬಹುದು ಅಥವಾ ಇರುವ ಗಿಡಗಳನ್ನು action ಮಾಡಿ immediate ತೆಗೆದು, ಮಾರಾಟದಿಂದ ಬರುವ ದುಡ್ಡಿನಲ್ಲಿ ಕೆರೆ ಅಭಿವೃದ್ಧಿಯನ್ನು ಮಾಡಬೇಕು.

ಅಧ್ಯಕ್ಷರು:- ವಿಶ್ವನಾಥ್‌ರವರೆ ನೋಡಿ, ಸಣ್ಣ ನೀರಾವರಿ ಇಲಾಖೆ ಮತ್ತು ಜಿಲ್ಲಾ ಪಂಚಾಯತಿ ಇವೆರಡರಲ್ಲಿಯೇ ಕೆರೆಗಳ ವ್ಯಾಪ್ತಿ ಇರುವುದು. ಯಾರಾದರೂ ಕೆರೆಗಳನ್ನು encroach ಮಾಡಿದ್ದರೆ ಅದನ್ನು eviction ಮಾಡುವುದಕ್ಕೆ ನಮ್ಮ ತಹಶೀಲ್ದಾರ್‌ಗೆ ಅಧಿಕಾರವಿದೆ. ಯಾರೂ ಅದನ್ನು ಆಡಳಿತವನ್ನೇ ಮಾಡದೆ, ಲಕ್ಷ್ಮವನ್ನೇ ಇರುವುದರಿಂದ ಗತಿಗೆಟ್ಟು ಹೋಗಿದೆ. ಅದಕ್ಕೋಸ್ಕರ, ಯಾರೋ ಪುಣ್ಯಾತ್ಮರು, ನಮ್ಮ ಕಾರಜೋಳರವರು ಆಗಲೇ ಹೇಳುತ್ತಿದ್ದರು, ನಾನು ಕೇಳುತ್ತಿದ್ದೆ. ಯಾರಾದರೂ encroach ಮಾಡಿದ್ದರೆ ಅದನ್ನು ತೆರವುಗೊಳಿಸುವುದಕ್ಕೆ ನಮ್ಮ ತಹಶೀಲ್ದಾರ್‌ರವರಿಗೆ power ಇಲ್ಲವೇ? ಅಧಿಕಾರವಿದೆ. ಅದನ್ನೆಲ್ಲಾ ಸರ್ವೆ ಮಾಡಿ, ಮ್ಯಾಪ್‌ನಲ್ಲಿದ್ದು ಕಲ್ಲುಚಕ್ ಬಂದಿ ಇರುವಂಥದ್ದು, encroach ಮಾಡಿದ್ದರೆ, ತೆರವುಗೊಳಿಸುವುದು ಒಂದು ನಿಮಿಷದ ಕೆಲಸ. ಯಾರಿಗೂ ಬೇಡ, ಆ ರೀತಿಯ ಆಡಳಿತ ಇದು.

ಶ್ರೀ ಎಸ್.ಆರ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೆ, ತಾವು ಹೇಳಿದಂತೆ ಸರಿಯಿದೆ, ಹೂಳೆತ್ತುತತ್ತೇವೆ ಕೆರೆಗಳನ್ನು ಸರ್ವೆ ಮಾಡಿಕೊಡಿ ಎಂದು ಹೇಳಿದರೆ ಸರ್ವೆಯರ್‌ಗಳು ಕೆರೆಗಳ ಸರ್ವೆ ಮಾಡಿಕೊಡುವುದಕ್ಕೆ ಬರುತ್ತಿಲ್ಲ.

ಅಧ್ಯಕ್ಷರು:- ಸರ್ವೆ ಮಾಡಿಕೊಡುತ್ತಾರೆ. ಈ ಬಿಲ್ಲಿನಲ್ಲಿ ಅದೆಲ್ಲಾ ಇದೆ ನೋಡಿ.

ಶ್ರೀ ಎಸ್.ಆರ್. ವಿಶ್ವನಾಥ್:- ಕಳೆದ ಬಾರಿ 5 ಕೋಟಿ ರೂಪಾಯಿ ದುಡ್ಡನ್ನು ಕೊಟ್ಟಿದ್ದರು. ಇವತ್ತಿನವರೆಗೂ ಸ್ವಲ್ಪ desilt ಮಾಡಿದ್ದೇವೆ, ಕೆರೆಗೆ ಏರಿ ರೆಡಿ ಮಾಡಿದ್ದೇವೆ. Boundary ಗುರುತು ಮಾಡಿಲ್ಲ.

ಅಧ್ಯಕ್ಷರು:- ಈಗೇನಾಗಿದೆ, ನಿಜ ಇದೆ. ನಮ್ಮ ರಾಜ್ಯದಲ್ಲಿರುವಂಥ ಕೆರೆಗಳನ್ನು ಉತ್ತಮ ಸ್ಥಿತಿಗೆ ತಂದರೆ ಅದಕ್ಕಿಂತ ಉತ್ತಮವಾದ ಅಭಿವೃದ್ಧಿಯನ್ನು ಮಾಡುವುದಕ್ಕೆ ಮತ್ತೊಂದು ಉದಾಹರಣೆ ಇರುವುದಿಲ್ಲ. ಅಂಥ ಉತ್ತಮವಾದ ಕೆರೆಗಳು ಇರುವಂಥ ರಾಜ್ಯ ಇದು. ಅದು ಯಾರೂ ನೋಡದೆ, ಕೇಳದೆ ದಿಕ್ಕೆಟ್ಟು ಹೋಗಿದೆ. ಈಗ ಒಂದು ಅರ್ಥಪೂರ್ಣವಾದ ಅಭಿವೃದ್ಧಿ ಮಾಡಬೇಕಾದರೆ ಇವರ ಹತ್ತಿರ ದುಡ್ಡಿಲ್ಲ. ಇಲ್ಲವೆಂದರೆ ಹುಡ್ಕೋದಿಂದ ತರಬಹುದು, ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳಬಹುದು. ಬೇರೆ ಬೇರೆ ಏಜೆನ್ಸಿಯಿಂದ ಹಣ ತಂದು ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಎಸ್.ಆರ್. ವಿಶ್ವನಾಥ್:- Returns ಕೆರೆ ತುಂಬುವುದು, ಕೆರೆ ತುಂಬಿದರೆ ಅದೇ returns.

ಅಧ್ಯಕ್ಷರು:- ಅಲ್ಲ, ನಾವೆಲ್ಲಾ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡರೆ ಕೆರೆ ತುಂಬುವುದಿಲ್ಲ, ಕೆಲವರ ಹೊಟ್ಟೆ ತುಂಬುತ್ತದೆ.

ಶ್ರೀ ಎಸ್.ಆರ್. ವಿಶ್ವನಾಥ್:- Returns ಕೆರೆ ತುಂಬುವುದು, ಕೆರೆ ತುಂಬಿದರೆ ಅದೇ returns.

ಅಧ್ಯಕ್ಷರು:- ಅಲ್ಲ, ನಾವೆಲ್ಲಾ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡರೆ ಕೆರೆ ತುಂಬುವುದಿಲ್ಲ, ಕೆಲವರ ಹೊಟ್ಟೆ ತುಂಬುತ್ತದೆ.

ಶ್ರೀ ಎಸ್.ಆರ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೆ, ನಾನು ಒಂದು ಕೆರೆಗೆ swimming pool ಮಾಡುವುದಕ್ಕೆ ಅವಕಾಶ ಕೊಡಿ ಎಂದ ಕೇಳಿದೆನು.ಇವರು ಅವಕಾಶ ಕೊಡಲಿಲ್ಲ. ಬಿಡಿಎನವರು ಹೈ-ಕೋರ್ಟಿನಲ್ಲಿ ಅನುಮತಿ ಪಡೆಯಬೇಕು ಎಂದು ಹೇಳಿದರು. ಮತ್ತೊಬ್ಬರು ಯಾರೋ five star hotelಗೆ

ಕೆರೆಯಲ್ಲಿ ಸೇತುವೆ ಕಟ್ಟುವುದಕ್ಕೆ ಅನುಮತಿ ಕೊಡ ಎಂದರೆ immediate ಸರ್ಕಾರ ಆದೇಶ ಕೊಟ್ಟಿದೆ. ಈಗ ಅವರು ಕಟ್ಟುತ್ತಿದ್ದಾರೆ. ನಮಗೆ swimming pool ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ನಾವು ಏನೂ ಮಾಡುವುದಕ್ಕೆ ಆಗಲಿಲ್ಲ.

ಅಧ್ಯಕ್ಷರು:– ನೀವು ಬರೀ ಕೈಯಲ್ಲಿ ಹೋಗಿದ್ದಿರಿ.

ಶ್ರೀ ಎಸ್.ಆರ್. ವಿಶ್ವನಾಥ್:– ಮಾನ್ಯ ಅಧ್ಯಕ್ಷರೆ, ನಮ್ಮಲ್ಲೇ ಯಲಹಂಕದಲ್ಲಿ GMR Seven Star Hotelಗೆ permission ಕೊಟ್ಟಿದ್ದಾರೆ. ನಾನು ಅದೇ ಕೆರೆಯಲ್ಲೇ ಸಾರ್ವಜನಿಕರ swimming pool ಮಾಡಿ, ಆ ನೀರನ್ನು ಅಭಿವೃದ್ಧಿ ಮಾಡಿ ಕೆರೆಗೆ ಬಿಡುತ್ತೇವೆಂದರೆ ಹೈಕೋರ್ಟ್ ಆದೇಶವಿದೆ, ಹೈಕೋರ್ಟಿನಲ್ಲಿ ನೀವು ಅಪೀಲ್ ಹಾಕಿ ಆದೇಶ ತರಬೇಕೆಂದು ನನಗೆ ಬಿಡಿಎನವರು ಉತ್ತರ ಕೊಟ್ಟಿದ್ದಾರೆ. ಅದೇ ಬಿಡಿಎನವರು ಹೋಟೆಲ್‌ನವರಿಗೆ ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಸೇತುವೆ ಕಟ್ಟಿಕೊಳ್ಳಿ ಎಂದು ಅನುಮತಿ ಕೊಟ್ಟಿದ್ದಾರೆ. ಈಗಾಗಲೇ ಸೇತುವೆಯನ್ನು ಅವರು ಕಟ್ಟುಬಿಟ್ಟಿದ್ದಾರೆ. ಇದು ಬಿಡಿಎನಲ್ಲಿ ನಡೆಯುತ್ತಿರುವುದು.

ಅಧ್ಯಕ್ಷರು:– ನಡೆಯುತ್ತಿರುತ್ತದೆ, ಹೇಳುವವರು, ಕೇಳುವವರು ಇಲ್ಲದಿದ್ದರೆ ನಡೆಯುತ್ತದೆ. ಶ್ರೀ ಸಿ.ಟಿ. ರವಿಯವರೇ ನೀವು ಮಾತನಾಡಿ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ ನಾನು ಎರಡೇ ಮಾತುಗಳನ್ನಾಡುತ್ತೇನೆ. ಒಂದು ಸರ್ವೆ ಮಾಡುವುದಕ್ಕೆ ಏನು ವ್ಯವಸ್ಥೆಯಿದೆ? ನನಗೆ ಒಂದೂವರೆ ವರ್ಷದಿಂದ ಚಿಕ್ಕಮಗಳೂರಿನಲ್ಲಿ ಯಗಚಿಹಳ್ಳದ ಸರ್ವೆ ಮಾಡಿಕೊಡಿ, ಅದರಲ್ಲಿರುವಂಥ ಖರಾಬು ಜಾಗ ಎಷ್ಟು? Boundary fix ಮಾಡಿಕೊಡಿ ಎಂದು ಕೇಳಿದೆವು. ಇವತ್ತಿಗೂ boundary fix ಮಾಡುವುದಕ್ಕೆ ಸಾಧ್ಯವಾಗಿಲ್ಲ. ಒತ್ತುವರಿಯಾಗುತ್ತಾ ಬರುತ್ತಿದೆ. ಯಗಚಿಹಳ್ಳ ಹೋಗಿ ಯಗಚಿ ಚರಂಡಿಯಾಗಿ ಬದಲಾಗುತ್ತಿದೆ.

ಅಧ್ಯಕ್ಷರು:– ಹಳ್ಳ ತಾನೆ.

ಶ್ರೀ ಸಿ.ಟಿ. ರವಿ:– ಹಳ್ಳ ಹೌದು ಅಧ್ಯಕ್ಷರೆ, ಆದರೆ, ಅದು ಈಗ ಚರಂಡಿಯಾಗಿ ಬದಲಾಗುತ್ತಿದೆ. ಈಗ ಸರ್ವೆ ಮಾಡುವ ವ್ಯವಸ್ಥೆ ಇಲ್ಲದೆ.....

ಅಧ್ಯಕ್ಷರು:– Encroach ಆಗಿದ್ದರೆ ತಹಶೀಲ್ದಾರ್‌ವರೆ ಸರ್ವೆ ಮಾಡಿಸಿ ಒತ್ತುವರಿಯನ್ನು ತೆರವುಗೊಳಿಸುತ್ತಾರಲ್ಲವೆ?

ಶ್ರೀ ಸಿ.ಟಿ. ರವಿ:– ಮಾಡಿಲ್ಲ. ಈ ವಿಚಾರ ಜಿಲ್ಲಾ ಪಂಚಾಯತಿ ಕೆ.ಡಿ.ಪಿ. ಸಭೆಯಲ್ಲಿ ಚರ್ಚೆಯಾಗಿದೆ, ಮಾಡಿಲ್ಲ. ನಗರಸಭೆಯಲ್ಲಿ ಚರ್ಚೆಯಾಗಿದೆ, ಮಾಡಿಲ್ಲ.

ಅಧ್ಯಕ್ಷರು:– ಅವರು ಚರ್ಚೆ ಮಾಡುವುದೇ ವಿನಹಃ ಬೇರೇನೂ ಮಾಡುವುದಿಲ್ಲ. ಏನೂ ಬೇಡ, ನೀವು ಶಾಸಕರಾಗಿದ್ದೀರಿ. ತಹಶೀಲ್ದಾರ್‌ರವರೆ ಸರ್ವೆ ಮಾಡಿ, ಒತ್ತುವರಿಯಾಗಿರುವುದನ್ನು ಬಿಡಿಸಿ ಎಂದು ನೀವೇ ಹೇಳಿದರೆ ಸಾಕಲ್ಲವೇ?

ಶ್ರೀ ಸಿ.ಟಿ. ರವಿ:– ಇವತ್ತಿನವರೆಗೂ ಮಾಡಿಲ್ಲ.

ಅಧ್ಯಕ್ಷರು:– ನೀವು ಒಂದು ಅರ್ಜಿಯನ್ನು ಕಂದಾಯ ಸಚಿವರಿಗೆ ಕೊಡಿ. ಕಂದಾಯ ಸಚಿವರೆ, ನೀವು ಒಂದು direction issue ಮಾಡಿ. ಏಕೆ ಆಗುವುದಿಲ್ಲ? ಹಾಗಾದರೆ ಸರ್ಕಾರ ಇಲ್ಲವೇ? ಹೌದು, ತಹಶೀಲ್ದಾರ್‌ರಿಗೆ ಅಧಿಕಾರವಿದೆ.

ಶ್ರೀ ಸಿ.ಟಿ. ರವಿ:– ಆಗಿಲ್ಲ.

ಅಧ್ಯಕ್ಷರು:– ಎಂದರೆ, ಆ ರೀತಿಯ ದರಿದ್ರ ತಹಶೀಲ್ದಾರ್ ಇರಬೇಕಷ್ಟೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ನಗರ ಪ್ರದೇಶಗಳಲ್ಲಿ ಕಾಲುವೆಗಳ service road ಅಂತೂ ಉಳಿದುಕೊಂಡಿಲ್ಲ. ನೀರಾವರಿ ಕಾಲುವೆಗಳ service road ಸಹ ಇಲ್ಲ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಮಾಡಿಸಬೇಕು. ಏಕೆ ಸಾಧ್ಯವಿಲ್ಲ? ಸಾಧ್ಯತೆಯಿದೆ. ನೀವು ಪ್ರಯತ್ನ ಮಾಡಿಲ್ಲವೆಂದು ಕಾಣಿಸುತ್ತದೆ.

ಶ್ರೀ ಎಸ್.ಟಿ. ಸೋಮಶೇಖರ್:– ಜಿಲ್ಲಾಧಿಕಾರಿಗಳು ಎಲ್ಲಿ ಮಾಡುತ್ತಾರೆ ಹೇಳಿ ಸರ್ ಹೋಗಲಿ. ಜಿಲ್ಲಾಧಿಕಾರಿಗಳೂ ಎಲ್ಲಾ ಶಾಮೀಲಾಗಿರುತ್ತಾರಲ್ಲ.

ಅಧ್ಯಕ್ಷರು:– ರವಿ, ಈಗ ಹಳ್ಳವಾಗಲಿ, ಕೆರೆಯಾಗಲಿ, ಕುಂಟೆಯಾಗಲಿ ಹಿಂದೆ re-settlement ಕಾಲದಲ್ಲಿ ಪಕ್ಕಾ measurement ಮಾಡಿ boundary fix ಮಾಡಿ, map ನಲ್ಲಿ revenue map ನಲ್ಲಿ ಸ್ಪಷ್ಟವಾಗಿ ಉಲ್ಲೇಖ ಇದೆ. ಪಹಣಿ ಆರ್.ಟಿ.ಸಿ. ಯಲ್ಲಿವೆ. ಅದನ್ನು ಮತ್ತೊಂದು ಸಾರಿ re-survey boundary fix ಮಾಡಿಕೊಂಡು eviction ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಸಿ.ಟಿ. ರವಿ:– ನಮಗೆ ಸಣ್ಣ ನೀರಾವರಿ ಇಲಾಖೆಯ Executive Engineer ಉತ್ತರ ಬರೆಯುತ್ತಾರೆ.

ಅಧ್ಯಕ್ಷರು:– ಅವರ ಬಳಿ Map ವಗ್ಯೆರೆ ಇರುವುದಿಲ್ಲ. ಇದನ್ನು ಸರ್ವೆ ಮಾಡಿ boundary fix ಮಾಡಿ ಹದ್ದುಬಸ್ತು ಮಾಡಿ eviction ಮಾಡುವ ಅಧಿಕಾರ ಇರುವುದು ತಹಶೀಲ್ದಾರ್‌ರವರಿಗೆ. ಅವರು ಮಾಡಿದರೂ ಕೂಡಾ ತಹಶೀಲ್ದಾರ್‌ರಿಗೆ eviction ಗೆ ಕಳುಹಿಸಬೇಕು.

ಶ್ರೀ ಸಿ.ಟಿ. ರವಿ:– ಇವತ್ತಿಗೂ ಅದು ನಡೆಯುತ್ತಿಲ್ಲ.

ಅಧ್ಯಕ್ಷರು:– ನೀವು ಕೊಡಿ. ಏಕೆ ಮಾಡಲಾಗುವುದಿಲ್ಲ.

ಶ್ರೀ ಸಿ.ಟಿ. ರವಿ:– ಅದಕ್ಕೆ ಈ ಬಿಲ್ ನಲ್ಲಿ ಸರ್ವೆ ಮಾಡಲು ಬೇಕಾದ mechanism ವ್ಯವಸ್ಥೆ ಆ ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಒಂದು ಸ್ವತಂತ್ರ ವ್ಯವಸ್ಥೆ ಮಾಡುತ್ತೀರಾ? ಆ ರೀತಿ ಸ್ವತಂತ್ರ ವ್ಯವಸ್ಥೆ ಮಾಡದಿದ್ದರೆ. .

ಅಧ್ಯಕ್ಷರು:- ಸ್ವತಂತ್ರ ವ್ಯವಸ್ಥೆನೇ ಬೇಡ. ಇರುವ ವ್ಯವಸ್ಥೆಯಲ್ಲಿಯೇ ಮಾಡಲಾಗುತ್ತದೆ. ಈಗ ವಾಸ್ತವಿಕವಾಗಿ. . .

(ಗೊಂದಲ)

ಶ್ರೀ ಎಸ್. ಮುನಿರಾಜು:- ಮಾನ್ಯ ಅಧ್ಯಕ್ಷರೆ ತಾವು ಹೇಳುವುದು ಸರಿಯಾಗಿದೆ. ತಹಶೀಲ್ದಾರಿಗೆ, ಜಿಲ್ಲಾಧಿಕಾರಿಗಳಿಗೆ ಅಧಿಕಾರವಿದೆ. ನಾನು ಒಂದು ಕೆರೆ ಅಳತೆ ಮಾಡಿಕೊಡಿ, ಒತ್ತುವರಿ ಇದೆ ಎಂದು 10 ಪತ್ರಗಳನ್ನು ಕಂದಾಯ ಸಚಿವರಿಗೆ ಬರೆದಿದ್ದೇನೆ. ಜಿಲ್ಲಾಧಿಕಾರಿಗಳಿಗೆ, ರೆವಿನ್ಯೂ ಸೆಕ್ರೆಟರಿಯವರಿಗೆ ಬರೆದಿದ್ದೇನೆ. ತಹಶೀಲ್ದಾರ್‌ಗೆ ಖುದ್ದಾಗಿ 10-20 ಸಾವಿರ ಫೋನ್ ಮಾಡಿ ಹೇಳಿದ್ದೇನೆ. ಚಿಕ್ಕಬಾಣಾವರ ಕೆರೆ ಎಂದು 80 ಎಕರೆ ಪ್ರದೇಶದ ಕೆರೆ. ಒಂದಕ್ಕೂ ಉತ್ತರವಿಲ್ಲ.

ಅಧ್ಯಕ್ಷರು:- ಕಂದಾಯ ಸಚಿವರೆ ಹೇಳಿ.

ಶ್ರೀ ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ಈಗ ಚರ್ಚೆಗೆ ಬಂದ ಸಮಯದಲ್ಲಿ ಹೇಳುತ್ತಿದ್ದಾರೆ. ನಾನು ಖಂಡಿತಾ ತಾವು ಹೇಳಿದಂತೆ ತಹಶೀಲ್ದಾರಿಗೆ, ಜಿಲ್ಲಾಧಿಕಾರಿಗಳಿಗೆ ಹೇಳಿ ಇದು ಆಗಿಲ್ಲವೆಂದು ನನ್ನ ಗಮನಕ್ಕೆ ಬಂದರೆ ನಾವು ಖಂಡಿತಾ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ. ಅವರು ಹೇಳಿರುವುದನ್ನು ಗಮನದಲ್ಲಿಟ್ಟುಕೊಂಡು ನಾನು ನೋಡುತ್ತೇನೆ, ಇಂತಹದ್ದು ಬಂದರೆ ಖಂಡಿತಾ ಮಾಡುತ್ತೇವೆ.

ಡಾ॥ ಸಿ.ಎನ್. ಅಶ್ವತ್ಥ ನಾರಾಯಣ:- ಮಾನ್ಯ ಅಧ್ಯಕ್ಷರೆ, ನಮ್ಮ ಕೇಂದ್ರ ಭಾಗದಲ್ಲಿ ಸ್ಯಾಂಕಿ ಕೆರೆ ಇದೆ. 55 ಎಕರೆ ಇರುವ ಸ್ಯಾಂಕಿ ಕೆರೆ ಈಗ 49 ಎಕರೆ ಇದೆ.

ಅಧ್ಯಕ್ಷರು:- ನಿಂಗಯ್ಯನವರೆ ಹೇಳಿ. ಚರ್ಚೆ ಎಲ್ಲಿಯೋ ಹೋಗುತ್ತಿದೆ. ಮಾಡಲು ಬರುತ್ತದೆ ಬಿಡಿ. ಇದರಲ್ಲಿ ಏಕೆ ಬರುತ್ತದೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾಡುವುದಿಲ್ಲ.

ಡಾ॥ ಸಿ.ಎನ್. ಅಶ್ವತ್ಥ ನಾರಾಯಣ:– ಒತ್ತುವರಿ ಬಗ್ಗೆ ನಾವು ಸಾಕಷ್ಟು ಬಾರಿ ಈ ಸದನದಲ್ಲಿ ಗಮನ ಸೆಳೆದದ್ದು ಎರಡು ಬಾರಿ ಹಾಕಿದ್ದೇನೆ. ಎರಡು ಬಾರಿನೂ . .

ಅಧ್ಯಕ್ಷರು:– ಇದರ ಮೇಲೆ ಬೇಡ. ಈಗ ಬಿಲ್ ಮೇಲೆ ಚರ್ಚೆ ಮಾಡಿ.

ಡಾ॥ ಸಿ.ಎನ್. ಅಶ್ವತ್ಥ ನಾರಾಯಣ:– ಅಲ್ಲ ನೀವು ಒತ್ತುವರಿ ಬಗ್ಗೆ ಹೇಳಿದಿರಲ್ಲ. . .

ಅಧ್ಯಕ್ಷರು:– ಏಕೆಂದರೆ ರೆವಿನ್ಯೂ ಇಲಾಖೆಯ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಇವನ್ನು ಪ್ರಸ್ತಾಪ ಮಾಡಬೇಕಿತ್ತು. ಈ ರೀತಿಯ ಆಡಳಿತ ಇದೆ. ಇದನ್ನು strengthen ಮಾಡಿ. ಈ ರೀತಿ ಯಾರೂ congnizance ತೆಗೆದುಕೊಳ್ಳುತ್ತಿಲ್ಲ ಎಂದು ಹೇಳಬೇಕಿತ್ತು.

ಡಾ॥ ಸಿ.ಎನ್. ಅಶ್ವತ್ಥ ನಾರಾಯಣ:– 55 ಎಕರೆಯಿಂದ ಇಂದು 40 ಎಕರೆ ಪ್ರದೇಶವಾಗಿದೆ.

ಅಧ್ಯಕ್ಷರು:– ಆಯಿತು ಅದನ್ನು ಈಗಲೂ ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಈಗ ರವಿಯವರು ಹೇಳಿದರು. ರವಿಯವರೇ ಮಂತ್ರಿಗಳಾಗಿದ್ದರು. ತಹಶೀಲ್ದಾರ್‌ಗೆ ಹೇಳಿ ಮಾಡಿಸುವುದಕ್ಕೆ ನಿಮ್ಮ ಕೈಯ್ಯಲ್ಲಿ ಆಗಿಲ್ಲವೇನು?

ಶ್ರೀ ಸಿ.ಟಿ. ರವಿ:– ಖಂಡಿತಾ. ನಾನು written letter ಬರೆದಿದ್ದೇನೆ. ಅದರ copy ಯನ್ನು ನಿಮಗೆ ಕೊಡುತ್ತೇನೆ. ಇವತ್ತಿಗೂ ಮಾಡಿಲ್ಲ.

ಅಧ್ಯಕ್ಷರು:– ಈಗ ಕೇವಲ ಒಂದು letter ಕೊಡಿ ಸಾಕು.

ಶ್ರೀ ಸಿ.ಟಿ. ರವಿ:– ನನ್ನ ಸಲಹೆ ಏನೆಂದರೆ, ಈ ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ. .

ಅಧ್ಯಕ್ಷರು:– ಈಗ ಒಂದು ಆಡಳಿತ ಯಂತ್ರ ಎಂದು ಯಾರೇ ಆಡಳಿತ ಮಾಡಲಿ, ತಹಶೀಲ್ದಾರ್, ಮತ್ತೊಬ್ಬರು ಎಂದು ಇದೆ. ಆ ಆಡಳಿತ ಯಂತ್ರಕ್ಕೆ ತಿಳಿಸಿದರೂ ಕೂಡಾ ಅದರ ಬಗ್ಗೆ ಅವರು ಲಕ್ಷ್ಯ ಕೊಡಲಿಲ್ಲವೆಂದರೆ ಅವರ ವಿರುದ್ಧ ನಾವು ನಿರ್ದಾಕ್ಷಿಣ್ಯವಾಗಿ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಸಿ.ಟಿ. ರವಿ:– ಕಣ್ಣೆದುರಿಗೆ ಯಗಚಿ ಹಳ್ಳ ಚರಂಡಿಯಾಗಿ ಬದಲಾಗುತ್ತಿದೆ. ಎರಡನೆಯದಾಗಿ, ಸಕ್ಷಮ ಪ್ರಾಧಿಕಾರಗಳು, ನಗರಸಭೆ, ನಗರಸಭೆಯ ಒಳಚರಂಡಿ ನೀರು ಯಗಚಿ ಕುಡಿಯುವ ನದಿಗೆ ಹೋಗಿ ಸೇರುತ್ತಿದೆ.

ಅಧ್ಯಕ್ಷರು:– ಈಗ ಇಲಾಖೆಯ ಅಧಿಕಾರಿಗಳು ಸದನದಲ್ಲಿ ಕುಳಿತಿದ್ದಾರೆ. ಇಲ್ಲಿ ಏನು ಚರ್ಚೆಯಾಗುತ್ತವೆ, ಅದನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಸಂಬಂಧಪಟ್ಟ ವಿಷಯಗಳಿದ್ದರೆ ಅದನ್ನು ಮಾಡಿ, ಸಂಬಂಧಪಟ್ಟವರಿಗೆ ಎಚ್ಚರಿಕೆ ಕೊಡುವ ಕೆಲಸ ಸರ್ಕಾರದಿಂದ ಹೋಗಬೇಕಾಗುತ್ತದೆ. ಏಕೆಂದರೆ ಅದಕ್ಕೆ ಸುಭದ್ರವಾದ ವಿಧಾನಸೌಧವನ್ನು ಕಟ್ಟಿಸಿ ನಮ್ಮನ್ನು ಇದರೊಳಗೆ ಕೂರಿಸಿರುವುದು.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಇಲಾಖೆಯ ಕುರಿತು ಚರ್ಚೆಯಾದ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಪ್ರತಿಯೊಬ್ಬ ಸದಸ್ಯರು ಮಾತನಾಡುವುದನ್ನು ಗಮನಿಸಿದ್ದೇನೆ.

ಅಧ್ಯಕ್ಷರು:– O.K ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ತಾವು ಹೇಳಿದಂತೆ ಪ್ರಸ್ತಾಪ ಮಾಡಿದ್ದರೆ ಅದನ್ನು ಮಾಡೋಣ. ಈಗಲೂ ಕೂಡ ಜಿಲ್ಲಾಧಿಕಾರಿಗಳೂ ಕೂಡ ಇದ್ದಾರೆ. ನನ್ನ ಗಮನಕ್ಕೆ ಬಂದಿದೆ, ನಾನು note ಮಾಡಿಕೊಂಡಿದ್ದೇನೆ. ಇದನ್ನು ಯಾವ ರೀತಿ ಬಗೆಹರಿಸಬಹುದು ಎಂಬುದನ್ನು ನೋಡುತ್ತೇನೆ.

ಅಧ್ಯಕ್ಷರು:– ಅಷ್ಟೆ ಅಲ್ಲ. ಮಂತ್ರಿಗಳೆ, ನಾನು ಏಕೆ ಹೇಳುತ್ತೇನೆಂದರೆ, ಇದು ವಿಜ್ಞಾನ ಯುಗ. ಈ ಯುಗದಲ್ಲಿ ನಮ್ಮ ಆಡಳಿತ ಯಂತ್ರವನ್ನು ಆ

ಯುಗಕ್ಕೆ ತಕ್ಕನಾದ ರೀತಿಯಲ್ಲಿ ಇರದಿದ್ದರೆ, ಮತ್ತೆ ಈ ಯುಗದಲ್ಲಿ ಏಕೆ ಹೆಣವಾಗಿ ಹುಟ್ಟಿದ್ದೇವೆ? ನೋಡಿ ಇದನ್ನು ಗಂಭೀರವಾಗಿ ತೆಗೆದುಕೊಳ್ಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಈಗ ಕಂದಾಯ ಇಲಾಖೆಯ ಬಗ್ಗೆ ಚರ್ಚೆಯಾದಾಗ. . .

ಶ್ರೀ ಶ್ರೀನಿವಾಸ ಪ್ರಸಾದ್:– ಈ competitive world ನಲ್ಲಿ ಆಗುತ್ತಿದೆ. ಮಧ್ಯೆ ಮಧ್ಯೆ ಆಗದೆ ಇರುವಂತಹದ್ದು ಕೆಲವು ಇದೆ ಈಗ ಇರುವುದು. ಏನೂ ಆಗಿಲ್ಲವೆಂದು ಹೇಳುವುದಕ್ಕೂ ಆಗುವುದಿಲ್ಲ. ಸಾಕಷ್ಟು ಕೆಲಸ ಕಾರ್ಯಗಳು ಆಗುತ್ತಿದೆ. ಮಧ್ಯೆ ಆಗದಿರುವುದು ಇದೆ. ಅದನ್ನು ಈಗ ಪ್ರಸ್ತಾಪ ಮಾಡಿದ್ದಾರೆ. ಅದು ಬಂದಾಗ ನಾವು ಗಮನದಲ್ಲಿಟ್ಟುಕೊಂಡು ಅದನ್ನು ಬಗೆಹರಿಸುವ ರೀತಿಯಲ್ಲಿ ನಾವು ಮಾಡಬೇಕಾಗುತ್ತದೆ, ಮಾಡಿಕೊಡುತ್ತೇವೆ. ಆಗಿಲ್ಲವೆಂದು ಹೇಳಲಾಗುವುದಿಲ್ಲ.

ಅಧ್ಯಕ್ಷರು:– ಒಂದಷ್ಟು ಚಿಂತನೆ ಮಾಡಬೇಕು. ಹಾಗೆಲ್ಲಾ . .

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಯ ಮೇಲೆ ನಾವು ಚರ್ಚೆ ಮಾಡಿದಾಗ ಮಂತ್ರಿಗಳು ಉತ್ತರ ಕೊಟ್ಟರು. ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಇವೆಲ್ಲಾ ಸಮಸ್ಯೆಗಳು ಕಂದಾಯ ಇಲಾಖೆಯಲ್ಲಿ ಏನಿವೆ, ತನಿಖೆ ಯಾವ ರೀತಿ ನಡೆಸಬೇಕೆನ್ನುವ ಬಗ್ಗೆಯೂ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದರು.

ಅಧ್ಯಕ್ಷರು:– ಬೇಡ, ಯಾರೂ ಬೇಡ. ಅವರೇ Land Revenue Act ಪ್ರಕಾರ ಮಾಡಿದರೆ. . .

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನೀವು ಉತ್ತರ ಕೊಡುವಾಗ ಹೇಳಿದಿರಿ. ಇಲ್ಲಿ ನಡೆಯುತ್ತಿರುವ ಹಲವಾರು ಲೋಪದೋಷಗಳಿಗೆ ತನಿಖೆ ನಡೆಸಿ ಸಮಗ್ರವಾದ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಅದರ ಬಗ್ಗೆ ಏನಾದರೂ ಮಾಡುತ್ತೀರೋ ಅಥವಾ ಅಷ್ಟಕ್ಕೆ ನಿಲ್ಲಿಸುತ್ತೀರೋ?

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಅಷ್ಟಕ್ಕೆ ನಿಲ್ಲಿಸಬೇಕೆಂದು ಏನೂ ಇಲ್ಲ. ನಾನು ಉತ್ತರ ಕೊಡುವಾಗ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಸುಮಾರು 42 ಜನ ಸದಸ್ಯರು ಭಾಗವಹಿಸಿ ಸುಮಾರು 3 ದಿನಗಳ ಕಾಲ ಸತತವಾಗಿ ಚರ್ಚೆಯಾಗಿದ್ದು, ನಮ್ಮ ಇಲಾಖೆಯ ಬಗ್ಗೆ ನಿಮ್ಮ ಸಲಹೆಗಳನ್ನೆಲ್ಲಾ ಕೊಟ್ಟಿದ್ದೀರಿ. ನಾನು ಅಧಿವೇಶನ ಮುಗಿದ ನಂತರ ನೀವೇನು ಸಲಹೆಗಳನ್ನು ಕೊಟ್ಟಿದ್ದೀರಿ, ಅದನ್ನು ಅನುಸರಿಸಿ ಇಲಾಖೆಯಲ್ಲಿ ಏನು ಮಾಡಬೇಕೆಂಬುದನ್ನು ಪ್ರತಿಯೊಂದನ್ನು ಈಗಾಗಲೇ ಚರ್ಚೆ ಮಾಡುತ್ತಿದ್ದೇನೆ ಕುಮಾರಸ್ವಾಮಿಯವರೆ, ತಾವು ಹೇಳಿರುವುದು ಗಮನದಲ್ಲಿಟ್ಟುಕೊಂಡು ನಾನು ಹೇಳಿದೆ. Regional level ಮಟ್ಟದಲ್ಲಿ ಕೂಡ ಸಭೆಗಳನ್ನು ನಡೆಸಿ, ಎಲ್ಲಾ ಕಂದಾಯ ಅಧಿಕಾರಿಗಳನ್ನು ಕರೆಸಿದ್ದೇನೆ. ನಂತರ ತಾವು ಹೇಳಿದಂತೆ ಜಿಲ್ಲಾ ಮಟ್ಟದಲ್ಲಿಯೂ ಕೂಡ ಗಮನದಲ್ಲಿಟ್ಟುಕೊಂಡು ತಾವು ಹೇಳಿದಂತಹ ಸಾಕಷ್ಟು ವಿಚಾರಗಳನ್ನು ಗ್ರಹಿಸಿದ್ದೇನೆ. ಅಧಿವೇಶನ ಮುಗಿದ ನಂತರ ತಾವು ಹೇಳಿದಂತೆ ಕೇವಲ ಮಾತಿನಲ್ಲಿರಬಾರದು, ಕೃತಿಯಲ್ಲಿ ತರುವ ರೀತಿಯಲ್ಲಿ ನಾವು ಖಂಡಿತಾ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಏಕೆ ಈ ಮಾತನ್ನು ಹೇಳಬೇಕಾಗಿ ಬಂತೆಂದರೆ, ನಾವು ಚಿಕ್ಕಮಗಳೂರು ನಗರದಲ್ಲಿ ಒಂದು ಕೆರೆ ಅಭಿವೃದ್ಧಿ ಮಾಡಿದೆವು.

ಅಧ್ಯಕ್ಷರು:– ಬಿಲ್‌ಗೆ ಬನ್ನಿ.

ಶ್ರೀ ಸಿ.ಟಿ. ರವಿ:– ಬಿಲ್‌ಗೆ ಹೇಳುತ್ತೇನೆ. ಇಲ್ಲಿ ಯಾರಾದರೂ ಕಸ–ಕಡ್ಡಿ ಹಾಕಿದರೆ 5 ಸಾವಿರ ರೂ ದಂಡ ಹಾಕಲಾಗುವುದು ಎಂದು board ಹಾಕಿದೆವು. ಆ board ಕೆಳಗೆ ಒಂದು 100 ಲೋಡ್ ಕಸ ಇದೆ. ನಾಳೆ ಈ ಕೆರೆ ಅಭಿವೃದ್ಧಿ ಪ್ರಾಧಿಕಾರದ ಸ್ಥಿತಿ ಆ ರೀತಿಯಾಗಬಾರದು. 5 ಸಾವಿರ ರೂ. ದಂಡ ಎಂದು ಬೋರ್ಡ್ ಇದೆ. ಹಾಕುವವರು ಯಾರು? ಅವರ ಹಾಕಲು ಎಲ್ಲಿದೆ mechanism?

ಅಧ್ಯಕ್ಷರು:- ನಮ್ಮ ಸಮಾಜದ ಸ್ಥಿತಿ ಅದಕ್ಕೆ ಅವಕಾಶ ಮಾಡಿಕೊಟ್ಟಿದೆ. ನಾವು ಸಮಾಜವನ್ನು ಪರಿವರ್ತನೆ ಮಾಡಬೇಕೆನ್ನುವುದೇ ಒಟ್ಟಾರೆ ಅಭಿಪ್ರಾಯ.

ಶ್ರೀ ಸಿ.ಟಿ. ರವಿ:- ಅದಕ್ಕೆ ಈ ಪ್ರಾಧಿಕಾರ ಹಲ್ಲು ಇಲ್ಲದ ಹಾವು ಆಗಬಾರದು. ಎರಡನೆಯದಾಗಿ, ಅದಕ್ಕೆ ಬೇಕಾದ mechanism create ಮಾಡಿಕೊಳ್ಳಲು ಇವರ ಯೋಜನೆ ಏನು? ಇಲ್ಲದಿದ್ದರೆ ಒಂದು ಬಿಲ್ ತಂದು, ಆ ಬಿಲ್ ಕೇವಲ ಪುಸ್ತಕದಲ್ಲಿ ಮಾತ್ರ ಉಳಿಯುವುದಾದರೆ execute ಮಾಡಲು ಬೇಕಾದ system develop ಮಾಡದಿದ್ದರೆ fail ಆಗುತ್ತದೆ. ಹಾಗೆ ಆಗಬಾರದು. ಇಲ್ಲದಿದ್ದರೆ ಏನು ಹೇಳುತ್ತಾರೆ? ಈಗ ಕೆಳಗಿನವರನ್ನು ಕೇಳದಿರೆ ಅವರು ನಮಗೆ ಸೇರುವುದಿಲ್ಲ, ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಬರುತ್ತದೆ ಎಂದು ತೋರಿಸುತ್ತಾರೆ. ಕೆರೆ ಅಭಿವೃದ್ಧಿ ಪ್ರಾಧಿಕಾರದವರು ಇದು ಕೇವಲ board level ನಲ್ಲಿ ಮಾತ್ರ ಕುಳಿತಿರುತ್ತದೆ. ಮೂರು ತಿಂಗಳಿಗೊಮ್ಮೆ ಸಭೆಗಳನ್ನು ಮಾಡುವುದಕ್ಕೆ, ಟಿ.ಎ/ಡಿ.ಎ ಖರ್ಚು ಮಾಡುವುದಕ್ಕೆ ಅಷ್ಟಕ್ಕೆ ಮಾತ್ರ ಸೀಮಿತವಾಗಬಾರದು. ಅದಕ್ಕಾಗಿ ಅದನ್ನು strengthen ಮಾಡುವುದಕ್ಕೆ ಏನು mechanism ವ್ಯವಸ್ಥೆ ಮಾಡಿದ್ದೀರಿ? ಒಂದು ಸರ್ವೆ ಮಾಡುವುದಕ್ಕೂ ಸಾಧ್ಯವಾಗದ ಸ್ಥಿತಿ ಇದೆ. ನಿಮ್ಮ ಅಧಿಕಾರಿಗಳು ನಗರಪ್ರದೇಶದಲ್ಲಿರುವ ಕಾಲುವೆ ಕೆರೆಗಳ ಬಗ್ಗೆ ಏನು ಹೇಳುತ್ತಾರೆಂದರೆ, ನಮಗೆ ಅಚ್ಚುಕಟ್ಟು ಇಲ್ಲ, ನಮ್ಮ ಬಳಿ development ಮಾಡುವುದಕ್ಕೆ ಏನೂ ವ್ಯವಸ್ಥೆ ಇಲ್ಲ ಸರ್ ಎಂದು ಹೇಳುತ್ತಾರೆ. ಕೆರೆ, ಸಣ್ಣ ನೀರಾವರಿ ಇಲಾಖೆಯದ್ದು. ಆದರೆ ಅಚ್ಚುಕಟ್ಟು ಇಲ್ಲದಿರುವುದರಿಂದ, ಬಡಾವಣೆಗಳಾಗಿರುವುದರಿಂದ ನಮ್ಮ guideline ಒಳಗೆ ಬರುವುದಿಲ್ಲ. ನಾವು development ಮಾಡುವುದಕ್ಕೆ ಆಗುವುದಿಲ್ಲ ಸರ್ ಎನ್ನುತ್ತಾರೆ.

ಅಧ್ಯಕ್ಷರು:- ಇವರು ಹೇಳಿದ್ದಾರೆ ನೋಡಿ. ಯಾವ್ಯಾವುದು ಬರುತ್ತದೆ ಎಂಬುದನ್ನು ಹೇಳಿದ್ದಾರೆ. ನಿಮ್ಮ ಪ್ರಕಾರ ಇನ್ನೂ ಯಾವುದಾದರೂ ಸೇರಿಸಿ ಎಂದರೆ ಸಲಹೆ ಕೊಡಿ. ಈಗ ಕೊಟ್ಟಿರುವ ಅಧಿಕಾರ ಬಂದ ಮೇಲೆ ಮುಂದಿನ ಕೆಲಸ ಮಾಡಿಯೇ ಮಾಡುತ್ತಾರೆ. ಒಂದು ಏನೆಂದರೆ, ಈಗ ನಾವು ಕಾನೂನು

ಮಾಡುವುದರಲ್ಲಿಯೇ ದೊಡ್ಡಸ್ಥಿಕೆ ತೋರಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಅದನ್ನು ಅನುಷ್ಠಾನಕ್ಕೆ ತರುವಂತಹ ಇಚ್ಛಾಶಕ್ತಿ ಪ್ರದರ್ಶನ ಮಾಡಿದರೆ ಮಾತ್ರ ಈ ಕಾನೂನಿಗೆ ಒಂದು ಅರ್ಥ ಬರುತ್ತದೆ. ಅದಕ್ಕೆ . . .

ಶ್ರೀ ಸಿ.ಟಿ. ರವಿ:– ಇಲ್ಲಿ ಒಬ್ಬರು ಹೇಳಿದರು. ಇದು ಹೊಟ್ಟೆ ತುಂಬಿಸುವ ಪ್ರಾಧಿಕಾರ ಆಗಬಾರದೆಂದು. ಹಾಗೆ ಹೊಟ್ಟೆ ತುಂಬಿಸುವ ಪ್ರಾಧಿಕಾರವಾಗಬಾರದು. ನಗರಪ್ರದೇಶದ ಒತ್ತುವರಿಗೆ ಸಂಬಂಧಪಟ್ಟಂತೆ ಬೇರೆ ರೀತಿ ಕೆರೆಯ ದುರ್ಬಳಕೆಗೆ ಸಂಬಂಧಪಟ್ಟಂತೆ ದಂಡದ ಪ್ರಮಾಣವನ್ನು ಹೆಚ್ಚು ಮಾಡಿ. ಗ್ರಾಮೀಣ ಪ್ರದೇಶದಲ್ಲಿ ಕೇವಲ ಕೃಷಿ ಮಾತ್ರ ಮಾಡಿಕೊಂಡಿರುತ್ತಾರೆ, building ಕಟ್ಟುವುದಿಲ್ಲ. ಆದರೆ ನಗರಪ್ರದೇಶದಲ್ಲಿ ಕೋಟ್ಯಾಂತರ ರೂ. ಅತಿಕ್ರಮಣ ಮಾಡಿರುತ್ತಾರೆ. 10 ಸಾವಿರ ರೂ. ದಂಡ ಎಂದರೆ ಸಲೀಸಾಗಿ ಕಟ್ಟುತ್ತಾರೆ. ಅಷ್ಟಕ್ಕೆ ತೆರವು ಮಾಡಿಸುವ mechanism ವ್ಯವಸ್ಥೆ ಇವರ ಬಳಿ ಇಲ್ಲ. ಅದಕ್ಕಾಗಿ ನಗರಪ್ರದೇಶದಲ್ಲಿ ದಂಡದ ಪ್ರಮಾಣವನ್ನು ಹೆಚ್ಚು ಮಾಡಿ. ಕಾಲುವೆಗಳ ಸರ್ವಿಸ್ ರೋಡ್‌ಗಳ ಅತಿಕ್ರಮಣವಾಗಿದೆ. ಅದರಿಂದಾಗಿ ಕಾಲುವೆ clean ಮಾಡುವುದಕ್ಕೂ ಆಗುತ್ತಿಲ್ಲ. ಅದಕ್ಕೂ ಸೇರಿಸಿಕೊಳ್ಳಿ. ಚಾನಲ್‌ಗಳಿಗೆ service road ಎಂದು ಇರುತ್ತದೆ. ಇಂದು service roads ಎಲ್ಲ ಅತಿಕ್ರಮಣವಾಗಿದೆ. ಅದನ್ನು ಸೇರಿಸಿಕೊಳ್ಳಿ. Buffer zone, service road ಗಳನ್ನು ಸೇರಿಸಿಕೊಂಡು ಅವುಗಳ ಅತಿಕ್ರಮಣವನ್ನು ತೆರವುಗೊಳಿಸುವುದರ ಕಡೆಯೂ ಕೂಡ ಈ ಈ ಪ್ರಾಧಿಕಾರದಲ್ಲಿ provision ಮಾಡಿಕೊಳ್ಳಿ. ಆಗ ನಗರಪ್ರದೇಶದಲ್ಲಿ ಸ್ವಲ್ಪ strengthen ಆಗುತ್ತದೆ.

ಅಧ್ಯಕ್ಷರು:– ಆಯಿತಲ್ಲ. ಇದೊಂದು ಪ್ರಾರಂಭ. ಏನಾದರೂ ವ್ಯತ್ಯಾಸವಿದ್ದರೆ ಎಂದಾದರೂ ತಿದ್ದುಪಡಿ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಈಗ ನಿಂಗಯ್ಯ ನವರು ಹೇಳಿ.

ಅಧ್ಯಕ್ಷರು:– ಮಾನ್ಯ ಸಚಿವರು ಇಲ್ಲೇ ಇದ್ದಾರೆ, ಮೊದಲನೇ ಸಾರಿ ಈ ವಿಧೇಯಕವನ್ನು ತರುತ್ತಿದ್ದೀರಿ. ನಮ್ಮ ರಾಜ್ಯದಲ್ಲಿರುವಷ್ಟು ಕೆರೆಗಳು ಬೇರೆ ಎಲ್ಲೂ ಇಲ್ಲ, ಅಷ್ಟೊಂದು ಇದೆ, ಏನಾದರೂ ಒಂದು Joint Select

Committee ಮಾಡಿ, ಇನ್ನೇನಾದರೂ ಮಾಡುವುದಕ್ಕೆ ಸಾಧ್ಯವಿದೆಯೆ ಎನ್ನುವುದನ್ನು ವಿಚಾರ ಮಾಡಿ.

ಶ್ರೀ ಎನ್. ಚೆಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಒಂದೇ ಸೆಕೆಂಡಿನಲ್ಲಿ ಒಂದು ವಿಚಾರವನ್ನು ಹೇಳುತ್ತೇನೆ. 1964ರಲ್ಲಿ 92 [a]ನಲ್ಲಿ ರೆವಿನ್ಯೂ ಇಲಾಖೆಯ ಕಾಯಿದೆಯಲ್ಲಿ 1–3 ವರ್ಷದವರೆಗೆ ಜೈಲಿಗೆ ಹಾಕುವುದೆಂದಿದೆ, ಇವರು 10 ಸಾವಿರದಿಂದ 20 ಸಾವಿರ ಹೇಳಿದ್ದಾರೆ, 1 ವರ್ಷ ಜೈಲು ಹೇಳಿದ್ದಾರೆ. ರೆವಿನ್ಯೂ ಇಲಾಖೆಯ ಡಿಸಿ, ಎಸಿ ಮತ್ತು ತಹಶಿಲ್ದಾರ್ ಗಳ ಕೈಯಲ್ಲಿ ಆಗದಿರುವುದನ್ನು M.I. ನವರು ಮಾಡಿತ್ತಾರೆಂದರೆ, ಬಹುಶಃ ನಾವೆಲ್ಲಾ ರಾಜಕಾರಣವನ್ನು ಬಿಡುವುದು ಒಳ್ಳೆಯದು. ನಿಮಗೆ ಅನುಭವವಿದೆ, ಮಂತ್ರಿಗಳು M.I. ಅಧಿಕಾರಿಗಳ ಕೈಯಲ್ಲಿ ಯಾವ ಕಾರಣಕ್ಕೂ, ತಿಪ್ಪರಲಾಗ ಹಾಕಿದರೂ ಒಂದು ಗುಂಟೆ ಜಾಗವನ್ನೂ ತೆರವುಗೊಳಿಸುವುದಕ್ಕಾಗುವುದಿಲ್ಲ, ಇದನ್ನು ಬರೆದು ಇಟ್ಟುಕೊಂಡುಬಿಡಿ.

ಅಧ್ಯಕ್ಷರು:– ಯಾವುದನ್ನು ಮಾಡುತ್ತಾರೆ ನಿಮಗೆ ಗೊತ್ತಾ?

ಶ್ರೀ ಎನ್. ಚೆಲುವರಾಯಸ್ವಾಮಿ:– ಬೆಂಗಳೂರಿನಲ್ಲಿ BMTF ಇದೆಯಲ್ಲಾ, ಅವರು ಕೊನೆಯಪಕ್ಷ ಜನರನ್ನು ಹೆದರಿಸಿದ್ದಾರೆ, ಅವರನ್ನೂ ಕೂಡ ಸರ್ಕಾರಗಳು ಹಲ್ಲುಕಿತ್ತ ಹಾವಿನ ರೀತಿ ಮಾಡಿ ಕೂರಿಸಿದ್ದಾರೆ, ಆದರೆ ಕೊನೆಯಪಕ್ಷ BMTF ಕಂಡರೆ ಮಂತ್ರಿಗಳು, ಎಂಎಲ್‌ಎ ಗಳು, ದೊಡ್ಡ ದೊಡ್ಡ ಲ್ಯಾಂಡ್ ಲಾರ್ಡ್‌ಗಳು ಭಯದಿಂದ ಹೆದರಿಕೊಂಡಿದ್ದಾರೆ. Atleast ಈ ರಾಜ್ಯದಲ್ಲೆಲ್ಲಾ BMTF ತರಹ ಮಾಡಿ, ಐಜಿ ಲೆವೆಲ್ ಪೊಲೀಸ್ ಅಧಿಕಾರಿಯನ್ನು ಕೊಟ್ಟು ಈ ರಾಜ್ಯದ ಇರಿಗೇಷನ್ ಇರಲಿ, M.I. ಇರಲಿ, ಜಿಲ್ಲಾ ಪಂಚಾಯತಿ ಇರಲಿ ಯಾವುದೇ ಕೆರೆಯನ್ನು ಒತ್ತುವರಿ ಮಾಡಿದ್ದರೆ, ಅವರ ಕಸ್ಟಡಿಗೆ ತೆಗೆದುಕೊಂಡು ಮಾಡತಕ್ಕಂತ ಮಟ್ಟಕ್ಕೆ ಮುಖ್ಯಮಂತ್ರಿಗಳ ಜೊತೆ ನೀವು ಮಾತನಾಡಿ ಏನಾದರೂ ಜಾರಿಗೆ ತಂದರೆ ನಿಮಗೆ ಹೆಸರಾದರೂ ಬರುತ್ತದೆ. ಇದು ತಂದು, ಒಂದು ವರ್ಷವಾದ ಮೇಲೆ

ಬಹುಶಃ ಸಭೆಯಲ್ಲಿ ಏನಪ್ಪ ಮಾಡಿದ್ದೀಯಾ ಎಂದು ಕೇಳಿದರೆ, ದೇವರಾಣೆ ಉತ್ತರ ಕೊಡುವುದಕ್ಕಾಗುವುದಿಲ್ಲ. ದಯಮಾಡಿ ನಾನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ, ದಯಮಾಡಿ, ಇದನ್ನು ಮಾರ್ಪಾಡು ಮಾಡಿಕೊಂಡು ವಾಪಸಗ ತೆಗೆದುಕೊಂಡು ಬನ್ನಿ, Law Minister, Revenue Minister ಹತ್ತಿರ ಚರ್ಚೆ ಮಾಡಿ, BMTF ಅನ್ನು ಇಡೀ ರಾಜ್ಯದಲ್ಲಿ, ಬಿಡಿಎ, ಕಾರ್ಪೋರೇಷನ್ ಬಿಟ್ಟು ಹೊರ ವಲಯದಲ್ಲಿರುವ ಎಲ್ಲಾ ಕೆರೆಗಳ ವ್ಯಾಪ್ತಿಯನ್ನು ಒಂದಕ್ಕೆ ತಂದು ನಮ್ಮ ರಮೇಶ್ ಕುಮಾರ್ ಅವರ ಸಲಹೆಯನ್ನು ತೆಗೆದುಕೊಂಡು ಮಾಡಿದರೆ, ನೀವು ವಯಸ್ಸಿನಲ್ಲಿ ಚಿಕ್ಕವರಾಗಿರುವುದಕ್ಕೆ ಸಾರ್ಥಕವಾಗುತ್ತದೆ, ನಿಮಗೆ ಹೆಸರು ಬರುತ್ತದೆ. ಇದನ್ನು ನೀವು ಪ್ರತಿಷ್ಠೆಯಾಗಿ ನಮ್ಮ ಕಾಂಗ್ರೆಸ್ ನದ್ದು ಮೆಜಾರಿಟಿ ಇದೆ ಎಂದು ಪಾಸ್ ಮಾಡಿಸಿಕೊಂಡು ಹೋದರೆ, ಇದರಿಂದ 1% ಉಪಯೋಗವಾಗುತ್ತದೆನ್ನುವುದಾದರೆ, ನಾನು ಮತ್ತೆ ಈ ಸದನ ಸಭೆಗೆ ಬರುವುದಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ [ಮೂಡಿಗೆರೆ]:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಬಗ್ಗೆ ಬಹಳಷ್ಟು ಅಭಿಪ್ರಾಯಗಳನ್ನು ಉತ್ತಮವಾದ ಸಲಹೆಗಳನ್ನು ಕೊಟ್ಟಿರುವುದನ್ನು ನಾನು ಕೇಳಿಸಿಕೊಂಡಿದ್ದೇನೆ. ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014 ಇಂಥ ಒಂದು ವಿಧೇಯಕವನ್ನು ತರುವ ಅವಶ್ಯಕತೆ ಇರುವುದು ನಿಜ. ಈಗಾಗಲೇ ಹಿರಿಯ ಸದಸ್ಯರಾದ ರಮೇಶ್ ಕುಮಾರ್‌ರವರು, ನಮ್ಮ ನಾಯಕರಾಗಿರುವ ಕುಮಾರಸ್ವಾಮಿಯವರು, ಕಾಗೇರಿಯವರು, ಕಾರಜೋಳ್ ಸೇರಿದಂತೆ ಮಾತನಾಡಿದ ಎಲ್ಲರೂ ಕೂಡ ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟರು. ತಾವು ಈಗ ಮಾತನಾಡುತ್ತಾ ಒಂದು Joint Select Committee ಮಾಡಿ ಯಾವ ಉದ್ದೇಶದಿಂದ ಈ ಕಾಯಿದೆಯನ್ನು ತರುತ್ತಿದ್ದೇವೆ, ಕೆರೆಗಳ ಸಂರಕ್ಷಣೆ, ಅಭಿವೃದ್ಧಿ ಮತ್ತು ಸಂಪೂರ್ಣವಾಗಿ ಅದರ ರಕ್ಷಣೆಯಾಗಬೇಕಾಗಿದೆನ್ನುವ ಅದರ ಉದ್ದೇಶವೇನಿದೆ ಅದು ಬಹಳ ಮುಖ್ಯವಾಗಿ ಆಗಿರುವುದರಿಂದ, ಈಗ ನೀವು ತಂದಿರುವ ಕಾಯಿದೆ ಒಂದು ರೀತಿ ಹಲ್ಲಿಲ್ಲದ ಹಾವಾಗಿದೆ.

ಇದಾಗಬಾರದೆನ್ನುವ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರು ಹೇಳಿದಂತೆ ಇನ್ನು ಉತ್ತಮವಾದ ಬಿಲ್ ಅನ್ನು ತರುವುದಕ್ಕೆ ಸಾಧ್ಯವಿದೆ. ಇವತ್ತು ಮಲೆನಾಡಿನಿಂದ ಬಂದಿರುವ ನಾನಿದ್ದೇನೆ, ಸಿ.ಟಿ. ರವಿಯವರಿದ್ದಾರೆ ಅಥವಾ ಕಾಗೇರಿಯವರಿದ್ದಾರೆ, ತಾವೇ ಇದ್ದೀರಿ. ನಮ್ಮ ಭಾಗದಲ್ಲಂತೂ ಕಾಫಿ ತೋಟಗಳನ್ನು ಮಾಡುವುದರಿಂದ ಸಮರ್ಥ ಕೆರೆಗಳು ಇವತ್ತು ಒತ್ತುವರಿಯಾಗಿದ್ದಾವೆ, ಆ ದೃಷ್ಟಿಯಿಂದ ಇದರ ಅವಶ್ಯಕತೆ ಇದೆ ಎಂದು ಹೇಳಿದೆ. ಇವತ್ತು ಹಳ್ಳಿಗಳಲ್ಲಿ ಕೃಷಿಗೆ ಕೆರೆಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಬಹಳ ಅಗತ್ಯವಾಗಿದೆ, ಈ ಹಿನ್ನೆಲೆಯಲ್ಲಿ ಈ ಬಿಲ್ ಅನ್ನು ತರುತ್ತಿದ್ದೀರಿ. ಆದರೆ ನನಗನಿಸುವುದು, ಎಲ್ಲರೂ ಕೂಡ ಮಾತನಾಡುವ ಸಮಯದಲ್ಲಿ ಎಲ್ಲೋ ಒಂದು ಕಡೆ ನ್ಯೂನ್ಯತೆಗಳಿಂದ ಕೊರತೆಗಳಿಂದ ಈ ಬಿಲ್ ಪೂರ್ಣವಾಗುವುದಿಲ್ಲ. ಯಾವ ಉದ್ದೇಶದಿಂದ ತರಬೇಕೆಂದು ಹೊರಟಿದ್ದೀರಿ, ಆ ಉದ್ದೇಶ ಈಡೇರುವುದಿಲ್ಲವೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇವೆ. ಆದೃಷ್ಟಿಯಿಂದ ನನಗನಿಸುವುದು, ಬಿಲ್ ಅನ್ನು ಹರಿಬರಿಯಲ್ಲಿ ತರದೆ, ಇನ್ನು ಇಂಥ ಉತ್ತಮವಾದ ಸಲಹೆಗಳನ್ನು ಏನು ಕೊಟ್ಟಿದ್ದಾರೆ, ಒಂದು ಕಮಿಟಿಯನ್ನು ಮಾಡಿ, ಚರ್ಚೆ ಮಾಡಿ ಮುಂದಿನ ಅಧಿವೇಶನದಲ್ಲಿ ಈ ಬಿಲ್ ಅನ್ನು ತಂದು ಇದಕ್ಕೆ ಹೆಚ್ಚಿನ ಅಧಿಕಾರವನ್ನು ಕೊಡುವುದಾಗಬೇಕು, ಮತ್ತೆ ಈ ಉದ್ದೇಶ ಈಡೇರಬೇಕು. ಇಲ್ಲದಿದ್ದರೆ, ಇವತ್ತು ಒಂದು ಕಡೆ ಕೆರೆಗಳ ಸಂಪೂರ್ಣ encroachment ಅಗಿದೆ, ಸ್ಮಶಾನಗಳು ತೋಟಗಳಾಗಿವೆ, ಈ ಎರಡು ವಿಚಾರಗಳು ತಮ್ಮ ಇಲಾಖೆ ಮೇಲೆ ಚರ್ಚೆ ಮಾಡುವಾಗ ಸಾಕಷ್ಟು ಚರ್ಚೆಯಾಗಿವೆ. ಹಾಗಾಗಿ ನಮ್ಮ ಚೆಲುವರಾಯಸ್ವಾಮಿಯವರು ಹೇಳಿದಂತೆ ಇವತ್ತು ಈ ಪ್ರಾಧೀಕಾರಕ್ಕೆ ಅಷ್ಟು ದೊಡ್ಡ ಅಧಿಕಾರವಿರುತ್ತದೆಯೇ? ಅವರನ್ನು ಬಂಧಿಸುವ ಅಧಿಕಾರವಿರುತ್ತದೆಯೇ? ಒಂದು ಬಾಂಡ್ ಕೊಟ್ಟರೆ ನಾವು ಅವರನ್ನು ರಿಲೀಸ್ ಮಾಡುತ್ತೇವೆಂದು ನೀವು ಹೇಳಿದ್ದೀರಿ, ಎಲ್ಲಿ ಪನಿಷ್ ಮಾಡಿದಂತಾಗುತ್ತದೆ. It will not serve the purpose. ಆ ದೃಷ್ಟಿಯಿಂದ ನನಗನಿಸುವುದೇನೆಂದರೆ, ಇನ್ನೊಂದು ಸಾರಿ ಆಮೂಲಾಗ್ರ ಚರ್ಚೆಗೆ ಈ ಬಿಲ್ ಅನ್ನು ಮಂಡಿಸಿ, Joint Select Committee ಮುಂದೆ ತಂದು, ಇದನ್ನು

ಶಕ್ತಿಯುತವಾಗಿ ಮತ್ತು ಅಧಿಕಾರಿಯುತವಾಗಿ ಮಾಡುವುದಕ್ಕೆ ಯಾವ ಘನ ಉದ್ದೇಶವನ್ನಿಟ್ಟುಕೊಂಡಿದ್ದೀರಿ ಆ ಉದ್ದೇಶ ಈಡೇರುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಇವತ್ತು ನಮ್ಮ ಭಾಗದಲ್ಲಿ ಒಂದೊಂದು ಕೆರೆಗೆ ಮೂರು ಸಾರಿ ದುಡ್ಡು ಖರ್ಚು ಮಾಡಿದ್ದಾರೆ, ಕೆರೆಯಲ್ಲಿ ಮಾತ್ರ ಹೂಳು ಎತ್ತಿಲ್ಲ, ಅಲ್ಲೇ ಇದ್ದಾವೆ. ಇದರ ಬಗ್ಗೆ ಸಮಗ್ರ ತನಿಖೆಯಾಲಿ, ಆ ಸರ್ಕಾರ, ಈ ಸರ್ಕಾರವೆನ್ನುವುದು ಬೇಕಾಗಿಲ್ಲ. ಎಷ್ಟು ಹಣ ದುರುಪಯೋಗವಾಗಿದೆ, ಕೆರೆಗಳ ಹೆಸರಿನಲ್ಲಿ ದುಡ್ಡು ಖರ್ಚಾಗಿದೆ, World Bankನಿಂದ ಲೋನ್ ತೆಗದುಕೊಂಡಿದ್ದೀರಿ, ಬೇರೆ ಬೇರೆ ಏಜೆನ್ಸಿಯಿಂದ ದುಡ್ಡು ತೆಗೆದುಕೊಂಡಿದ್ದೀರಿ, ಆದರೆ ಇವತ್ತು ಹಳ್ಳಿಗಳಲ್ಲಿ ಕೆರೆಗಳು ಇದ್ದ ಹಾಗೆ ಇದ್ದಾವೆ. ಆದೃಷ್ಟಿಯಿಂದ ತಾವು ಅತ್ಯಂತ ಜರೂರಾಗಿ, ಈ ಕೆರಗಳ ಹೆಸರಿನಲ್ಲಿ ರೈತರಿಗೆ ಅನ್ಯಾಯವಾಗಿದೆ, ದುರುಪಯೋಗವಾಗಿದೆ, ದೇಶದ ದುಡ್ಡು ಪೋಲಾಗಿದೆ, ಆ ದೃಷ್ಟಿಯಿಂದ ಗಮನಹರಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:– ಇಲ್ಲಿ ಇರುವುದೇ ಬೇರೆ ನೀವು ಹೇಳುವುದೇ ಬೇರೆಯಲ್ಲ, ಮರಾಯರೆ.

ಶ್ರೀ ಬಿ.ಬಿ. ನಿಂಗಯ್ಯ:– ಇಲ್ಲ ಸರ್, ಆ ಬಿಲ್ ತರುವಾಗ ಇವೆಲ್ಲಾ ಆಗಬೇಕು.

ಅಧ್ಯಕ್ಷರು:– ಈಗ ಕಾನೂನು ತಂದಿದ್ದಾರೆ, ಈ ಕಾನೂನು ಎಷ್ಟು ಪರಿಣಾಮಕಾರಿಯಾಗಿ ಮಾಡಬೇಕು, ಅದನ್ನು ಹೇಳಿ, ದುಡ್ಡು ತಿಂದಿದ್ದಾರೆನ್ನುವುದೆಲ್ಲಾ ಬೇರೆ ವಿಚಾರ ಬಂದಾಗ ಮಾತನಾಡಿ.

ಶ್ರೀ ಬಿ.ಬಿ. ನಿಂಗಯ್ಯ:– This suffers from so many things. ತಾವು ಹೇಳಿದಂತೆ Joint Select Committee ಮುಂದೆ ತಂದು ಅದರಲ್ಲಿ ಅಮೂಲಾಗ್ರವಾಗಿ ಚರ್ಚೆಯಾಗಿ ಮತ್ತೊಂದು ಸಾರಿ ಬಿಲ್ ಅನ್ನು ಮಂಡಿಸಿ ಎಂದು ಹೇಳಬಯಸುತ್ತೇನೆ.

ಶ್ರೀ ಅರವಿಂದ ಚಂದ್ರಕಾಂತ (ಹುಬ್ಬಳ್ಳಿ ಧಾರವಾಡ ಪಶ್ಚಿಮ):- ಮಾನ್ಯ ಅಧ್ಯಕ್ಷರೆ, ಈ ಕಾನೂನಿನಲ್ಲಿ ಮಹಾನಗರ ಸಭೆ ಕೆರೆಗಳನ್ನು ಹೊರತುಪಡಿಸಲಾಗಿದೆ. ನಮ್ಮ ಕ್ಷೇತ್ರ ಹುಬ್ಬಳ್ಳಿ-ಧಾರವಾಡ [ಪಶ್ಚಿಮ] ವಾಗಿದ್ದು, ಇಲ್ಲಿ ಸಣ್ಣವು ದೊಡ್ಡವು ಸೇರಿ 38 ಕೆರೆಗಳಿವೆ, ಇದರಲ್ಲಿ 3 ಕೆರೆಗಳು ಮಾತ್ರ Minor Irrigation ಅಧೀನದಲ್ಲಿ ಬರುತ್ತವೆ, ಉಳಿದ 35 ಕೆರೆಗಳು ಯಾವುದೇ ರೀತಿಯ ದಿಕ್ಕು ದೆಸೆಯಿಲ್ಲದ ಕೆರೆಗಳಾಗಿವೆ. ಇಂಥ ಕೆರೆಗಳನ್ನು ಕೂಡ ಈ ಕಾನೂನಡಿಯಲ್ಲಿ ತರುವುದು ಬಹಳ ಮುಖ್ಯ. ಮತ್ತೆ ಇವತ್ತು ಕೆರೆಗಳನ್ನು ಉಳಿಸಬೇಕೆಂದರೆ, ಕೆರೆಗೆ ಬರುವಂಥ ಹರಿವು, ಚಾನಲ್ ಏನಿದ್ದಾವೆ ಅವನ್ನು ನಿರ್ವಹಣೆ ಮಾಡುವುದು, ಉಳಿಸಿಕೊಳ್ಳುವುದು ಬಹಳ ಮುಖ್ಯ. ಹೀಗಾಗಿ ಈ ಕೆರೆಗಳ ಜೊತೆಗೆ ಈ ಕೆರೆಗಳ ಹರಿವನ್ನೂ ಕೂಡ ಈ ಕಾನೂನಿನ ಒಳಗೆ ತಂದರೆ ಹರಿವನ್ನು ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಅವನ್ನು ಒತ್ತುವರಿಯಾಗದಂತೆ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ನಿಜವಾಗಿ ಈ ಕೆರಗಳನ್ನು ಉಳಿಸುವುದಕ್ಕೆ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಅವಕ್ಕೆ ಬರುವಂಥ ಎಲ್ಲಾ ರಸ್ತೆಗಳು ಬಂದ್ ಆಗುತ್ತವೆ, ನಾವು ಏನೇ ಪ್ರಾಧಿಕಾರವನ್ನು ಮಾಡಿದರೂ ಕೂಡ ಆ ಕೆರೆಗಳನ್ನು ಉಳಿಸುವುದಕ್ಕಾಗುವುದಿಲ್ಲ. ಹಾಗಾಗಿ ಇದರಡಿಯಲ್ಲಿ ಮಹಾನಗರಸಭೆಗಳ ಕೆರೆಗಳನ್ನು ತರಬೇಕು, ಕೆರೆಗಳ ಜೊತೆಗೆ ಆ ಕೆರೆಗಳ ಚಾನಲ್ ಅನ್ನೂ ಕೂಡ ಈ ಕಾನೂನಿನಲ್ಲಿ ಸೇರಿಸಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ರಾಜೀವ್ (ಕುಡಚಿ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014 ಇದನ್ನು ಓದುತ್ತಿರುವಾಗ ನನಗೆ ಸಂತೋಷನೂ ಆಯಿತು. ಕೆರೆಗಳ ಮೂಲವನ್ನು ಉಳಿಸುವುದಕ್ಕಾಗಿ ಇವತ್ತು ಒಂದು ವಿಧೇಯಕ ವನ್ನು ತಂದಿದ್ದಾರೆ, ಈ ವಿಧೇಯಕ cognizable, bailable, triable by Sessions Court. ಇಷ್ಟು ನನಗೆ ಬಂದಿದೆ. ಮಾನ್ಯ ಬೋಪಯ್ಯನವರು ಮಾತನಾಡುವಾಗ bailable ಮಾಡುವುದು ಏಕೆ non-bailable ಮಾಡಬಹುದಿತ್ತಲ್ಲವೆಂದು ಹೇಳಿದರು. ಇಲ್ಲಿ ಕೆರೆ ಒತ್ತುವರಿಯಾಗಿ

20–40 ವರ್ಷಗಳಿಂದ ಬಂದು ಕುಳಿತಿರುತ್ತಾರೆ. ಈ ಪ್ರಾಧಿಕಾರ ಅವನಿಗೆ ಒಂದು ನೋಟಿಸ್ ಕೊಟ್ಟ ಮೇಲೆ 20–30 ವರ್ಷದಿಂದ bailable ಇದ್ದರೆ ಸರಿ, ಈ ವಿಧೇಯಕದಲ್ಲಿ ನನಗೆ ಕೊರತೆ ಕಾಣುತ್ತಿರುವುದು ಕಂಡಿಕೆ 19ರಲ್ಲಿ ಅಪೀಲ್, ಒಂದು ನೋಟಿಸ್ ಅನ್ನು ಪ್ರಾಧಿಕಾರ ಕೊಟ್ಟ ಮೇಲೆ, ಅಪೀಲ್ ಗೆ ಸೆಷನ್ ಕೋರ್ಟಿಗೆ ಹೋಗುತ್ತಾರೆ. ಸೆಷನ್ ಕೋರ್ಟಿನಲ್ಲಿ ಏನು decision ಆಗುತ್ತದೆ, ಅದು ಫೈನಲ್ ಎಂದು ಹೇಳುತ್ತಾರೆ. ಆದರೆ ಈ ಕಂಡಿಕೆಯಲ್ಲಿ ಸೆಷನ್ ಕೋರ್ಟ್ 60 ಅಥವಾ 90 ದಿವಸಗಳ ಒಳಗಡೆ ತೀರ್ಪನ್ನು ಕೊಡಬೇಕೆಂದು ಹೇಳಿದರೆ, ಆದಷ್ಟು ಬೇಗ ಮಾಡುವುದಕ್ಕೆ ಸಾಧ್ಯವಿದೆ. ಮತ್ತೆ ಇದರಲ್ಲಿ ಯಾವುದೇ ರೀತಿಯ ಕೊರತೆ ಕಾಣಲಿಲ್ಲ. ಇಲ್ಲಿ ಎಲ್ಲಾ ಕೆರೆಗಳನ್ನು ಹೇಳಿದ್ದಾರೆ, ಆಮೇಲೆ ಕಂಡಿಕೆ 2 ಉಪ ಕಾಲಂ (ಜಿ)ನಲ್ಲಿ ಕೆರೆ ಅಥವಾ ಕೊಳಗಳು. ಸರೋವರಗಳು ಎಂದರೆ ಎಲ್ಲಾ ಮೂಲಗಳನ್ನು ಸರ್ಕಾರಿ ಕೆರೆ, ಖರಾಬ್ ಕೆರೆ, ಕುಂಟೆ, ಕಟ್ಟೆ, ಒಳನಾಡು, ಜಲಮೂಲ, ಹೊರವಲಯ, ಜಲಾನಯನ ಪ್ರದೇಶ, ಒಳಹರಿವು, ಹೊಡ್ಡು, ಅಡ್ಡಗಟ್ಟೆ, ತೂಬು, ಹೊರಹರಿವು ಇವೆಲ್ಲವನ್ನೂ ಸೇರಿಸಿದ್ದಾರೆ. ಅದಕ್ಕಾಗಿ ಇನ್ನೊಂದು ಕೊರತೆ ಇಲ್ಲಿ ನನಗೆ ಕಾಣುತ್ತಿರುವುದು, ಜಿಲ್ಲಾ ಕಾರ್ಯನಿರ್ವಹಣಾ ಪ್ರಾಧಿಕಾರವೆಂದು ಮಾಡುತ್ತಾರೆ, ಇದು suo-moto complaint ತೆಗೆದುಕೊಳ್ಳಬೇಕಾ ಅಥವಾ cognizance ತೆಗೆದುಕೊಳ್ಳುವವರು ಯಾರು? ಇದನ್ನು ಸಾರ್ವಜನಿಕ ಬಂದು ಕೊಟ್ಟರೆ ಒಂದು ವೇಳೆ ಈ ಜಿಲ್ಲಾಮಟ್ಟದ ಪ್ರಾಧಿಕಾರ, ಇದನ್ನು ತೆಗೆದುಕೊಳ್ಳಲಿಲ್ಲವೆಂದರೆ, ಅವರಿಗೆ ಯಾವ ಮಾರ್ಗವಿದೆ? ಇಷ್ಟನ್ನು ಹೇಳಿದರೆ, ಒಟ್ಟಿನಲ್ಲಿ ಈ ಕೆರೆಗಳ ಮೂಲವನ್ನು ಉಳಿಸುವುದಕ್ಕೆ ಈ ವಿಧೇಯಕ ಬಹಳ ಸಹಕಾರಿಯಾಗುತ್ತದೆ, ಕೆರೆಗಳ ಮೂಲವನ್ನು ನಾವು ಉಳಿಸುವುದಕ್ಕೆ ಈ ವಿಧೇಯಕದಿಂದ ಸಾಧ್ಯವಿದೆ. ಅದರಲ್ಲಿ ಎರಡನೇ, ಕಂಡಿಕೆ 19 ಅನ್ನು ತಿದ್ದುಪಡಿ ಮಾಡಿ 45 ರಿಂದ 60 ದಿವಸಗಳೊಳಗೆ Sessions Court ತನ್ನ ತೀರ್ಪನ್ನು ಕೊಡಬೇಕು. ಆನಂತರ ಜಿಲ್ಲಾ ನಿರ್ವಹಣಾ ಪ್ರಾಧಿಕಾರಕ್ಕೆ ಯಾರು ದೂರನ್ನು ಕೊಟ್ಟರೂ ಸಹ ಅದನ್ನು ಸ್ವೀಕಾರ ಮಾಡಬೇಕು ಎಂದು ಎರಡು

ತಿದ್ದುಪಡಿ ಬಂದರೆ ಎಲ್ಲಾ ಕೆರೆಯ ಮೂಲಗಳನ್ನು ನಾವು ರಕ್ಷಣೆ ಮಾಡಲಿಕ್ಕೆ ಸಾಧ್ಯವಿದೆ ಎನ್ನುವ ಅಭಿಪ್ರಾಯವನ್ನು ತಿಳಿಸಬಯಸುತ್ತೇನೆ.

ಶ್ರೀ ಜೆ.ಆರ್. ಲೋಬೋ (ಮಂಗಳೂರು ನಗರ ದಕ್ಷಿಣ):- ಸನ್ಮಾನ್ಯ ಅಧ್ಯಕ್ಷರೆ, ಈ ಕೆರೆ ಅಭಿವೃದ್ಧಿ ಪ್ರಾಧಿಕಾರದ ವಿಧೇಯಕದಲ್ಲಿ ಸೆಕ್ಷನ್ 3(6) ರಲ್ಲಿ ಜಿಲ್ಲಾ ಕಾರ್ಯ ನಿರ್ವಹಣಾ ಪ್ರಾಧಿಕಾರದ ರಚನೆಯನ್ನು ಮಾಡಿದ್ದಾರೆ. ಆದರೆ ಜಿಲ್ಲಾ ಕಾರ್ಯ ನಿರ್ವಹಣಾ ಪ್ರಾಧಿಕಾರದ ಅಧಿಕಾರ ಏನು? ಇದರ ಬಗ್ಗೆ ಎಲ್ಲಿಯೂ, ಯಾವುದೇ ವಿಚಾರಗಳನ್ನು ಹೇಳಿಲ್ಲ. ಅದರಲ್ಲಿ ಏನು ಕೊಟ್ಟಿದ್ದಾರೆಂದರೆ ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಕಾರ್ಯ ನಿರ್ವಹಣಾ ಪ್ರಾಧಿಕಾರ ಇರಬೇಕು. ರಾಜ್ಯ ಪ್ರಾಧಿಕಾರದ ನಿರ್ಣಯವನ್ನು ಮಾತ್ರ ಕಾಲಕಾಲಕ್ಕೆ ಕಾರ್ಯಗತಗೊಳಿಸತಕ್ಕದ್ದು. ಇದು ಜಿಲ್ಲಾ ನಿರ್ವಹಣಾ ಪ್ರಾಧಿಕಾರ ಜಿಲ್ಲಾ ಮಟ್ಟದಲ್ಲಿ ಬಹಳ ಪ್ರಾಮುಖ್ಯವಾದ ಅಂಗ. ಅದರ ಅಧಿಕಾರ ಏನೆಂಬುದನ್ನು ಸ್ಪಷ್ಟಪಡಿಸಬೇಕು. ಅದಕ್ಕೆ ಅಧಿಕಾರವನ್ನು ನೀಡಬೇಕು. ಎರಡನೆಯದಾಗಿ ರಾಜ್ಯ ಪ್ರಾಧಿಕಾರದಲ್ಲಿ ಮೀನುಗಾರಿಕೆ ಇಲಾಖಾ ನಿರ್ದೇಶಕರನ್ನು ಸದಸ್ಯರನ್ನಾಗಿ ಮಾಡಿದ್ದಾರೆ. ಕೆರೆಯ ಚಟುವಟಿಕೆಗಳಲ್ಲಿ ಕೃಷಿ, ಮೀನುಗಾರಿಕೆ, ಅಂತರ್ಜಲ, ಇದು ಮೂರು ಬಹಳ ಪ್ರಾಮುಖ್ಯವಾದ ವಿಚಾರಗಳು. ಕೃಷಿಗೆ ಕೊಟ್ಟಿದ್ದೀರಿ ಅರಣ್ಯಕ್ಕೆ ಕೊಟ್ಟಿದ್ದೀರಿ, ಆದರೆ ಮೀನುಗಾರಿಕೆಯ ಇಲಾಖಾ ಉಪ ನಿರ್ದೇಶಕರನ್ನು ಜಿಲ್ಲಾ ನಿರ್ವಹಣಾ ಪ್ರಾಧಿಕಾರದಲ್ಲಿ ಸದಸ್ಯರನ್ನಾಗಿ ಮಾಡಿಲ್ಲ. ಆದ್ದರಿಂದ ದಯವಿಟ್ಟು ಇದರಲ್ಲಿ ಬಹಳ ಪ್ರಾಮುಖ್ಯವಾಗಿ ಮಾಡಬೇಕು. ಮೂರನೇ ವಿಚಾರ ರಾಜ್ಯ ಪ್ರಾಧಿಕಾರದಲ್ಲಿ ತಾವು ನಿಧಿಯನ್ನು ಅಥವಾ account ಅನ್ನು ಮಾಡಿ ವ್ಯವಸ್ಥೆ ಮಾಡಿದ್ದೀರಿ. ಆದರೆ ಜಿಲ್ಲಾ ಪ್ರಾಧಿಕಾರದಲ್ಲಿ ಯಾವುದೇ ಕೆರೆಯನ್ನು ಸಂರಕ್ಷಣೆ ಮಾಡಬೇಕಾದರೆ ಅದಕ್ಕೆ ಆದಾಯ ಬರಬೇಕು, ಅದಕ್ಕೆ ಖರ್ಚಾಗಬೇಕು, ಅದು self sustaining ಆಗಬೇಕು. ಆ ರೀತಿ self sustain ಆಗಬೇಕಾದರೆ ಮೀನುಗಾರಿಕೆಯಿಂದ, ನೀರು ತೆರಿಗೆಯಿಂದ ಆದಾಯ ಬರುವುದು ಇದನ್ನು ವಸೂಲಾತಿ ಮಾಡುವ ಅಧಿಕಾರವನ್ನು ಜಿಲ್ಲಾ ಪ್ರಾಧಿಕಾರಕ್ಕೆ ಕೊಡಿ. ಆ ಜಿಲ್ಲಾ

ಪ್ರಾಧಿಕಾರದಲ್ಲಿ ಒಂದು account ಮಾಡಲಿಕ್ಕೆ ಅವಕಾಶ ಕೊಡಿ. ಆ ದುಡ್ಡನ್ನು ಅದೇ ಕೆರೆಗಳ ಅಭಿವೃದ್ಧಿಗೆ ಉಪಯೋಗ ಮಾಡಲಿಕ್ಕೆ ಕೊಡಿ. ಅಲ್ಲಿ tourism ಮಾಡಲಿಕ್ಕೆ ಏನಾದರೂ permission ಕೊಟ್ಟರೆ ಅದರಿಂದ ಬರುವ ಆದಾಯವನ್ನು ಜಿಲ್ಲಾ ಪ್ರಾಧಿಕಾರದ ನಿಧಿಯಲ್ಲಿ ಬರುವಂತೆ ಮಾಡಿ. ಹಾಗೆ ಮಾಡಿದರೆ ಆ ಕೆರೆಗಳನ್ನು ರಕ್ಷಣೆ ಮಾಡುವಂಥ ಆಸಕ್ತಿ ಬರುತ್ತದೆ. ಆ ಕೆರೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಆಸಕ್ತಿ ಬರುತ್ತದೆ. ಕೇವಲ ನಾವು ಅಧಿಕಾರವನ್ನು ಚಲಾಯಿಸಿ ಒತ್ತುವರಿ ತೆರವು ಮಾಡುತ್ತೇವೆಂದರೆ ಅದರಿಂದ ರಕ್ಷಣೆ ಆಗುವುದಿಲ್ಲ. ಕೆರೆ ರಕ್ಷಣೆ ಆಗಬೇಕಾದರೆ ಅದರಿಂದ ಆದಾಯ ಬರಬೇಕು. ಆ ಸೆಸ್ ಅನ್ನು ವಸೂಲಿ ಮಾಡಬೇಕು, ಆ ಕೆರೆಯನ್ನು ಅಭಿವೃದ್ಧಿ ಮಾಡಬೇಕು, ಅದರ ರಕ್ಷಣೆಯನ್ನು ಮಾಡಬೇಕು. ಆದ್ದರಿಂದ ಇಡೀ ಬಿಲ್‌ನಲ್ಲಿ ಜಿಲ್ಲಾ ಕಾರ್ಯ ನಿರ್ವಹಣಾ ಪ್ರಾಧಿಕಾರಕ್ಕೆ ಅಷ್ಟೊಂದು ಪ್ರಾಮುಖ್ಯತೆ ಕೊಟ್ಟಿಲ್ಲ. ಅದಕ್ಕೆ ಸರಿಯಾದ ಗಮನ ಕೊಡಬೇಕು ಅಲ್ಲಿ ಅದು ಅನುಷ್ಠಾನವಾಗುವುದು. ಅಲ್ಲಿ ಜಿಲ್ಲಾ ಮಟ್ಟದಲ್ಲಿ ಅಧಿಕಾರವನ್ನು ಕೊಡಿ. ಸೆಕ್ಷನ್ 12(2) ಮತ್ತು 12(6) ರಲ್ಲಿ ಪ್ರತಿಯೊಂದಕ್ಕೆ ಅನುಮತಿಗೆ ಸರ್ಕಾರಕ್ಕೆ ಬರಬೇಕೆಂದು ಕೊಟ್ಟಿದ್ದಾರೆ. ರಾಜ್ಯ ಮಟ್ಟದಲ್ಲಿ ತಾವು ಪ್ರಾಧಿಕಾರವನ್ನು ರಚನೆ ಮಾಡಿದ ನಂತರ ಪ್ರಾಧಿಕಾರಕ್ಕೆ ಅನುಮತಿ ಕೊಡಿ. ಈಗ ಯಾವುದೇ ಒಂದು ರಸ್ತೆಯನ್ನು ನಿರ್ಮಾಣ ಮಾಡಬೇಕಾದರೆ ಯಾವುದೇ ಒಂದು ಅಲ್ಲಿ constructions ಮಾಡಲಿಕ್ಕೆ ಅನುಮತಿ ಪಡೆಯಲು ಅದು ಸರ್ಕಾರಕ್ಕೆ ಬರಬೇಕು ಅಂದರೆ ಅದು ಆಗುವಂಥ ವಿಚಾರವಲ್ಲ. ಪ್ರಾಧಿಕಾರ ಆದಮೇಲೆ ಆ ಪ್ರಾಧಿಕಾರಕ್ಕೆ ಕೊಡಿ, ಜಿಲ್ಲಾ ಪ್ರಾಧಿಕಾರವು ತನ್ನ recommendation ಕೊಟ್ಟ ಮೇಲೆ, ಬೇಕಾದರೆ ರಾಜ್ಯ ಪ್ರಾಧಿಕಾರಕ್ಕೆ ಕೊಡಿ. ಆದ್ದರಿಂದ ಇನ್ನು ಮುಂದೆ ಈ ಪ್ರಾಧಿಕಾರ ಆದಮೇಲೆ ಮೀನುಗಾರಿಕೆಯ ದೊಡ್ಡ ಆದಾಯದ ವ್ಯವಸ್ಥೆ, water cess ಇನ್ನೊಂದು ಆದಾಯದ ವ್ಯವಸ್ಥೆ. ಇದನ್ನು ನೀವು ಸರ್ಕಾರಕ್ಕೆ ಕೊಂಡೆಯ್ಯುವುದು ಬೇಡ. ಇದು ಈ ನಿಧಿಗೆ ಬರಲಿ, ಇದರಿಂದ ಈ ಕೆರೆಗಳು ಅಭಿವೃದ್ಧಿಯಾಗಲಿ. ಇದನ್ನು ಮಾಡಲಿಕ್ಕೆ ಅನುವು ಮಾಡಿಕೊಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಸಚಿವರೇ ಉತ್ತರ ಹೇಳುವಿರಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸಚಿವರು ಉತ್ತರ ಹೇಳುವರೋ ಅಥವ Law Minister ಏನಾದರೂ ಉತ್ತರ ಕೊಡುವರೋ?

ಶ್ರೀ ಸಿ.ಎನ್. ಬಾಲಕೃಷ್ಣ:– ಸಚಿವರೇ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ.

ಶ್ರೀ ಶಿವರಾಜ್ ಎಸ್. ತಂಗಡಗಿ:– Concerned Minister ಆಗಿ ನಾನೇ ಮಾತನಾಡುತ್ತೇನೆ.

ಅಧ್ಯಕ್ಷರು:– ಸಚಿವರೇ, ಅವರು ಎರಡು ನಿಮಿಷ ಮಾತನಾಡಲಿ.

ಶ್ರೀ ಸಿ.ಎನ್. ಬಾಲಕೃಷ್ಣ (ಶ್ರವಣಬೆಳಗೊಳ):– ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿ ಇಲಾಖೆ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವಂಥ ವಿಚಾರದ ವಿಧೇಯಕವನ್ನು ಮಂಡನೆ ಮಾಡಿರುವ ಬಗ್ಗೆ ಸದನದ ಹಿರಿಯ ಮಾನ್ಯ ಸದಸ್ಯರುಗಳೆಲ್ಲಾ ಮಾತನಾಡಿದ್ದಾರೆ. ಬಹುಶಃ ಕಳೆದ ಎರಡು ವರ್ಷಗಳಿಂದಲೂ ಕೂಡ ಈ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ Minor Irrigation tank ಗೆ ಒತ್ತುವರಿಯದಂಥ ಜಾಗವನ್ನು ತೆರವುಗೊಳಿಸುವಂಥ ವಿಚಾರದಲ್ಲಿ ಇಂಜಿನಿಯರ್‌ಗಳು ಸರ್ವೆ ಮಾಡಿಸಿ ಅದನ್ನು ಹದ್ದುಬಸ್ತು fix ಮಾಡುವ ಸಂದರ್ಭದಲ್ಲಿ ಜೆಸಿಬಿಗಳನ್ನು ತೆಗೆದುಕೊಂಡು ಹೋಗಿ ಹದ್ದುಬಸ್ತು fix ಮಾಡಿದರು ಆದರೆ ಮಾರನೆ ದಿವಸವೇ ಕೆಲವು ಒತ್ತುವರಿ ಮಾಡಿಕೊಂಡಿರುವವರು ಅದನ್ನು ಮುಚ್ಚಿಹಾಕುವಂಥ ಕೆಲಸವನ್ನು ಮಾಡಿದ್ದಾರೆ. ಇವತ್ತು ಕೆರೆಗಳನ್ನು ಉಳಿಸುವಂಥ ದಿಕ್ಕಿನಲ್ಲಿ ಸರ್ಕಾರ ಆಲೋಚನೆ ಮಾಡಿರುವಂಥದ್ದು ಸ್ವಾಗತಾರ್ಹವಾದ ವಿಚಾರ, ಆದರೆ ಅದು ಕಟ್ಟುನಿಟ್ಟಾಗಿ ಜಾರಿಗೆ ಬರಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ಅದರಲ್ಲೇನಾಗಿದೆ ಎಂದರೆ ರಾಜಕಾಲುವೆಗಳನ್ನು ಬಹುತೇಕವಾಗಿ ಒತ್ತುವರಿ ಮಾಡುತ್ತಿದ್ದಾರೆ, ಅದರ ಜೊತೆಗೆ ಸೀಳುಗಾಲುವೆಗಳು ಎಂದಿರುತ್ತವೆ, ಅದನ್ನು ಕೂಡ ಯಾವ

ಮೂಲದಿಂದ ನೀರು ಬರುತ್ತದೆ ಆ ಸೀಳುಗಾಲುವೆಗಳನ್ನು ಸಹ ಒತ್ತುವರಿ ಮಾಡಿದ್ದಾರೆ. ಅದರಿಂದ ಮುಂದಿನ ದಿವಸಗಳಲ್ಲಿ ಅಂತರ್ಜಲ ಉಳಿಸುವ ದೃಷ್ಟಿಯಲ್ಲಿ ಈ ಕಾರ್ಯಕ್ರಮವನ್ನು ಕಾನೂನುಬದ್ಧವಾಗಿ, ಕಠಿಣವಾಗಿ ಅನುಷ್ಠಾನಗೊಳ್ಳಬೇಕು. ಏನಾಗಿದೆ ಎಂದರೆ Minor Irrigation ವ್ಯಾಪ್ತಿಯಲ್ಲಿ sub division ನಲ್ಲಿ ಕೇವಲ ಇಬ್ಬರು ಇಂಜಿನಿಯರ್ಸ್ ಇರುತ್ತಾರೆ. ಇವತ್ತು ಅವರು ನಾಲ್ಕು ತಾಲ್ಲೂಕುಗಳನ್ನು ನಿರ್ವಹಣೆ ಮಾಡುತ್ತಾರೆ. ಅವರು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿನ ಕೆರೆಯ ಬಳಿಗೆ ಹೋಗಬೇಕಾದರೆ ಒಂದು ವಾರ ಬೇಕು. ಹಾಗಾಗಿ ಇಲಾಖೆಯನ್ನು strengthen ಮಾಡಬೇಕೆನ್ನುವ ದೃಷ್ಟಿಯಿಂದ ಸಹ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕು. ಅದೇರೀತಿ ಮಾನ್ಯ ಮಂತ್ರಿಗಳು ಒಂದು ವಿಧಾನಸಭಾ ಕ್ಷೇತ್ರಕ್ಕೆ ಒಂದು ಕೆರೆಯನ್ನು ಅಭಿವೃದ್ಧಿ ಮಾಡಲಿಕ್ಕೆ ಒಂದು ಕೋಟಿ ರೂಪಾಯಿಗಳ ಮೊತ್ತವನ್ನು ನಿಗದಿ ಮಾಡಿದ್ದೇವೆಂದು ಹೇಳಿದ್ದಾರೆ. ಇನ್ನೊಂದು ಸಮಸ್ಯೆ ಇದೆ ಇವರು ಏನು ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಾರೆ, ಬಹುತೇಕ ಕೆರೆಗಳಲ್ಲಿ ಇಟ್ಟಿಗೆ Factory ಯವರು ಎಲ್ಲಾ ಮಣ್ಣನ್ನು ಮೂರು ನಾಲ್ಕು ಮೀಟರ್‌ನಷ್ಟು ಮಣ್ಣನ್ನು ತೆಗೆದು ಹೊರಗಡೆಗೆ ಸಾಗಿಸಿರುತ್ತಾರೆ. ಅದನ್ನು ನಾವು ತುಂಬಿದ್ದೇವೆಂದು ಕೆಲವು ಕಂಟ್ರಾಕ್ಟರ್‌ಗಳು ಬಿಲ್ ಮಾಡುವಂಥ ಸ್ಥಿತಿ ಕೆಲವು ಕೆರೆಗಳ ವಿಷಯದಲ್ಲಾಗಿವೆ. ದಯಮಾಡಿ ಈ ರೀತಿಯಾಗದಂತೆ ಸಂಪೂರ್ಣ ಕೆರೆಯನ್ನು ಅಬಿವೃದ್ಧಿ ಮಾಡುವಂಥ ದಿಕ್ಕಿನಲ್ಲಿ ಒಂದು Minor Irrigation Department ಅವಕಾಶವನ್ನು ಮಾಡಿಕೊಡಬೇಕು. ಜೊತೆಗೆ ಇವತ್ತು ಮಂಡನೆಯಾಗುವ ವಿಧೇಯಕ ಕೇವಲ ನಾಮಕಾವಸ್ಥೆ ವಿಧೇಯಕವಾಗಬಾರದು. ಅದನ್ನು ನಿಜವಾಗಲೂ ಕಾರ್ಯರೂಪಕ್ಕೆ ತರಬೇಕು ಎಂದು ಮಾನ್ಯ ಅಧ್ಯಕ್ಷರೆ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು:– ಸಚಿವರು ಹೇಳಿ.

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಬಹಳಷ್ಟು ಹಿರಿಯ ಸದಸ್ಯರು, ಮಾನ್ಯ ಸದಸ್ಯರುಗಳು ಈ

ವಿಧೇಯಕದಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಬೇಕೆಂದು ಕೆಲವೊಂದು ವಿಚಾರಗಳನ್ನು ಹೇಳಿದರು. ತಾವು ಹೇಳಿರುವ ಕೆಲವು ವಿಚಾರಗಳು already ಈ ಬಿಲ್‌ನಲ್ಲಿವೆ. ಇನ್ನು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ, ಈ ಜಿಲ್ಲಾ ಪಂಚಾಯಿತಿ ಕೆರೆಗಳಿರಬಹುದು, ಆ ಜಿಲ್ಲಾ ಪಂಚಾಯಿತಿ ಕೆರೆಗಳನ್ನು ಈ ಬಿಲ್‌ನಲ್ಲಿ ತೆಗೆದುಕೊಂಡಿದ್ದೇವೆ. ನಗರ ಸಭೆ ಕೆರೆಗಳನ್ನು ಬಿಲ್‌ನಲ್ಲಿ ತೆಗೆದುಕೊಂಡಿದ್ದೇವೆ. ಪುರಸಭೆ ಕೆರೆಗಳನ್ನು ಬಿಲ್‌ನಲ್ಲಿ ತೆಗೆದುಕೊಂಡಿದ್ದೇವೆ. ಪಟ್ಟಣ ಪಂಚಾಯಿತಿ ಕೆರೆಗಳನ್ನು ಬಿಲ್‌ನಲ್ಲಿ ತೆಗೆದುಕೊಂಡಿದ್ದೇವೆ ಎಂಬುದು ಇದರಲ್ಲಿ ಸ್ಪಷ್ಟವಾಗಿದೆ. ಇವೆಲ್ಲವನ್ನು ತೆಗೆದುಕೊಂಡಿದ್ದೇವೆ ಅದರ ಜೊತೆಗೆ ಕೆಲವೊಂದಿಷ್ಟು ಬೆಂಗಳೂರಿನ ಬಿಡಿಎ ಮತ್ತು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಮಾತ್ರ ಇವುಗಳನ್ನು ತೆಗೆದುಕೊಂಡಿದ್ದೇವೆ. ನಮ್ಮ ಹಿರಿಯ ಸದಸ್ಯರಾದಂಥ ಕುಮಾರಸ್ವಾಮಿಯವರು ಬೆಂಗಳೂರು ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದರು. ಬೆಂಗಳೂರು ಕೆರೆಗಳನ್ನು ಸಂರಕ್ಷಣೆ ಮಾಡಬೇಕೆನ್ನುವುದು ನಮ್ಮ ಮುಖ್ಯಮಂತ್ರಿಗಳು ಮತ್ತು ನಮ್ಮ ಸರ್ಕಾರದ ಒಂದು ಕರ್ತವ್ಯವಾಗಿದೆ ಅದನ್ನು ಮಾಡಲೇಬೇಕೆಂಬ ನಿರ್ಧಾರವನ್ನು ಮಾಡಿದ್ದೇವೆ. ಅದೇ ಒಂದು ಕಾರಣಕ್ಕಾಗಿ Lake development Authority ಯನ್ನು ಇನ್ನು ಇದಕ್ಕಿಂತ ಹೆಚ್ಚಿನ ರೀತಿಯಲ್ಲಿ strengthen ಮಾಡಬೇಕು ಹಾಗಾಗಿ ಅದರ ಬಗ್ಗೆ ಬಿಲ್ ಅನ್ನು ತರಬೇಕೆಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಅದರ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿರುವಂಥದ್ದು ಬೆಂಗಳೂರನ್ನು ಹೊರತುಪಡಿಸಿ ಹೊರಗಿರುವಂಥ ನಗರ ಪ್ರದೇಶಗಳಲ್ಲಿರುವಂಥ ಕೆಲವು ಕೆರೆಗಳನ್ನು ಮಾತ್ರ ಇದರಲ್ಲಿ ತೆಗೆದುಕೊಂಡಿದ್ದೇವೆ. ಜಿಲ್ಲಾ ಪಂಚಾಯಿತಿ 26,000 ಕೆರೆಗಳು ಮತ್ತು ಬೇರೆ ಬೇರೆ ಎಲ್ಲಾ ಕೆರೆಗಳೆಲ್ಲಾ ಸೇರಿ ಒಟ್ಟು ನನ್ನ ಇಲಾಖಾ ಕೆರೆಗಳು 3,622 ಕೆರೆಗಳು. ಇವೆಲ್ಲವನ್ನು ಸೇರಿಸಿ ಇನ್ನು ದೊಡ್ಡದನ್ನಾಗಿ ಮಾಡಬೇಕು. ಈ ಬಿಲ್ ಅನ್ನು ನಾವು prestige ಗಾಗಿ, ಎಲ್ಲೋ ಒಂದು ಕಡೆ ಜಿದ್ದಿಗೆ ಬಿದ್ದು ಏನೋ ಕಾಟಾಚಾರಕ್ಕೆ ಈ ಬಿಲ್ ತರಬೇಕೆಂದು ನಮ್ಮ ಸರ್ಕಾರವಾಗಲಿ ನಮ್ಮ ಮುಖ್ಯಮಂತ್ರಿಗಳಾಗಲಿ ಇಲ್ಲ, ಇದನ್ನು ಏನಾದರೂ strengthen ಮಾಡಬೇಕೆಂದರೆ ಇನ್ನು ಹಿರಿಯ ಸದಸ್ಯರು

ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಆ ಎಲ್ಲಾ ಮಾರ್ಪಾಡುಗಳನ್ನು ತೆಗೆದುಕೊಂಡು ನಾಳೆ ಮತ್ತೆ ಈ ಬಿಲ್ ಅನ್ನು ತರುವಂಥ ಕೆಲಸವನ್ನು ಮಾಡುತ್ತೇನೆ. ನಿಶ್ಚಿತವಾಗಲೂ ನಮ್ಮ ಸರ್ಕಾರದ ಹಾಗೂ ನಮ್ಮ ಆಸೆ ಏನೆಂದರೆ ಕೆರೆಗಳ ಸಂರಕ್ಷಣೆ ಮಾಡಬೇಕು, ಅಂತರ್ಜಲವನ್ನು ವೃದ್ಧಿಗೊಳಿಸಬೇಕು ಮತ್ತು ಕೆರೆಗಳನ್ನು ಉಳಿಸುವ ರೀತಿಯಲ್ಲಿ ಹಿರಿಯ ಸದಸ್ಯರುಗಳು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ರಮೇಶ್ ಕುಮಾರ್‌ರವರು ಇರಬಹುದು, ಕುಮಾರಸ್ವಾಮಿಯವರು ಇರಬಹುದು ಮತ್ತು ಚೆಲುವರಾಯಸ್ವಾಮಿಯವರು ಇರಬಹುದು.

ಶ್ರೀ ಎನ್. ಚೆಲುವರಾಯಸ್ವಾಮಿ:– ರಮೇಶ್ ಕುಮಾರ್‌ರವರು ಏನು ಹೇಳುತ್ತಾರೆ ಅದಕ್ಕೆಲ್ಲಾ ನಮ್ಮ ಒಪ್ಪಿಗೆ ಇದೆ.

ಶ್ರೀ ಶಿವರಾಜ್ ಎಸ್. ತಂಗಡಗಿ:– ರಮೇಶ್ ಕುಮಾರ್‌ರವರು ಹಿರಿಯ ಸದಸ್ಯರಿದ್ದಾರೆ. ಕೆರೆಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅವರ ಸಲಹೆ, ಕುಮಾರಸ್ವಾಮಿಯವರ ಸಲಹೆ, ಚೆಲುವರಾಯಸ್ವಾಮಿಯವರು, ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಬೋಪಯ್ಯನವರು, ಸಿ.ಟಿ. ರವಿ, ನಿಂಗಯ್ಯನವರು ಮತ್ತು ಜೀವರಾಜ್‌ರವರು, ಶಿವಲಿಂಗೇಗೌಡರು ಯಾರ್‍ಯಾರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ನಮ್ಮ ಪಕ್ಷದ ಹಿರಿಯ ಸದಸ್ಯರು ಇರಬಹುದು, ರಮೇಶ್ ಕುಮಾರ್ ಇರಬಹುದು ನಮ್ಮ ಯುವ ಶಾಸಕರಿರಬಹುದು ಅವರೆಲ್ಲರ ಸಲಹೆಯನ್ನು ತೆಗೆದುಕೊಂಡು ಮತ್ತೊಮ್ಮೆ ನಾಳೆ ನಾನು ಅದನ್ನು ತರುವಂಥ ಕೆಲಸವನ್ನು ಮಾಡುತ್ತೇನೆ. ಇದನ್ನು ನಾಳೆ ತರುವಂಥ ಕೆಲಸವನ್ನು ಮಾಡುತ್ತೇನೆ. ಏಕೆಂದರೆ ಸಲಹೆಗಳನ್ನು ಮಾನ್ಯ ಸದಸ್ಯರುಗಳು ಏನು ಕೊಟ್ಟಿದ್ದಾರೋ ಆ ಸಲಹೆಗಳನ್ನು ತೆಗೆದುಕೊಂಡು ಈ ವಿಧೇಯಕವನ್ನು ಮತ್ತೆ ಸದನದ ಮುಂದೆ ತರುವಂಥ ಕೆಲಸವನ್ನು ಮಾಡುತ್ತೇನೆ. ಇರದಲ್ಲಿ ಜಿದ್ದಿಗೆ ಇದನ್ನು ತರಬೇಕೆನ್ನುವ ಪ್ರಶ್ನೆಯೇ ಇಲ್ಲ.

ಅಧ್ಯಕ್ಷರು:– ಇದರಲ್ಲಿ ಜಿದ್ದಿನ ಪ್ರಶ್ನೆ ಬರುವುದಿಲ್ಲ ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸರ್ಕಾರ ಇಷ್ಟು ರಚನಾತ್ಮಕವಾಗಿ ಸ್ವೀಕಾರ ಮಾಡಿರುವುದಕ್ಕೆ ನಾನು ಅಭಿನಂದಿಸುತ್ತೇನೆ. ಒಂದೇ ಒಂದು ವಿನಂತಿಯನ್ನು ನಾನು ಈಗಲೂ ಮಾಡುವುದಕ್ಕೆ ಬಯಸುವುದೇನೆಂದರೆ, ಮತ್ತೆ ನಾಳೆ ಎಂದರೆ ತರಾತುರಿಯಲ್ಲಿ ಏನಾದರೂ ಮಾಡಬೇಡಿ. ಸಮಯಾವಕಾಶವನ್ನು, ಕಾಲಾವಕಾಶವನ್ನು ತೆಗೆದುಕೊಂಡು ಚರ್ಚೆ ಮಾಡಿ. ಏಕೆಂದರೆ ಈ ಅಧಿವೇಶನ 31 ರೊಳಗೆ ಮುಗಿದುಹೋಗುತ್ತದೆ, ಅಷ್ಟರೊಳಗೆ ಮಾಡಿಬಿಡೋಣವೆಂದು ತರಾತುರಿಯಲ್ಲಿ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಉಳಿದೆಲ್ಲರ ಜೊತೆಯಲ್ಲಿ ಸಮಾಲೋಚಿಸಿ ಇದನ್ನು ಇನ್ನಷ್ಟು ಹೆಚ್ಚು ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ಬಯಸಿ ಒಂದು comprehensive ಆಗಿ Bill ತರುವುದರ ಬಗ್ಗೆ ಮುಂದಾಗಿರುವುದಕ್ಕೆ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ.

ಅಧ್ಯಕ್ಷರು:– ಆಯಿತು. ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ್:– ಮಾನ್ಯ ಸಚಿವರೆ, ಈ ಬಿಲ್‌ನಲ್ಲಿ ಮಹಾನಗರಸಭೆ ಕೆರೆಗಳನ್ನು ಕೂಡ ಸೇರಿಸಿಕೊಳ್ಳಬೇಕು.

ಶ್ರೀ ಶಿವಾನಂದ ಎಸ್. ಪಾಟೀಲ್:– ಜಲ ಸಂವರ್ಧನೆಯದ್ದು ಬರಬೇಕು.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ:– ಜಲ ಸಂವರ್ಧನೆಯದ್ದು ಇದರಲ್ಲಿ ಬರುವುದಿಲ್ಲ. ಜಲ ಸಂವರ್ಧನೆಯದ್ದನ್ನು ಸೆಪರೇಟ್ ಆಗಿ ಅದನ್ನು ಕ್ಯಾಬಿನೆಟ್‌ಗೆ ತರುತ್ತಿದ್ದೇವೆ. ಕನಿಷ್ಠ 5 ಸಾವಿರ ಕೆರೆಗಳು, ಇದರ ಬಗ್ಗೆ ಇನ್ನೂ ಹೇಳಬೇಕಾಗಿದೆ. ನಾಳೆ ಉತ್ತರ ಕೊಡುವಾಗ ಹೇಳುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್:– 5 ಸಾವಿರ ಕೆರೆಗಳನ್ನು world Bank assistance ಕೆಳಗೆ ತೆಗೆದುಕೊಂಡಿದ್ದಾರೆ. ಅವುಗಳು hand over ಆಗಿಲ್ಲ. ಅವಕ್ಕೆ ಅವ್ವಾನೂ ಇಲ್ಲ, ಅಪ್ಪಾನೂ ಇಲ್ಲ. ಅವು ಎಲ್ಲಿವೆ ಎಂಬುದನ್ನೂ ಹೇಳಬೇಕಲ್ಲವೆ?

ಶ್ರೀ ಶಿವರಾಜ್ ಎಸ್. ತಂಗಡಗಿ:– ಹಿಂದೆ ತೆಗೆದುಕೊಂಡಿದ್ದು 2012–13 ರಲ್ಲಿ ಮುಗಿಯಿತು. ಈಗ ಮತ್ತೆ ನಾವು ತೆಗೆದುಕೊಳ್ಳುತ್ತಿದ್ದೇವೆ. ಹ್ಯಾಂಡ್‌ಓವರ್ ಆಗಿದೆ. ನಾಳೆ ಹೇಳುತ್ತೇನೆ.

ಅಧ್ಯಕ್ಷರು:– ಇದರ ಬಗ್ಗೆ ನಾಳೆ ಹೇಳುತ್ತಾರೆ ಬಿಡಿ.

ಶ್ರೀ ಅರವಿಂದ್ ಚಂದ್ರಕಾಂತ್ ಬೆಲ್ಲದ್:– ಕಾರ್ಪೊರೇಷನ್ ಕೆರೆಗಳನ್ನು ಕೂಡ ಇದರಲ್ಲಿ ಸೇರಿಸಿಕೊಳ್ಳಬೇಕು. ಹುಬ್ಬಳ್ಳಿ – ಧಾರವಾಡ ಮಹಾನಗರಸಭೆ ಕೆರೆಗಳನ್ನು ಕೂಡ ಸೇರಿಸಿಕೊಳ್ಳಬೇಕು.

ಅಧ್ಯಕ್ಷರು:– ಇದನ್ನು ನಾಳೆಗೆ ತೆಗೆದುಕೊಳ್ಳೋಣ. ಈಗ ಅರಣ್ಯ ಇಲಾಖೆ ಬೇಡಿಕೆಯ ಮೇಲೆ ನಡೆದ ಚರ್ಚೆಗೆ ಮಾನ್ಯ ಅರಣ್ಯ ಸಚಿವರಿಂದ ಉತ್ತರ.

7. ವಿತ್ತೀಯ ಕಾರ್ಯಕಲಾಪಗಳು.

2014–15ನೇ ಸಾಲಿನ ಅರಣ್ಯ ಮತ್ತು ಪರಿಸರ ಜೀವಿಶಾಸ್ತ್ರ ಅನುದಾನ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಸರ್ಕಾರದ ಉತ್ತರ.

ಶ್ರೀ ಬಿ. ರಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):– ಮಾನ್ಯ ಅಧ್ಯಕ್ಷರೆ, ಇಲಾಖಾವಾರು ಚರ್ಚೆಯಿಂದ ಖಂಡಿತವಾಗಿ ನಮಗೆ ಬಹಳಷ್ಟು ಸಲಹೆಗಳನ್ನು ಪಡೆಯುವುದಕ್ಕೆ, ತಿಳುವಳಿಕೆ ಪಡೆಯುವುದಕ್ಕೆ ತುಂಬಾ ಅನುಕೂಲವಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ನಮಗೆ ಇಲಾಖೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುವು ಮಾಡಿಕೊಟ್ಟು ನಮ್ಮ ಕೆಲಸ ಕಾರ್ಯಗಳಿಗೆ ಹೆಚ್ಚು ಕ್ರಿಯಾತ್ಮಕವಾಗಿ ಕೆಲಸ ಮಾಡುವುದಕ್ಕೆ ಇದು ಅನುಕೂಲವೆಂದು ನಾನು ಭಾವಿಸಿದ್ದೇನೆ. ನಾನು ಕೂಡ ಗ್ರಾಮೀಣ ಭಾಗದ ರೈತ ಕುಟುಂಬದಿಂದ ಬಂದಿರತಕ್ಕಂಥವನು. ಶಾಸಕನಾಗಿ ಬರುವುದಕ್ಕೆ ಪೂರ್ವದಲ್ಲಿ ಪಿ.ಎಲ್.ಡಿ. ಬ್ಯಾಂಕ್‌ನ ಅಧ್ಯಕ್ಷನಾಗಿ ಆರು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಸಣ್ಣ ವಯಸ್ಸಿನಲ್ಲಿಯೇ ಸಾಮಾಜಿಕ ಬದುಕಿನಲ್ಲಿ ನನ್ನನ್ನು ನಾನು ತೊಡಗಿಸಿಕೊಂಡವನು. ಆದ್ದರಿಂದ ಯವುದೇ ಸಮಸ್ಯೆ ಇದ್ದರೂ